# ದಿನಾಂಕ:28-10-2013 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 01 (62)/2013-14

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಮಹಾಪೌರರ ಹುದ್ದೆಯು ಪ್ರತಿಷ್ಠಿತ ಹುದ್ದೆಯಾಗಿದ್ದು, ಸದರಿ ಹುದ್ದೆಯಲ್ಲಿ ಜವಾಬ್ದಾರಿಯುತವಾದ ಕೆಲಸ ಕಾರ್ಯಗಳನ್ನು ನಿರ್ವಹಿಸಬೇಕಾಗಿದ್ದು, ಪ್ರತಿನಿತ್ಯ ಸಾರ್ವಜನಿಕರಿಂದ ಬರುವ ದೂರುಗಳಿಗೆ, ಟೀಕೆ ಟಿಪ್ಪಣಿಗಳಿಗೆ ಅಲ್ಲದೇ ಪತ್ರಿಕಾ ಮಾಧ್ಯಮ ಮತ್ತು ದೃಶ್ಯ ಮಾಧ್ಯಮಗಳ ಟೀಕೆ ಟಿಪ್ಪಣಿಗಳಿಗೆ ಸ್ಪಂದಿಸುವ ಮೂಲಕ ಕೆಲಸ ನಿರ್ವಹಿಸಬೇಕಾಗಿರುವುದರಿಂದ ಒಬ್ಬ ನುರಿತ ಪತ್ರಿಕಾ ಕಾರ್ಯದರ್ಶಿಯವರ ಅವಶ್ಯಕತೆಯಿರುವುದಾಗಿ ಪೂಜ್ಯ ಮಹಾಪೌರರು ತಮ್ಮ ಟಿಪ್ಪಣಿಯಲ್ಲಿ ತಿಳಿಸಿರುತ್ತಾರೆ.

ಆದ್ದರಿಂದ, ಶ್ರೀ.ಕೆ.ಎಸ್.ನಾಗರಾಜ್, ನಂ.605, ಮೊದಲ ಮಹಡಿ, 10ನೇ 'ಎ' ಮುಖ್ಯರಸ್ತೆ, 3ನೇ ವಿಭಾಗ, 4ನೇ ಹಂತ, ಬಸವೇಶ್ವರ ನಗರ, ಬೆಂಗಳೂರು-79 ಇವರು ಪತ್ರಿಕಾ ಮತ್ತು ಟಿ.ವಿ. ಮಾಧ್ಯಮಗಳ ಕಾರ್ಯಚಟುವಟಿಕೆಯಲ್ಲಿ ಒಳ್ಳೆಯ ಅನುಭವ ಹೊಂದಿರುವುದರಿಂದ, ಸದರಿಯವರನ್ನು ಸಂಚಿತ ವೇತನದ ಆಧಾರದ ಮೇಲೆ ಪೂಜ್ಯ ಮಹಾಪೌರರ ಪತ್ರಿಕಾ ಕಾರ್ಯದರ್ಶಿಯನ್ನಾಗಿ ನಿಯೋಜಿಸಿಕೊಳ್ಳಲು ಹಾಗೂ ಕೆ.ಎಂ.ಸಿ ನಿಯಮಗಳ ನಿಯಮ 20(ಬಿ) ರ ಅಡಿಯಲ್ಲಿ ಮಾಸಿಕ ರೂ.15,000/-ಗಳ ಹಣ ಪಾವತಿಸಲು ಕ್ರಮ ತೆಗೆದುಕೊಳ್ಳಲು ಕೋರಿರುತ್ತಾರೆ.

ಈ ಸಂಬಂಧವಾಗಿ, ಈ ಹಿಂದೆ ಶ್ರೀ.ರಾಘವೇಂದ್ರ ಇವರನ್ನು ದಿನಾಂಕ:06-07-2011 ರ ಕಾನೂನು ಕೋಶದ ಮುಖ್ಯಸ್ಥರ ವರದಿಯನ್ವಯ 1977ರ ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ ನಿಯಮಾವಳಿಗಳ ನಿಯಮ-20(ಬಿ) ರನ್ವಯ ಪೂಜ್ಯ ಮಹಾಪೌರರ ಪತ್ರಿಕಾ ಕಾರ್ಯದರ್ಶಿಯನ್ನಾಗಿ ನೇಮಕ ಮಾಡಿಕೊಳ್ಳುವ ಬಗ್ಗೆ ಸರ್ಕಾರದ ಪೂರ್ವಾನುಮತಿ ಪಡೆದ ನಂತರ ಸದರಿಯವರನ್ನು ನಿಯಮಾನುಸಾರ ಸಂಚಿತ ವೇತನದ ಮೇಲೆ ನೇಮಿಸಿಕೊಳ್ಳಬಹುದು ಎಂದು ಅಭಿಪ್ರಾಯಿಸಿರುತ್ತಾರೆ.

ಆದ್ದರಿಂದ, ಶ್ರೀ.ಕೆ.ಎಸ್.ನಾಗರಾಜ್, ಪೂಜ್ಯ ಮಹಾಪೌರರ ಪತ್ರಿಕಾ ಕಾರ್ಯದರ್ಶಿಯನ್ನಾಗಿ ದಿನಾಂಕ: 24-05-2012 ರಿಂದ ಏಪ್ರಿಲ್-2013 ರವರೆಗೆ ನಿಯೋಜಿಸಿಕೊಳ್ಳಲು ಹಾಗೂ ಕೆ.ಎಂ.ಸಿ ನಿಯಮಗಳ ನಿಯಮ 20(ಬಿ) ರ ಅಡಿಯಲ್ಲಿ ಮಾಸಿಕ ಸಂಚಿತ ವೇತನ ರೂ.15,000/- ಗಳಿಗೆ ಪಾವತಿಸಿ ನಿಯೋಜಿಸುವ ಬಗ್ಗೆ ಸರ್ಕಾರದ ಘಟನೋತ್ತರ ಅನುಮೋದನೆ ಕೋರಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:11-03-2013ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ: 23-09-2013ರ ನಿರ್ಣಯ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:23-09-2013ರ ನಿರ್ಣಯವನ್ನು ಒಪ್ಪುವುದು".

ಶ್ರೀ. ಬಿ.ಆರ್.ನಂಜುಂಡಪ್ಪ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

......................2

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ</u>: "ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:23–09–2013ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

(ಬಿ.ಎಸ್.ಸತ್ಯನಾರಾಯಣ)
ಮಹಾಪೌರರು

# ದಿನಾಂಕ:28-10-2013 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 04 (17)/2013-14

ಟಿಪ್ಪಣಿಯಲ್ಲಿ ವಿವರಿಸುವಂತೆ, ದಿನಾಂಕ:29-09-2012 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಕೌನ್ಸಿಲ್ ಸಭೆಯ ವಿಷಯದ ಸಂಖ್ಯೆ:259/2012-13ರ ನಿರ್ಣಯದಲ್ಲಿ ಜಾಹೀರಾತು ಏಜೆನ್ಸಿದಾರರು ಸಲ್ಲಿಸಿರುವ ಮನವಿಯನ್ನು ಪರಿಗಣಿಸಿ ಹೊಸದಾಗಿ ವಾಣಿಜ್ಯ ಜಾಹೀರಾತು ಫಲಕಗಳಿಗಾಗಿ ಮನವಿ ಸಲ್ಲಿಸಿರುವ ಏಜೆನ್ಸಿದಾರರ ಜಾಹೀರಾತು ಫಲಕಗಳಿಗೆ ಅನುಮತಿ ನೀಡಿದಲ್ಲಿ ಪಾಲಿಕೆಗೆ ಜಾಹೀರಾತು ತೆರಿಗೆಯ ರೂಪದಲ್ಲಿ ಸುಮಾರು ರೂ.25.00 ಕೋಟಿಗಳವರೆಗೆ ಆದಾಯ ನಿರೀಕ್ಷಿಸಬಹುದಾಗಿದೆ. ಇದರಿಂದ ಅನಧಿಕೃತ ಜಾಹೀರಾತು ಫಲಕಗಳನ್ನು ತಡೆಗಟ್ಟಬಹುದಾಗಿದೆ ಹಾಗೂ ಘನ ಸರ್ಕಾರವು ಸಹ ಆಯವ್ಯಯ ಅನುಮೋದನೆಯ ಸಂದರ್ಭದಲ್ಲಿ ಪಾಲಿಕೆಯು ಆರ್ಥಿಕ ಸಬಲತೆಯನ್ನು ಸಾಧಿಸಲು ತನ್ನಲ್ಲಿಯೇ ಆದಾಯವನ್ನು ಹೆಚ್ಚಿಸಲು ಕ್ರಮ ಕೈಗೊಳ್ಳಬೇಕೆಂದು ಸೂಚಿಸಿರುತ್ತದೆ. ಪಾಲಿಕೆಯ ವಿಷಯದ ಸಂಖ್ಯೆ:05(340)/11-12, ದಿನಾಂಕ:03-03-2012 ರಲ್ಲಿ ಜಾಹೀರಾತು ಬೈಲಾ ನಿಬಂಧನೆಗಳನ್ನು ಹೊರತಂದು ಸರ್ಕಾರದ ಅನುಮೋದನೆ ನಿರೀಕ್ಷಿಸಲಾಗಿದೆ. ಈ ಎಲ್ಲಾ ಅಂಶಗಳನ್ನು ಪರಿಗಣಿಸಿ ನಗರ ಪಾಲಿಕೆಯ ಆರ್ಥಿಕ ಹಿತದೃಷ್ಟಿಯಿಂದ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯವರು ಈಗಾಗಲೇ ನಿರ್ಧರಿಸಿರುವ ದರಗಳಂತೆ ಜಾಹೀರಾತು ಶುಲ್ಕವನ್ನು ವಿಧಿಸಿ ಜಾಹೀರಾತು ಸಂಸ್ಥೆಯವರು ಕೋರಿರುವ 525 ಸ್ಥಳಗಳಲ್ಲಿ ವಾಣಿಜ್ಯ ಜಾಹೀರಾತು ಫಲಕಗಳನ್ನು ಅಳವಡಿಸಿಕೊಳ್ಳಲು ಅನುಮತಿಯನ್ನು ನೀಡುವುದು ಮತ್ತು ಇನ್ನು ಮುಂದೆ ಜಾಹೀರಾತು ಫಲಕಗಳನ್ನು ಅಳವಡಿಸಲು ಜಾಹೀರಾತು ಸಂಸ್ಥೆಗಳಿಂದ ಅರ್ಜಿಗಳು/ಮನವಿಗಳು ಬಂದಲ್ಲಿ ಸದರಿ ಅರ್ಜಿ/ಮನವಿಗಳನ್ನು ಅನುಮತಿಗಾಗಿ ಸ್ಥಾಯಿ ಸಮಿತಿ/ಕೌನ್ಸಿಲ್ ಸಭೆಯ ಮುಂದೆ ಮಂಡಿಸುವುದೆಂದು ಸಭೆಯು ತೀರ್ಮಾನಿಸಲಾಗಿದೆ.

ಆದರೆ, ದಿನಾಂಕ:17-03-2012 ರಂದು ಸರ್ಕಾರಕ್ಕೆ ಹೊಸ ಜಾಹೀರಾತು ನೀತಿ ಅಳವಡಿಸಿಕೊಳ್ಳಲು ಸಲ್ಲಿಸಿರುವ ಪ್ರಸ್ತಾವನೆ ಇನ್ನು ಅನುಮೋದನೆಯಾಗಿರುವುದಿಲ್ಲ ಹಾಗೂ ಹೊಸದಾಗಿ ಜಾಹೀರಾತು ಫಲಕಗಳನ್ನು ಅಳವಡಿಸಲು ಅನುಮತಿ ನೀಡಲು ಕೆ.ಟಿ.ಪಿ.ಪಿ. ಕಾಯ್ದೆ/ನಿಯಮಗಳನ್ನು ಅನುಸರಿಸಬೇಕಾಗಿರುತ್ತದೆ. ಈ ಕಾರಣಗಳಿಂದ ಹೊಸದಾಗಿ 525 ವಾಣಿಜ್ಯ ಜಾಹೀರಾತು ಫಲಕಗಳನ್ನು ಅಳವಡಿಸಲು ಅನುಮತಿ ನೀಡಲು ತೀರ್ಮಾನಿಸಿರುವುದು ನಗರ ಪಾಲಿಕೆಗೆ ಆರ್ಥಿಕ ನಷ್ಟ ಉಂಟಾಗುವ ಸಂಭವವಿರುವ ಹಿನ್ನಲೆಯಲ್ಲಿ ದಿನಾಂಕ: 29-09-2012ರ ನಗರ ಪಾಲಿಕೆಯ ನಿರ್ಣಯವನ್ನು ಕೆ.ಎಂ.ಸಿ. ಕಾಯ್ದೆ 1976 ಕಲಂ 98 ರಂತೆ ರದ್ದುಪಡಿಸುವಂತೆ ಸರ್ಕಾರಕ್ಕೆ ದಿನಾಂಕ:03-04-2013 ರಂದು ಪತ್ರ ಮುಖೇನ ಕೋರಲಾಗಿತ್ತು.

ಸರ್ಕಾರವು ದಿನಾಂಕ:29-09-2012ರ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ ಸಂಖ್ಯೆ:259/2012-13 ರಲ್ಲಿ ತೆಗೆದುಕೊಂಡಿರುವ ನಿರ್ಣಯವನ್ನು ಏಕೆ ರದ್ದುಗೊಳಿಸಬಾರದು? ಎಂಬ ಬಗ್ಗೆ ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ ಕಾಯ್ದೆ 1976ರ ಕಲಂ 98(2) ರನ್ವಯ ಈ ಕಾರಣ ಕೇಳುವ ನೋಟೀಸನ್ನು ಜಾರಿ ಮಾಡಲಾಗಿದೆ. ಈ ನಿರ್ಣಯವನ್ನು ರದ್ದುಪಡಿಸುವ ಬಗ್ಗೆ ಪಾಲಿಕೆಯ ಕೌನ್ಸಿಲ್‌ನ ಹೇಳಿಕೆ/ಸಮಜಾಯಿಷಿಗಳೇನಾದರೂ ಇದ್ದಲ್ಲಿ ಈ ನೋಟೀಸ್ ತಲುಪಿದ 15 (ಹದಿನೈದು) ದಿನಗಳೊಳಗಾಗಿ ಸರ್ಕಾರಕ್ಕೆ ಲಿಖಿತವಾಗಿ ಕಳಹಿಸಿಕೊಡುವಂತೆ ಸೂಚಿಸಿರುತ್ತಾರೆ.

ಒಂದು ವೇಳೆ ನಿಗಧಿತ ಸಮಯದೊಳಗೆ ಯಾವುದೇ ಹೇಳಿಕೆ/ಸಮಜಾಯಿಷಿ ಬಾರದೇ ಇದ್ದಲ್ಲಿ ವಿಷಯದ ಬಗ್ಗೆ ನಿಯಮಾನುಸಾರ ಪರಿಶೀಲಿಸಿ, ಏಕಪಕ್ಷೀಯವಾಗಿ ಮುಂದಿನ ತೀರ್ಮಾನವನ್ನು ಕೈಗೊಳ್ಳಲಾಗುವುದು ಎಂದು ಸೂಚಿಸಿರುವ ಮೇರೆಗೆ ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ ಕಾಯ್ದೆ 1976ರ ಕಲಂ 98(2) ರನ್ವಯ ಈ ಕಾರಣ ಕೇಳುವ ನೋಟೀಸ್‌ಗೆ ಹೇಳಿಕೆ/ಸಮಜಾಯಿಷಿಯನ್ನು ನೀಡುವ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:20-07-2013ರ ಟಿಪ್ಪಣಿ.

.....................2

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಸರ್ಕಾರವು ಕೈಗೊಳ್ಳುವ ನಿರ್ಣಯಕ್ಕೆ ಬದ್ಧವಾಗಿರುವುದು".

ಶ್ರೀ. ಬಿ.ಆರ್.ನಂಜುಂಡಪ್ಪ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ಸರ್ಕಾರವು ಕೈಗೊಳ್ಳುವ ನಿರ್ಣಯಕ್ಕೆ ಬದ್ಧವಾಗಿರುವುದೆಂದು ಸಭೆಯು ತೀರ್ಮಾನಿಸಲಾಯಿತು".

(ಬಿ.ಎಸ್.ಸತ್ಯನಾರಾಯಣ)
ಮಹಾಪೌರರು

# ದಿನಾಂಕ:28-10-2013 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 05 (64)/2013-14

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಎಲ್ಲಾ ವಾರ್ಡ್‌ಗಳಲ್ಲಿ ಬಸ್ ತಂಗುದಾಣಗಳಿಲ್ಲದೆ ಮಳೆಗಾಲ ಹಾಗೂ ಬೇಸಿಗೆ ಕಾಲದಲ್ಲಿ ಸಾರ್ವಜನಿಕರು ತೊಂದರೆ ಅನುಭವಿಸುತ್ತಿರುವುದನ್ನು ಗಮನಿಸಿ, ಮಾನ್ಯ ಪಾಲಿಕೆಯ ಸದಸ್ಯರುಗಳು ಬಸ್ ತಂಗುದಾಣ ನಿರ್ಮಾಣ ಮಾಡಿ ಕೊಡುವಂತೆ ಕೋರಿ ಮನವಿ ಸಲ್ಲಿಸಿರುವ ಬಸ್ ನಿಲುಗಡೆಯ ಸ್ಥಳಗಳನ್ನು ಪಾಲಿಕೆಯ ಸದಸ್ಯರುಗಳು, ಬಿ.ಬಿ.ಎಂ.ಪಿ ಅಧಿಕಾರಿಗಳು, ಸಂಚಾರಿ ಪೋಲಿಸ್ ಅಧಿಕಾರಿಗಳು ಮತ್ತು ಬಿ.ಎಂ.ಟಿ.ಸಿ ಅಧಿಕಾರಿಗಳೊಂದಿಗೆ ಜಂಟಿ ಸಮೀಕ್ಷೆ ನಡೆಸಿ ಬಸ್ ತಂಗುದಾಣವನ್ನು ನಿರ್ಮಿಸಲು ಹಾಗೂ ವೃತ್ತಗಳನ್ನು ಅಭಿವೃದ್ಧಿಪಡಿಸಬೇಕಾಗಿರುವುದು ತುಂಬಾ ಅವಶ್ಯಕವಾಗಿದ್ದು, ಸಲ್ಲಿಸಿರುವ ಬಸ್ ನಿಲುಗಡೆಯ ಸ್ಥಳಗಳ ಹಾಗೂ ಅಭಿವೃದ್ಧಿ ಪಡಿಸಬೇಕಾಗಿರುವ ವೃತ್ತಗಳ ವಿವರಗಳು ಈ ಕೆಳಕಂಡಂತೆ ಇದ್ದು, ಸದರಿ ಬಸ್ ತಂಗುದಾಣ ನಿರ್ಮಾಣ ಹಾಗೂ ವೃತ್ತಗಳನ್ನು ಅಭಿವೃದ್ಧಿಪಡಿಸುವುದು ಸಾರ್ವಜನಿಕರ ಹಿತದೃಷ್ಟಿಯಿಂದ ಮತ್ತು ನಗರದ ಸೌಂದರ್ಯದ ಹಿತದೃಷ್ಟಿಯಿಂದ ತುಂಬಾ ಅವಶ್ಯಕತೆಯಿದ್ದು, ಈ ಕುರಿತು ಕೂಡಲೇ ಕ್ರಮವಹಿಸಲು ಅಭಿಪ್ರಾಯಿಸಲಾಗಿರುತ್ತದೆ.

| ಕ್ರ ಸಂ | ಪಾಲಿಕೆಯ ವಾರ್ಡ್ ಸಂಖ್ಯೆ ಮತ್ತು ಸದಸ್ಯರ ಹೆಸರು | ನಿರ್ಮಿಸಬೇಕಾಗಿರುವ ಬಸ್ ತಂಗುದಾಣ ಹಾಗೂ ಅಭಿವೃದ್ಧಿಪಡಿಸಬೇಕಾಗಿರುವ ವೃತ್ತಗಳ ವಿವರ | ಒಟ್ಟು |
|---|---|---|---|
| 1 | ಶ್ರೀ. ಕೆ. ದೊಡ್ಡಣ್ಣ, ವಾರ್ಡ್ ಸಂಖ್ಯೆ: 132, ಅತ್ತಿಗುಪ್ಪೆ. | ಚಂದ್ರ ಬಡಾವಣೆ ಮುಖ್ಯರಸ್ತೆಯ ಉತ್ತರದ ಕಡೆ ನಾಗರಬಾವಿ ಕಡೆಯಿಂದ ಚಲಿಸುವ ಬಸ್ ನಿಲುಗಡೆಗೆ ರಸ್ತೆ ಅಗಲೀಕರಣ/ ಬಸ್ ಬೇ ನಿರ್ಮಾಣ ಮಾಡಿದ್ದು, 3 ಬಸ್ ತಂಗುದಾಣ ನಿರ್ಮಾಣ.<br>ಚಂದ್ರಾ ಬಡಾವಣೆ ವೃತ್ತದಲ್ಲಿ 1 ಬಸ್ ತಂಗುದಾಣ ನಿರ್ಮಾಣ.<br>ಅತ್ತಿಗುಪ್ಪೆ ಸ್ಕೂಲ್ ಮುಂಭಾಗದಲ್ಲಿ 2 ಬಸ್ ತಂಗುದಾಣ.<br>ಪಶ್ಚಿಮ ಕಾರ್ಡ್ ರಸ್ತೆ, ಮಾರುತಿ ಟೂರಿಂಗ್ ಟಾಕೀಸ್ ಮುಂಭಾಗ ಮೆಟ್ರೋ ಲಿಂಕ್ ಬಸ್ ನಿಲ್ದಾಣದಲ್ಲಿ 3 ಬಸ್ ತಂಗುದಾಣ | 9 ಬಸ್ ತಂಗುದಾಣ |
| 2 | ಶ್ರೀ ಡಾ॥ ಎಸ್. ರಾಜು. ವಾರ್ಡ್ ಸಂಖ್ಯೆ:124 ಹೊಸಹಳ್ಳಿ. | 5ನೇ ಮುಖ್ಯರಸ್ತೆ, ವಿಜಯನಗರ ಎರಡನೇ ಹಂತ 1<br>ಕುವೆಂಪು ಸರ್ಕಲ್ ಬಳಿ 1<br>ರಮೇಶ್ ಬಾಬು ವೃತ್ತದ ಬಳಿ 1<br>ವಿಯಜನಗರ ಬಸ್‌ನಿಲ್ದಾಣದ ಬಳಿ ಬಸ್ ತಂಗುದಾಣಗಳನ್ನು ನಿರ್ಮಾಣ 1 | 4 ಬಸ್ ತಂಗುದಾಣ |
| 3 | ಶ್ರೀ ಚಂದ್ರಶೇಖರ್ ರಾಜು ವಾರ್ಡ್ ಸಂಖ್ಯೆ:177, ಜೆ.ಪಿ.ನಗರ | ಜೆ.ಪಿ ನಗರ 24ನೇ ಮುಖ್ಯರಸ್ತೆ, ಮಾರೇನಹಳ್ಳಿ ಬಸ್ ನಿಲ್ದಾಣ 1<br>ಜೆ.ಪಿ. ನಗರ 3ನೇ ಹಂತ, 8ನೇ ಮುಖ್ಯ ರಸ್ತೆಯ ಎರಡೂ ಬದಿ ಬಸ್ ನಿಲ್ದಾಣಗಳು 2<br>ಜಯನಗರ ಸೌತ್ ಎಂಡ್ ಶ್ರೀ ಶನಿಮಹಾತ್ಮ ದೇವಸ್ಥಾನದ ಎರಡೂ ಬದಿಗಳಲ್ಲಿ 2<br>ರಾಗಿ ಗುಡ್ಡ ಬಸ್ ನಿಲ್ದಾಣ, 46ನೇ ಕ್ರಾಸ್ ಜಯನಗರ, 1<br>ಜೆ.ಪಿ.ನಗರ 4ನೇ ಹಂತ (ರಿಂಗ್ ರಸ್ತೆ) ಬಸ್ ನಿಲ್ದಾಣ 1 | 7 ಬಸ್ ತಂಗುದಾಣ |
| 4 | ಶ್ರೀಮತಿ ಎಸ್ ಲಲಿತಾ ವಾರ್ಡ್ ಸಂಖ್ಯೆ: 162, ಗಿರಿನಗರ, | 50 ಅಡಿ ರಸ್ತೆಯಲ್ಲಿರುವ 17ನೇ ಮುಖ್ಯರಸ್ತೆ ಮುನೇಶ್ವರ ಬ್ಲಾಕ್‌ನಲ್ಲಿ 1<br>80 ಅಡಿ ರಸ್ತೆಯಲ್ಲಿರುವ ನೆಹರು ವೃತ್ತದಲ್ಲಿ 1<br>ಗಿರಿನಗರದ 80 ಅಡಿ ರಸ್ತೆಯಲ್ಲಿರುವ 36 ಬಿ ಬಸ್ ತಂಗುದಾಣ 1<br>100 ಅಡಿ ವರ್ತುಲ ರಸ್ತೆಯ 80 ಅಡಿ ಮುಖ್ಯರಸ್ತೆ ಜಂಕ್ಷನ್‌ಲ್ಲಿ ಬಸ್ ತಂಗುದಾಣ. 1<br>ಹೊಸಕೆರೆಹಳ್ಳಿ ಕ್ರಾಸ್ ನಂಜುಂಡೇಶ್ವರ ಸ್ಟೋರ್ಸ್ ಹತ್ತಿರ ಬಸ್ ತಂಗುದಾಣ ಅಭಿವೃದ್ಧಿ 1 | 6 ಬಸ್ ತಂಗುದಾಣ ನಿರ್ಮಿಸುವುದು<br>2 ಬಸ್ ತಂಗುದಾಣ ಅಭಿವೃದ್ಧಿ<br>5 ವೃತ್ತಗಳ ಅಭಿವೃದ್ಧಿ |

| | | | |
|---|---|---|---|
| | | 80 ಅಡಿ ಮುಖ್ಯರಸ್ತೆಯ ಹೊಸಕೆರೆಹಳ್ಳಿ ಕ್ರಾಸ್ ಜಂಕ್ಷನ್‌ಲ್ಲಿ 1<br>80 ಅಡಿ ಮುಖ್ಯರಸ್ತೆಯ ಶ್ರೀನಿವಾಸನಗರ 14ನೇ ಮುಖ್ಯರಸ್ತೆಯಲ್ಲಿ 1<br>80 ಅಡಿ ಮುಖ್ಯರಸ್ತೆಯ ಸೀತಾ ವೃತ್ತ ಹತ್ತಿರ ಇರುವ ಬಸ್ ತಂಗುದಾಣ ಅಭಿವೃದ್ಧಿ 1<br>80- ಅಡಿ ಮುಖ್ಯರಸ್ತೆಯ ಹೊಸಕೆರೆಹಳ್ಳಿ ಕ್ರಾಸ್ ಜಂಕ್ಷನ್‌ನಲ್ಲಿ ವೃತ್ತ ಅಭಿವೃದ್ಧಿ ಕಾಮಗಾರಿ<br>80 ಅಡಿ ಮುಖ್ಯರಸ್ತೆಯ ಸೀತಾ ವೃತ್ತ ಅಭಿವೃದ್ಧಿ.<br>80 ಅಡಿ ರಸ್ತೆಯಲ್ಲಿರುವ ನೆಹರು ವೃತ್ತ ಅಭಿವೃದ್ಧಿ.<br>50 ಅಡಿ ರಸ್ತೆಯಲ್ಲಿರುವ ವಿಶ್ವೇಶ್ವರಯ್ಯ ಉದ್ಯಾನವನದ ಹತ್ತಿರ ಇರುವ ವೃತ್ತ ಅಭಿವೃದ್ಧಿ.<br>ಗಿರಿನಗರ 1ನೇ ಹಂತದಲ್ಲಿರುವ ಸ್ವಾಮಿ ವಿವೇಕಾನಂದ ವೃತ್ತ ಅಭಿವೃದ್ಧಿ. | |
| 5 | ಶ್ರೀ. ವಿ. ಆನಂದ್. ವಾರ್ಡ್ ಸಂಖ್ಯೆ:20, ಗಂಗಾನಗರ | ಗಂಗಾನಗರ ವ್ಯಾಪ್ತಿಯಲ್ಲಿ ಬರುವ ಅಶ್ವಥ್ ನಗರ ಬಸ್ ನಿಲ್ದಾಣಕ್ಕೆ ತಂಗುದಾಣ ನಿರ್ಮಿಸುವುದು. | 1 ಬಸ್ ತಂಗುದಾಣ ನಿರ್ಮಿಸುವುದು |
| 6 | ಶ್ರೀ ವಾಗೀಶ್, ವಾರ್ಡ್ ಸಂಖ್ಯೆ:126 ಮಾರುತಿ ಮಂದಿರ | ವಿನಾಯಕ ಲೇಔಟ್ ಮುಖ್ಯ ರಸ್ತೆಯ ಬಸ್ ನಿಲ್ದಾಣದಲ್ಲಿ ಬಸ್ ಶೆಲ್ಟರ್ ನಿರ್ಮಿಸುವುದು<br>ನಾಗರಬಾವಿ ಮುಖ್ಯ ರಸ್ತೆಯ, ಎಂ.ಇ.ಎಸ್ ಶಾಲೆಯ ಹತ್ತಿರ ಬಸ್ ಶೆಲ್ಟರ್‌ಗಳನ್ನು ನಿರ್ಮಿಸುವುದು | 2 ಬಸ್ ಶೆಲ್ಟರ್‌ಗಳನ್ನು ನಿರ್ಮಿಸುವುದು |
| 7 | ಶ್ರೀ ಅಶ್ವಥ್ ನಾರಾಯಣ, ವಾರ್ಡ್ ಸಂಖ್ಯೆ:139 ಕೆ.ಆರ್. ಮಾರುಕಟ್ಟೆ. | ಕೆ.ಆರ್. ಮಾರುಕಟ್ಟೆ ವ್ಯಾಪ್ತಿಯ ವಿಕ್ಟೋರಿಯಾ ಆಸ್ಪತ್ರೆ ಎದುರು, ಸುಲ್ತಾನ ರಸ್ತೆ ಸಂತ ತೆರೆಸಾ ಶಾಲೆಯ ಎದುರು, ಕಾಟನ್ ಪೇಟೆ ಸೂಪರ್ ಟಾಕೀಸ್ ಎದುರು ಹಾಗೂ ಕೆಂ.ಬಸ್ ನಿಲ್ದಾಣದಿಂದ ಜಯನಗರ ಕಡೆ ತೆರಳುವ ವಾಹನಗಳಿಗೆ ಬಸ್ ತಂಗುದಾಣಗಳನ್ನು ನಿರ್ಮಿಸುವುದು<br>ಸುಲ್ತಾನ ರಸ್ತೆ ಸಂತ ತೆರೆಸಾ ಶಾಲೆ, ಟಿ.ಸಿ.ಎಂ. ರಾಯನ್ ರಸ್ತೆ, ಕಾಲಭೈರವೇಶ್ವರ ಹಾಸ್ಟೆಲ್ ಮುಂದು, ಹಾಗೂ ಕಾಟನ್ ಪೇಟೆ ಮುಖ್ಯ ರಸ್ತೆಯ ಸಿ.ಸಿ.ಬಿ ಕಛೇರಿ ಬಳಿ ಪಾದಚಾರಿಗಳು ರಸ್ತೆ ದಾಟಲು (Elevated pedestrian crossing) ಗಳನ್ನು ಹಾಗೂ ಎಚ್ಚರಿಕೆ ದೀಪಗಳನ್ನು ಅಳವಡಿಸುವುದು. | 6 ಬಸ್ ತಂಗುದಾಣ ನಿರ್ಮಿಸುವುದು<br>4 Elevated pedestrian crossing ಗಳನ್ನು ಹಾಗೂ ಎಚ್ಚರಿಕೆ ದೀಪಗಳನ್ನು ಅಳವಡಿಸುವುದು |
| 8 | ಶ್ರೀ ಸಿ.ಎಸ್. ರಾಧಾಕೃಷ್ಣ ವಾರ್ಡ್ ಸಂಖ್ಯೆ: 137 ಜೆ.ಜೆ.ಆರ್.ನಗರ | ಜೆ.ಜೆ.ಆರ್ ನಗರದ ಶಿಥಿಲಗೊಂಡಿರುವ ಬಸ್ ನಿಲ್ದಾಣವನ್ನು ಅಭಿವೃದ್ಧಿಪಡಿಸುವುದು ಹಾಗೂ. ಸದರಿ ವೃತ್ತವನ್ನು ಅಭಿವೃದ್ಧಿಪಡಿಸುವುದು. | 1 ಬಸ್ ತಂಗುದಾಣ ಅಭಿವೃದ್ಧಿ ಮತ್ತು 1 ವೃತ್ತ ಅಭಿವೃದ್ಧಿ. |
| 9 | ಶ್ರೀಮತಿ ಶಕುಂತಲ ದೊಡ್ಡಲಕ್ಕಪ್ಪ ವಾರ್ಡ್ ಸಂಖ್ಯೆ: 125, ಮಾರೇನಹಳ್ಳಿ | ಸರಸ್ವತಿ ನಗರ ಬಸ್ ನಿಲ್ದಾಣ<br>ಮಾರುತಿ ಮಂದಿರ ಬಸ್ ನಿಲ್ದಾಣ<br>ಅಮರಜ್ಯೋತಿ ನಗರ ಬಸ್ ನಿಲ್ದಾಣ<br>ಮಾರೇನಹಳ್ಳಿ ಬಸ್ ನಿಲ್ದಾಣ | 4 ಬಸ್ ನಿಲ್ದಾಣ ನಿರ್ಮಿಸುವುದು. |
| 10 | ಶ್ರೀಮತಿ ಶಶಿಕಲಾ ಕೃಷ್ಣೆಗೌಡ. ವಾರ್ಡ್ ಸಂಖ್ಯೆ:66 ಸುಬ್ರಮಣ್ಯಾ ನಗರ | ರಾಜ್‌ಕುಮಾರ್ ರಸ್ತೆ ಮನೆ ಸಂಖ್ಯೆ: 542/19 ರ ಮುಂಭಾಗ ಬಸ್ ತಂಗುದಾಣ.<br>ಸುಬ್ರಮಣ್ಯಪುರ ಮುಖ್ಯರಸ್ತೆಯ ವಿಶ್ವೇಶ್ವರಯ್ಯ ಕೋ-ಆಪರೇಟಿವ ಬ್ಯಾಂಕ್ ಮುಂಭಾಗ ಬಸ್ ತಂಗುದಾಣ<br>ರೆಲ್ವೆ ಸಮಾನಾಂತರ ರಸ್ತೆಯಲ್ಲಿನ ಬಿ. ಬ್ಲಾಕ್ ರಾಜ್‌ಕುಮಾರ್ ಪ್ರತಿಮೆಯ ಮುಂಭಾಗ ಬಸ್ ತಂಗುದಾಣ (ಹಳೆಯದನ್ನು ತೆರವುಗೊಳಿಸಿ)<br>ಸುಬ್ರಮಣ್ಯನಗರ ಮುಖ್ಯರಸ್ತೆಯ ಹಳೇ ಕೆನರಾಬ್ಯಾಂಕ್ ಮುಂಭಾಗ (ಹಳೆಯದನ್ನು ತೆರವುಗೊಳಿಸಿ)<br>ರಾಜ್‌ಕುಮಾರ್ ರಸ್ತೆಯ ವಿವೇಕಾನಂದ ವಿದ್ಯಾಸಂಸ್ಥೆಯ ಹತ್ತಿರ (ಹಳೆಯದನ್ನು ತೆರವುಗೊಳಿಸಿ)<br>ಗಾಯತ್ರಿನಗರ ಮುಖ್ಯರಸ್ತೆಯ ಶ್ರೀ ಕೋದಂಡರಾಮ ಮಂದಿರದ ಹತ್ತಿರ ಬಸ್ ತಂಗುದಾಣ.<br>ಮಿಲ್ಕ ಕಾಲೋನಿಯ ರೆನೆಸನ್ಸ್ ಪಾರ್ಕ್ ಅಪಾರ್ಟ್‌ಮೆಂಟ್ ಹತ್ತಿರ (ಹಳೆಯದನ್ನು ತೆರವುಗೊಳಿಸಿ) | 7 ಬಸ್ ತಂಗುದಾಣ ನಿರ್ಮಿಸುವುದು. |

| | | | |
|---|---|---|---|
| 11 | ಶ್ರೀಮತಿ ರೇಖಾ ಕದಿರೇಶ್ ವಾರ್ಡ್ ಸಂಖ್ಯೆ: 138. ಚಲುವಾದಿಪಾಳ್ಯ | ಬಾಳೆಕಾಯಿ ಮಂಡಿ ಟ್ಯಾಂಕ್ ಬಂಡ್ ರಸ್ತೆಯಲ್ಲಿನ ಬಸ್ ತಂಗುದಾಣ ಅಭಿವೃದ್ಧಿಪಡಿಸುವುದು<br>ಸಿರ್ಸಿ ವೃತ್ತದಲ್ಲಿನ ಬಸ್ ತಂಗುದಾಣವನ್ನು ಅಭಿವೃದ್ಧಿಪಡಿಸುವುದು<br>ಪಶು ವೈದ್ಯ ಆಸ್ಪತ್ರೆ ಹತ್ತಿರ, ಮೈಸೂರು ರಸ್ತೆ ಬಸ್ ತಂಗುದಾಣ ಅಭಿವೃದ್ಧಿಪಡಿಸುವುದು<br>ಟಿ.ಸಿ.ಎಂ.ರಾಯನ್ ರಸ್ತೆ, ಬಸ್ ತಂಗುದಾಣ ಅಭಿವೃದ್ಧಿಪಡಿಸುವುದು | 4 ಬಸ್ ತಂಗುದಾಣಗಳನ್ನು ಅಭಿವೃದ್ಧಿ ಪಡಿಸುವುದು. |
| 12 | ಶ್ರೀ ಕೆ. ಲತಾ ನರಸಿಂಹ ಮೂರ್ತಿ ವಾರ್ಡ್ ಸಂಖ್ಯೆ: 174. ಹೆಚ್.ಎಸ್.ಆರ್. ಬಡಾವಣೆ. | ಅಗರ ದಲ್ಲಿ 2<br>ಇಬ್ಬಲೂರು 2<br>ಮಂತ್ರಿ ಅಪಾರ್ಟ್‌ಮೆಂಟ್ ರಿಂಗ್ ರಸ್ತೆ 1<br>ಪರಂಗಿಪಾಳ್ಯ 1<br>ಸೋಮಸಂದ್ರ ಪಾಳ್ಯದ ಕೆ.ಇ.ಬಿ ಪವರ್ ಸ್ಟೇಷನ್ ಹತ್ತಿರ 1<br>19ನೇ ಮುಖ್ಯ ರಸ್ತೆ 17ನೇ ಅಡ್ಡ ರಸ್ತೆಯ ನಂದಿನಿ ಕೂಲ್ ಜಾಯಿಂಟ್ ಹತ್ತಿರ ಬಸ್ ತಂಗುದಾಣ ನಿರ್ಮಾಣ ಹಾಗೂ ಸದರಿ ವೃತ್ತದ ಅಭಿವೃದ್ಧಿ | 8 ಬಸ್ ತಂಗುದಾಣ ನಿರ್ಮಾಣ ಹಾಗೂ ವೃತ್ತಗಳ ಅಭಿವೃದ್ಧಿ ಪಡಿಸುವುದು. |
| 13 | ಶ್ರೀ ಮುನಿಸ್ವಾಮಿಗೌಡ ವಾರ್ಡ್ ಸಂಖ್ಯೆ:36 ಮತ್ತಿಕೆರೆ | ನ್ಯೂ. ಬಿ.ಎಲ್ ರಸ್ತೆಯಲ್ಲಿ ಗೌರಿ ಅಪಾರ್ಟಮೆಂಟ್ ಎರಡು ಬದಿಯಲ್ಲಿ ಬಸ್ ತಂಗುದಾಣ 2<br>ಹೆಚ್.ಎಂ.ಟಿ. ಮುಖ್ಯ ರಸ್ತೆಯಲ್ಲಿ ಸುಬೇದಾರ ಪಾಳ್ಯದ ಅಯ್ಯಪ್ಪ ದೇವಸ್ಥಾನದ ಎದುರು ಮತ್ತು ಪಕ್ಕದಲ್ಲಿ ಬಸ್ ತಂಗುದಾಣ 2<br>ಹೆಚ್.ಎಂ.ಟಿ ಮುಖ್ಯರಸ್ತೆಯಾದ ರಾಮಯ್ಯ ಕಾಲೇಜ್ ಬಸ್ ನಿಲ್ದಾಣದ ಎರಡು ಕಡೆ ಬಸ್ ತಂಗುದಾಣ 2 | 6 ಬಸ್ ತಂಗುದಾಣಗಳು |
| 14 | ಶ್ರೀಮತಿ ನಂದಿನಿ ಶ್ರೀನಿವಾಸ ವಾರ್ಡ್ ಸಂಖ್ಯೆ 9 ವಿದ್ಯಾರಣ್ಯಪುರ | ವಿರುಪಾಕ್ಷಪುರದಲ್ಲಿ ಭೂಪತಿ ಟೆನಿಸ್ ಗ್ರಾಮದಲ್ಲಿ ಮತ್ತು ಮೋರ ಮಳಿಗೆಯ ಬಳಿ ಬಸ್ ತಂಗುದಾಣ ನಿರ್ಮಿಸುವುದು.<br>ಜಿ.ಕೆ.ವಿ.ಕೆ ರಸ್ತೆಯಲ್ಲಿ ಕೆನರಾ ಬ್ಯಾಂಕ್ ಬಡಾವಣೆಯಲ್ಲಿ, ತಿಂಡ್ಲು ಶನಿದೇವಸ್ಥಾನ ಹತ್ತಿರ ಮತ್ತು ಸರ್.ಎಂ.ವಿ.ಬಡಾವಣೆಯಲ್ಲಿ<br>ರಾಷ್ಟ್ರಕವಿ ಕುವೆಂಪು ಮುಖ್ಯರಸ್ತೆಯಲ್ಲಿ ಈಚಲುಮರ, ಬಿ.ಇಎಲ್ ಬಡಾವಣೆ ನಿವಾಸಿಗಳ ಸಂಘ ದುರಸ್ತಿ, ಕೆನರಾಬ್ಯಾಂಕ್ ಎರಡೂ ಬದಿಯಲ್ಲಿ, ಬ್ಯಾಂಕ್ ಆಫ್ ಇಂಡಿಯಾ ಹತ್ತಿರ, ನಂಜಪ್ಪ ವೃತ್ತದ ಅಭಿವೃದ್ಧಿ ಹಾಗೂ ಬಸ್ ತಂಗುದಾಣ ನಿರ್ಮಾಣ | 11 ಬಸ್ ತಂಗುದಾಣ ಮತ್ತು 1 ವೃತ್ತ ಅಭಿವೃದ್ಧಿ |
| 15 | ಶ್ರೀಮತಿ ಕೆ.ಆರ್. ಯಶೋದಮ್ಮ, ವಾರ್ಡ್ ಸಂಖ್ಯೆ: 11 ಕುವೆಂಪು ನಗರ | ಎಂ.ಎಸ್.ಪಾಳ್ಯ ವೃತ್ತದಲ್ಲಿ ಬಿಬಿಎಂಪಿ ಗೋಪುರದ ಮಾದರಿಯ ಸ್ಥಂಭವನ್ನು ನಿರ್ಮಿಸಿ ವೃತ್ತವನ್ನು ಅಭಿವೃದ್ಧಿಪಡಿಸುವುದು.<br>ವರದರಾಜನಗೆ, ಸರ್ಕಾರಿ ಶಾಲೆ ಮುಂಭಾಗದ ವೃತ್ತದಲ್ಲಿ ಗಾಂಧೀಜಿಯವರ ಪ್ರತಿಮೆಯ ಸ್ಥಂಭವನ್ನು ನಿರ್ಮಿಸಿ ವೃತ್ತವನ್ನು ಅಭಿವೃದ್ಧಿಪಡಿಸುವುದು.<br>ಸಿಂಗಾಪುರ ವೃತ್ತದಲ್ಲಿ ಡಾ॥ ರಾಜ್‌ಕುಮಾರ್‌ರವರ ಪ್ರತಿಮೆಯ ಸ್ಥಂಭವನ್ನು ನಿರ್ಮಿಸಿ ಅಭಿವೃದ್ಧಿ ಪಡಿಸುವುದು.<br>ಕುವೆಂಪುನಗರ 2ನೇ ಹಂತದ ಬಸ್ ನಿಲ್ದಾಣದ ಬಳಿ ವಿಶ್ವಕವಿ ಕುವೆಂಪುರವರ ಪ್ರತಿಮೆಯ ಸ್ಥಂಭದೊಂದಿಗೆ ವೃತ್ತವನ್ನು ಅಭಿವೃದ್ಧಿ ಪಡಿಸುವುದು.<br>ಗಂಗಮ್ಮ ಸರ್ಕಲ್‌ನಲ್ಲಿ ಜನರಲ್ ಕಾರಿಯಪ್ಪರವರ ಪ್ರತಿಮೆಯ ಸ್ಥಂಭವನ್ನು ನಿರ್ಮಿಸಿ ವೃತ್ತವನ್ನು ಅಭಿವೃದ್ಧಿಪಡಿಸುವುದು.<br>ವಾರ್ಡ್ ನಂ,3 ಮತ್ತು ವಾರ್ಡ್ ನಂ. 11ರ ಮಧ್ಯಭಾಗದಲ್ಲಿರುವ ದೇವಿ ಸರ್ಕಲ್‌ನಲ್ಲಿ ವಿವೇಕಾನಂದರವರ ಪ್ರತಿಮೆಯ ಸ್ಥಂಭವನ್ನು ನಿರ್ಮಿಸಿ ವೃತ್ತವನ್ನು ಅಭಿವೃದ್ಧಿಪಡಿಸುವುದು.<br>ಸಿಂಗಾಪುರದಲ್ಲಿ ಬಸ್ ನಿಲ್ದಾಣಕ್ಕಾಗಿ ಮಂಜೂರಾಗಿರುವ 24 ಗುಂಟೆ ಜಾಗದಲ್ಲಿ 10 ಬಸ್‌ಗಳು ನಿಲ್ಲುವಂತೆ ಮೂಲಭೂತ ಸೌಕರ್ಯಗಳೊಂದಿಗೆ ಬಸ್ ನಿಲ್ದಾಣವನ್ನು ನಿರ್ಮಿಸುವುದು.<br>ದೇವಿ ಸರ್ಕಲ್, ಎಂ,ಎಸ್,ಪಾಳ್ಯ ಸರ್ಕಲ್, ಗಂಗಮ್ಮ ಸರ್ಕಲ್, ಫಾತಿಮಾ ಶಾಲೆ ಮುಂಭಾಗ, ಏರ್‌ಪೋರ್ಸ್ ಹತ್ತಿರ, ವರದರಾಜನಗರ, ಕುವೆಂಪುನಗರ 2ನೇ ಹಂತ, ಕುವೆಂಪುನಗರ 1ನೇ ಹಂತ, ಕಾವೇರಿ ಸರ್ಕಲ್ ಗಳಲ್ಲಿ ಬಸ್ ತಂಗುದಾಣವನ್ನು ನಿರ್ಮಿಸುವುದು. | 9 ಬಸ್ ತಂಗುದಾಣ ಮತ್ತು 8 ವೃತ್ತಗಳನ್ನು ಅಭಿವೃದ್ಧಿ ಪಡಿಸುವುದು. |

……………………4

| | | | |
|---|---|---|---|
| 16 | ಶ್ರೀ ಡಿ. ಚಂದ್ರಪ್ಪ, ವಾರ್ಡ್ ಸಂಖ್ಯೆ: 145, ಹೊಂಬೇಗೌಡ ನಗರ | ಹೊಂಬೇಗೌಡ ನಗರ 4ನೇ ಅಡ್ಡರಸ್ತೆ ಕಿತ್ತೂರು ರಾಣಿ ಚೆನ್ನಮ್ಮ ಉದ್ಯಾನವನದ ಹಿಂಭಾಗದಲ್ಲಿ ಬಸ್ ತಂಗುದಾಣ ನಿರ್ಮಿಸುವುದು ಹಾಗೂ 4 ಮತ್ತು 5ನೇ ಅಡ್ಡರಸ್ತೆಯಲ್ಲಿರುವ ವಿಲ್ಸನ್ ಗಾರ್ಡನ್ ಜಂಕ್ಷನ್‌ನಲ್ಲಿ ಮಹಾತ್ಮಗಾಂಧಿ ಪ್ರತಿಮೆಯನ್ನು ಪ್ರತಿಷ್ಠಾಪಿಸಲು ಅನುಮತಿಯೊಂದಿಗೆ ಫೆನ್ಸಿಂಗ್ ಹಾಕಿಸುವುದು. | 1 ಉದ್ಯಾನವನ ಅಭಿವೃದ್ಧಿ ಹಾಗೂ 1 ಬಸ್ ತಂಗುದಾಣ ನಿರ್ಮಿಸುವುದು. |
| 17 | ಶ್ರೀಮತಿ ಪದ್ಮಾವತಿ ಶ್ರೀನಿವಾಸ್ ವಾರ್ಡ್ ಸಂಖ್ಯೆ: 74 ಶಕ್ತಿಗಣಪತಿ ನಗರ | ದಿ॥ ಡಿ. ದೇವರಾಜ ಅರಸು ಮುಖ್ಯರಸ್ತೆ, 1ನೇ ಮುಖ್ಯರಸ್ತೆ, ಕಮಲಾನಗರದಲ್ಲಿ ಬಸ್ ನಿಲ್ದಾಣ<br>ಜೆ.ಸಿ.ನಗರ 3ನೇ ಹಂತ 4ನೇ ವಿಭಾಗ ಬಸವೇಶ್ವರನಗರ ಕಮಲಾನಗರದಲ್ಲಿ ಬಸ್ ನಿಲ್ದಾಣ ನಿರ್ಮಿಸುವುದು.<br>ಡಾ॥ ರಾಜ್‌ಕುಮಾರ್ ಸರ್ಕಲ್ ಎನ್.ಜಿ.ಓ.ಎಸ್. ಕಾಲೋನಿ ಯಲ್ಲಿ ಬಸ್ ತಂಗುದಾಣ ನಿರ್ಮಿಸುವುದು.<br>ಗುಡ್ಡೆ ಗಣಪತಿ ದೇವಸ್ಥಾನದ ಎದುರು ದಿ॥ ಡಿ, ದೇವರಾಜು ಅರಸು ಮುಖ್ಯರಸ್ತೆಯಲ್ಲಿ ಬಸ್ ತಂಗುದಾಣ ನಿರ್ಮಿಸುವುದು.<br>8 ನೇ ಮುಖ್ಯರಸ್ತೆ, ಎಸ್.ಬಿ.ಐ ಸ್ಟಾಫ್ ಕಾಲೋನಿ 3ನೇ ಹಂತ 4ನೇ ವಿಭಾಗ ಬಸವೇಶ್ವರನಗರದಲ್ಲಿ ಬಸ್ ತಂಗುದಾಣ ನಿರ್ಮಿಸುವುದು. | 5 ಬಸ್ ತಂಗುದಾಣ ನಿರ್ಮಿಸುವುದು. |
| 18 | ಶ್ರೀ ಬಿ. ಗೋವಿಂದರಾಜು, ವಾರ್ಡ್ ಸಂಖ್ಯೆ: 24 ಹೆಚ್.ಬಿ.ಆರ್.ಲೇಔಟ್ | ಹೆಣ್ಣೂರು ಬಂಡೆ (ಗಣೇಶ ದೇವಸ್ಥಾನ ಹತ್ತಿರ), ಹೆಣ್ಣೂರು ಕ್ರಾಸ್, ಹೆಣ್ಣೂರು ಗುಂಡುತೋಪು (ಮುತ್ತುರಾಯ ಸ್ವಾಮಿ ದೇವಸ್ಥಾನ), 5ನೇ ಹಂತ (ಟೆಲಿಕಾಂ ಲೇಔಟ್ ಹತ್ತಿರ), ನಾಗವಾರ, ಗ್ಲಾಸ್ ಫ್ಯಾಕ್ಟರಿ, ಅರೇಬಿಕ್ ಕಾಲೇಜು (ಮಸೀದಿ ಹತ್ತಿರ) 3ನೇ ಹಂತ, ಹೆಚ್.ಬಿ.ಆರ್, ಲೇಔಟ್ (ಗಣೇಶ ದೇವಸ್ಥಾನ ಹತ್ತಿರ) ಮತ್ತು ಗೋವಿಂದಪುರ ಕ್ರಾಸ್ ಬಸ್ ತಂಗುದಾಣ ನಿರ್ಮಿಸುವುದು. | 10 ಬಸ್ ತಂಗುದಾಣ ನಿರ್ಮಿಸುವುದು. |
| 19 | ಶ್ರೀ ಆರ್. ನಾರಾಯಣಸ್ವಾಮಿ, ವಾರ್ಡ್ ಸಂಖ್ಯೆ: 16 ಜಾಲಹಳ್ಳಿ | ಜಾಲಹಳ್ಳಿ ಪೋಲಿಸ್ ಸ್ಟೇಷನ್ ಮುಂಭಾದದಲ್ಲಿ ಹೆಚ್ ಎಂ.ಟಿ ರಸ್ತೆ ಬಸ್ ತಂಗುದಾಣದ ನಿರ್ಮಾಣ.<br>ಬೆಸ್ಕಾಂ ಕಛೇರಿ ಮುಂಭಾದದಲ್ಲಿ ಹೆಚ್.ಎಂ.ಟಿ ರಸ್ತೆ ಬಸ್ ತಂಗುದಾಣ ನಿರ್ಮಾಣ.<br>ಹೆಚ್.ಎಂ.ಟಿ ಸರ್ಕಲ್ (ವೃತ್ತ) ಬಸ್ ತಂಗುದಾಣ ನಿರ್ಮಾಣ<br>ಬಿಇಎಲ್ ರಸ್ತೆ ಫ್ಯಾಕ್ಟರಿ ಮುಂಭಾಗದಲ್ಲಿ ಮಹಾಲಸ್ ಹೋಟೆಲ್ ಮತ್ತು ಕಾಲೇಜ್ ಹತ್ತಿರ ಬಸ್ ತಂಗುದಾಣ ನಿರ್ಮಾಣ.<br>ಜಾಲಹಳ್ಳಿ ಅಯ್ಯಪ್ಪಸ್ವಾಮಿ ದೇವಸ್ಥಾನದ ಮುಂಭಾಗದಲ್ಲಿ ಬಸ್ ತಂಗುದಾಣ ನಿರ್ಮಾಣ<br>ಇಸ್ರೋ ವಸತಿ ಗೃಹಗಳು ಆದಾಯ ತೆರಿಗೆ ಕಛೇರಿಯ ವಸತಿ ಗೃಹಗಳು ಟಾಟಾ ಅಪಾರ್ಟ್‌ಮೆಂಟ್ ಒಳಗೊಂಡಂತೆ ಬಸ್ ತಂಗುದಾಣ ನಿರ್ಮಾಣ<br>ಎಂ.ಇ.ಎಸ್ ರಸ್ತೆ (ತುಮಕೂರು ರಸ್ತೆ ಲಿಂಕ್ ರಿಂಗ್ ರಸ್ತೆ) ಮದರ್ ತೆರೆಸಾ ಕಾಲೇಜ್ ಹತ್ತಿರ ಹಾಗೂ ಸೆಂಟ್ ಕ್ಲಾರೇನ್ಸ್ ಕಾಲೇಜ್ ಹತ್ತಿರ ಬಸ್ ತಂಗುದಾಣ ನಿರ್ಮಾಣ.<br>ಜಾಲಹಳ್ಳಿ ಗ್ರಾಮದಲ್ಲಿ ಬಸ್ ತಂಗುದಾಣ ನಿರ್ಮಾಣ. | 8 ಬಸ್ ತಂಗುದಾಣ ನಿರ್ಮಿಸುವುದು. |
| 20 | ಶ್ರೀ ಎ. ಎನ್. ಪುರುಷೋತ್ತಮ, ವಾರ್ಡ್ ಸಂಖ್ಯೆ: 193 ಅರಕೆರೆ<br>- | ಬನ್ನೇರುಘಟ್ಟ ರಸ್ತೆ ಮೀನಾಕ್ಷಿ ಮಾಲ್ ಹತ್ತಿರ 2 ಬಸ್ ತಂಗುದಾಣ.<br>ಅರಕೆರೆ ಗೇಟ್ ಹತ್ತಿರ 2 ಬಸ್ ತಂಗುದಾಣ<br>ಹುಳಿಮಾವು ಗೇಟ್ ಹತ್ತಿರ 2 ಬಸ್ ತಂಗುದಾಣ<br>ಸಿಂಡಿಕೇಟ್ ಬ್ಯಾಂಕ್ ಕಾಲೋನಿ ಹತ್ತಿರ 2 ಬಸ್ ತಂಗುದಾಣ<br>ಶ್ರೀ ಸಾಯಿ ಬಾಬಾ ದೇವಸ್ಥಾನದ ಹತ್ತಿರ 2 ಬಸ್ ತಂಗುದಾಣ<br>ಜೈ ಹನುಮಂತನಗರದಲ್ಲಿ 1 ಬಸ್ ತಂಗುದಾಣ<br>ನ್ಯಾನಪ್ಪನಹಳ್ಳಿಯಲ್ಲಿ 2 ಬಸ್ ತಂಗುದಾಣ<br>ಅರಕೆರೆ ಗ್ರಾಮದಲ್ಲಿ 2 ಬಸ್ ತಂಗುದಾಣ<br>ವಿಜಯಾ ಬ್ಯಾಂಕ್ ಶಾಂತಿನಿಕೇತನ ಸರ್ಕಾರಿ ಶಾಲೆಯ ಹತ್ತಿರ 2 ಬಸ್ ತಂಗುದಾಣ | 17 ಬಸ್ ತಂಗುದಾಣ ನಿರ್ಮಿಸುವುದು. |

.....................5

| | | | |
|---|---|---|---|
| 21 | ಶ್ರೀ ಕೆ. ರಂಗಣ್ಣ, ವಾರ್ಡ್ ಸಂಖ್ಯೆ: 101 ಕಾಮಾಕ್ಷಿಪಾಳ್ಯ | 8ನೇ ಮುಖ್ಯರಸ್ತೆ ವಾರ್ಡ್ ಕಛೇರಿಯ ಹತ್ತಿರ ಬಸ್ ತಂಗುದಾಣ<br>ಸಿದ್ದಯ್ಯ ಪುರಾಣಿಕ್ ರಸ್ತೆ, ಹಾವನೂರ ವೃತ್ತದ ಹತ್ತಿರ<br>ಮಾಗಡಿ ಮುಖ್ಯರಸ್ತೆ, ಕಾಮಾಕ್ಷಿ ಪಾಳ್ಯ ಕೆರೆ ಹತ್ತಿರ ಬಸ್ ತಂಗುದಾಣ | 3 ಬಸ್ ತಂಗುದಾಣ ನಿರ್ಮಿಸುವುದು. |
| | ಒಟ್ಟು: ಬಸ್ ತಂಗುದಾಣ ನಿರ್ಮಾಣ + ಅಭಿವೃದ್ಧಿಪಡಿಸಬೇಕಾದ ಬಸ್ ತಂಗುದಾಣ+ ಅಭಿವೃದ್ಧಿಪಡಿಸಬೇಕಾದ ವೃತ್ತಗಳು+ ಪಾದಚಾರಿ ಕ್ರಾಸಿಂಗ್ ನಿರ್ಮಿಸುವುದು + ಹಾಗೂ ಉದ್ಯಾನವನ ಅಭಿವೃದ್ಧಿಪಡಿಸುವುದು. | | ಕ್ರಮವಾಗಿ 125+7+7+4 +1 =144 |

ಸದರಿ ಪಾಲಿಕೆ ಸದಸ್ಯರ ಕೋರಿಕೆಯಂತೆ ಮೇಲ್ಕಂಡ 125 ಬಸ್ ತಂಗುದಾಣಗಳನ್ನು ನಿರ್ಮಿಸುವುದು, 7 ಬಸ್ ತಂಗುದಾಣಗಳನ್ನು ಅಭಿವೃದ್ಧಿಪಡಿಸುವುದು, 7 ವೃತ್ತಗಳನ್ನು ಅಭಿವೃದ್ಧಿಪಡಿಸುವುದು, 4 ಪಾದಚಾರಿ ಕ್ರಾಸಿಂಗ್‌ಗಳನ್ನು ನಿರ್ಮಿಸಿ ಎಚ್ಚರಿಕೆ ದೀಪಗಳನ್ನು ಅಳವಡಿಸುವುದು ಹಾಗೂ 1 ಉದ್ಯಾನವನವನ್ನು ಅಭಿವೃದ್ಧಿಪಡಿಸುವ ಪ್ರಸ್ತಾವನೆಗಳನ್ನು ಪರಿಶೀಲಿಸಲಾಗಿ, ಬೆಂಗಳೂರು ಮಹಾನಗರದ ಸಾರ್ವಜನಿಕರ ಹಿತದೃಷ್ಟಿಯಿಂದ ಬಸ್ ತಂಗುದಾಣಗಳನ್ನು ನಿರ್ಮಿಸುವುದು ಅವಶ್ಯಕವಾಗಿರುವುದರಿಂದ ನೆಲ ಬಾಡಿಗೆ ಮತ್ತು ಜಾಹೀರಾತು ಶುಲ್ಕವನ್ನು ಪಡೆಯುವ ಆಧಾರದ ಮೇಲೆ ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ 3 ವರ್ಷಗಳ ಅವಧಿಗೆ ಟೆಂಡರ್ ಕರೆಯಲು ಅನುಮೋದನೆ ನೀಡಲು ತೀರ್ಮಾನಿಸಿ, ಮುಂದುವರೆದು ಹೆಚ್ಚುವರಿಯಾಗಿ 2 ವರ್ಷ ಅನುಮೋದನೆ ಪಡೆಯಲು ಪಾಲಿಕೆಯ ಸಭೆಯ ಮುಂದೆ ಮಂಡಿಸಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ: 11-03-2013ರ ಸ್ವಯಂ ಪ್ರೇರಿತ ನಿರ್ಣಯ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ವಿಷಯವನ್ನು ಕೈ ಬಿಡಲು ಸೂಚಿಸಿದರು.

ಶ್ರೀ. ಬಿ.ಆರ್.ನಂಜುಂಡಪ್ಪ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ಸೂಚನೆಯನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ಸೂಚನೆಯನ್ನು ಮತಕ್ಕೆ ಹಾಕಲಾಗಿ ಸೂಚನೆಯು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ</u>: "ಪ್ರಸ್ತಾವನೆಯನ್ನು ಕೈ ಬಿಡಲಾಗಿದೆ."

(ಬಿ.ಎಸ್.ಸತ್ಯನಾರಾಯಣ)
ಮಹಾಪೌರರು

# ದಿನಾಂಕ:28-10-2013 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 06 (65)/2013-14

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಮಲ್ಲೇಶ್ವರಂ ಮತ್ತು ಯಶವಂತಪುರ ರೈಲ್ವೆ ನಿಲ್ದಾಣಗಳ ಮಧ್ಯೆ ಬರುವ ರೈಲ್ವೆ ಕಿ.ಮೀ. 3/718 (ನಿರ್ಮಲರಾಣಿ ಶಾಲೆ ಹತ್ತಿರ) ರಲ್ಲಿ ರೈಲ್ವೆ ಇಲಾಖೆ ಹಾಗೂ ಪಾಲಿಕೆ ವತಿಯಿಂದ ಜಂಟಿಯಾಗಿ ಠೇವಣಿ ಕೊಡುಗೆ ಆಧಾರದ ಮೇಲೆ ರಸ್ತೆ ಕೆಳಸೇತುವೆ ನಿರ್ಮಾಣ (Construction of RUB at 18th cross, Malleshwaram near Nirmala Rani school at railway km. 3/718 between Malleshwaram- Yeshwanthpura railway station on Bangalore- Tumkur railway line) ಮಾಡಲು ಉದ್ದೇಶಿಸಲಾಗಿರುತ್ತದೆ. ಈ ಮೇರೆಗೆ ಸದರಿ ಯೋಜನೆಯನ್ನು ರೈಲ್ವೆ ನಿಯಮಾವಳಿಗನುಗುಣವಾಗಿ ಡಿ.ಪಿ.ಆರ್. ತಯಾರಿಸಿ ಜಿ.ಎ.ಡಿ. ಅನುಮೋದನೆಗಾಗಿ ಸಲ್ಲಿಸಲಾಗಿರುತ್ತದೆ.

ಸದರಿ ಅಂದಾಜು ಪಟ್ಟಿಯು ರೈಲ್ವೆ ಇಲಾಖೆಯಿಂದ ನಿರ್ಮಿಸಬೇಕಾದ ಆರ್.ಸಿ.ಸಿ. ಬಾಕ್ಸ್ ಕಾಮಗಾರಿ ಮತ್ತು ಪಾಲಿಕೆ ವತಿಯಿಂದ ಕೈಗೊಳ್ಳಬೇಕಾದ ಕಾಮಗಾರಿಗಳಾದ ಅಪ್ರೋಚ್ ರಸ್ತೆ ನಿರ್ಮಾಣ, ಸರ್ವಿಸ್ ರಸ್ತೆ ನಿರ್ಮಾಣ, ಅವಶ್ಯವಿರುವ ಖಾಸಗಿ ಸ್ವತ್ತುಗಳ ಭೂ ಪರಿಹಾರದ ಮೊತ್ತ, ಮೂಲಭೂತ ಸೌಕರ್ಯಗಳ ಸ್ಥಳಾಂತರಕ್ಕೆ ಹೆಚ್ಚುವರಿ ಅನುದಾನ ಹಾಗೂ ವಿದ್ಯುತ್ ಕಾಮಗಾರಿಗಳನ್ನು ಒಳಗೊಂಡಿದ್ದು, ಅಂದಾಜು ಮೊತ್ತವು ರೂ. 15.10 ಕೋಟಿಗಳಾಗಿರುತ್ತದೆ.

ಸದರಿ ಯೋಜನೆಯ ಅಂದಾಜು ಪಟ್ಟಿಯ ಮೊತ್ತವನ್ನು ಪಾಲಿಕೆಯ 2012-13ನೇ ಸಾಲಿನ ಆಯವ್ಯಯದ ಪುಟ ಸಂಖ್ಯೆ: 152ರ ಲೆಕ್ಕಶೀರ್ಷಿಕೆ ಪಿ-2074 ರಲ್ಲಿ ಮಲ್ಲೇಶ್ವರಂ ಬಳಿ ನಿರ್ಮಲ ರಾಣಿ ಶಾಲೆ ಬಳಿ ಕೆಳಸೇತುವೆ ನಿರ್ಮಾಣ ಕಾಮಗಾರಿಗೆ ಮೀಸಲಿಟ್ಟಿರುವ ಮೊತ್ತ ರೂ. 200.00 ಲಕ್ಷಗಳ ಅನುದಾನದಲ್ಲಿ ಭರಿಸಬಹುದಾಗಿದೆ.

ಈ ಮೇರೆಗೆ ಕೆಳಕಂಡ ಅಂಶಗಳಿಗೆ ಅನುಮೋದನೆ ಕೋರಿದೆ;

1. ಸದರಿ ಯೋಜನೆಯನ್ನು ಠೇವಣಿ ಆಧಾರದ ಮೇಲೆ ನಿರ್ವಹಿಸಲು ಅನುಮೋದನೆ.
2. ಠೇವಣಿ ಆಧಾರದ ಮೇಲೆ ರೈಲ್ವೆ ಇಲಾಖೆಯಿಂದ ಕೈಗೊಳ್ಳಬೇಕಾಗಿರುವ ಆರ್.ಸಿ.ಸಿ. ಬಾಕ್ಸ್ ಕಾಮಗಾರಿಯ ಮೊತ್ತವಾದ ರೂ. 1.90 ಕೋಟಿಗಳಿಗೆ ಅನುಮೋದನೆ ಹಾಗೂ ಪಾಲಿಕೆವತಿಯಿಂದ ಕೈಗೊಳ್ಳಬೇಕಾದ ಅಪ್ರೋಚ್ ರಸ್ತೆ ಹಾಗೂ ಸರ್ವಿಸ್ ರಸ್ತೆ ನಿರ್ಮಾಣ, ಸದರಿ ರಸ್ತೆಗಳನ್ನು ನಿರ್ಮಿಸಲು ಅವಶ್ಯವಿರುವ ಭೂ ಪರಿಹಾರ, ಮೂಲಭೂತ ಸೌಕರ್ಯಗಳನ್ನು ಸ್ಥಳಾಂತರಿಸುವ ವೆಚ್ಚ ಮತ್ತು ವಿದ್ಯುದ್ದೀಕರಣ ಕಾಮಗಾರಿಗಳಿಗಾಗಿ ಅವಕಾಶ ಕಲ್ಪಿಸಲಾದ ಮೊತ್ತವಾದ ರೂ. 13.20 ಕೋಟಿ, ಒಟ್ಟಾರೆ ಯೋಜನೆಯ ಅಂದಾಜು ಮೊತ್ತವಾದ ರೂ. 15.10 ಕೋಟಿಗಳಿಗೆ ಆಡಳಿತಾತ್ಮಕ ಅನುಮೋದನೆ.
3. ಸರ್ವಿಸ್ ರಸ್ತೆ ನಿರ್ಮಾಣಕ್ಕೆ ಅವಶ್ಯವಿರುವ ಖಾಸಗಿ ಸ್ವತ್ತುಗಳಿಗೆ ಭೂ ಸ್ವಾಧೀನ ಪ್ರಕ್ರಿಯೆ ಪ್ರಾರಂಭಿಸಲು ಅನುಮೋದನೆ.
4. ಸದರಿ ಯೋಜನೆಗೆ ಆಡಳಿತಾತ್ಮಕ ಅನುಮೋದನೆಗಾಗಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ಅನುಮೋದನೆ.
5. ಸದರಿ ಯೋಜನೆಗೆ ಘನ ಸರ್ಕಾರದ ಆಡಳಿತಾತ್ಮಕ ಅನುಮೋದನೆ ನಿರೀಕ್ಷಿಸಿ ಅಂದಾಜು ಪಟ್ಟಿಗೆ ಮೇಲು ರುಜು ಮಾಡಿ ನೈರುತ್ಯ ಇಲಾಖೆಗೆ ಸಲ್ಲಿಸಲು ಹಾಗೂ ಸದರಿ ಕಾಮಗಾರಿಗೆ ಟೆಂಡರ್ ಆಹ್ವಾನಿಸಲು ಅನುಮೋದನೆ.
6. ಘನ ಸರ್ಕಾರದ ಆಡಳಿತಾತ್ಮಕ ಅನುಮೋದನೆ ನಿರೀಕ್ಷಿಸಿ ರೈಲ್ವೆ ಇಲಾಖೆಗೆ ರೂ. 1.90 ಕೋಟಿಗಳನ್ನು ಠೇವಣಿ ಇಡಲು ಅನುಮೋದನೆ.

.......................2

ಮೇಲ್ಕಂಡ ಅಂಶಗಳಿಗೆ ಅನುಮೋದನೆ ಕೋರಿ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಮುಂದೆ ಮಂಡಿಸಿರುವ ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ:19-03-2013ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ:05-10-2013ರ ನಿರ್ಣಯ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ:05-10-2013ರ ನಿರ್ಣಯವನ್ನು ಒಪ್ಪುವುದು".

ಶ್ರೀ. ಬಿ.ಆರ್.ನಂಜುಂಡಪ್ಪ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ: 05-10-2013ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

(ಬಿ.ಎಸ್.ಸತ್ಯನಾರಾಯಣ)
ಮಹಾಪೌರರು

# ದಿನಾಂಕ:28-10-2013 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 07 (66)/2013-14

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಹೆಬ್ಬಾಳ ಮುಖ್ಯ ಕಣಿವೆ H-300, HBR Layout ಹಾಗೂ Geddalahalli ಮುಖ್ಯ ರಸ್ತೆ ಮೂಲಕ ಹರಿಯುತ್ತಿದ್ದು, ಕೆಲವು ಭಾಗಗಳಲ್ಲಿ ಕಲ್ಲಿನ ಆಸರೆ ಗೋಡೆಯಿಂದ ಕೂಡಿದ್ದು ಉಳಿದ ಭಾಗದಲ್ಲಿ ಕಚ್ಚಾ ಕಾಲುವೆಯಿಂದ ಕೂಡಿದೆ. ಪ್ರತಿ ಮಳೆಗಾಲದಲ್ಲೂ ಸದರಿ ಪ್ರದೇಶದಲ್ಲಿ ನೀರು ತುಂಬಿ ಹರಿದು ಸಾರ್ವಜನಿಕರ ಆಸ್ತಿಗೆ ನಷ್ಟ ಉಂಟಾಗುತ್ತಿದ್ದು, ಇದನ್ನು ತಪ್ಪಿಸಲು ಕಣಿವೆಯನ್ನು ಅಗಲ ಹಾಗೂ ಆಳಗೊಳಿಸಿ ಕಾಲುವೆಯ ಎರಡೂ ಬದಿಗಳಲ್ಲಿ ಆರ್.ಸಿ.ಸಿ. ತಡೆಗೋಡೆ ನಿರ್ಮಿಸಿ ಮೇಲ್ಭಾಗದಲ್ಲಿ ಚೈನ್ ಲಿಂಕ್ ಫೆನ್ಸಿಂಗ್ ಒದಗಿಸಲು ಅಂದಾಜನ್ನು 2009-10 ನೇ ಸಾಲಿನ ಲೋಕೋಪಯೋಗಿ ಮತ್ತು ಒಳನಾಡು ಸಾರಿಗೆ, ಬೆಂಗಳೂರು ವೃತ್ತದ ದರಪಟ್ಟಿಯ ದರಗಳನ್ನು ಪರಿಗಣಿಸಿ ರೂ. 519.95 ಲಕ್ಷಗಳಿಗೆ ತಯಾರಿಸಿ ಸಕ್ಷಮ ಪ್ರಾಧಿಕಾರದಿಂದ ಆಡಳಿತಾತ್ಮಕ ಅನುಮೋದನೆ ಪಡೆದು ಟೆಂಡರ್ ಕರೆಯಲಾಯಿತು.

ಈ ಕಾಮಗಾರಿಗೆ ದಿನಾಂಕ 05.03.2013 ರಂದು ಮೊದಲನೇ ಬಾರಿ ಟೆಂಡರ್ ಅಧಿಸೂಚನೆಯನ್ನು ಹೊರಡಿಸಲಾಯಿತು. ಟೆಂಡರ್ ಸಲ್ಲಿಸಲು ಕಡೆಯ ದಿನಾಂಕವಾಗಿದ್ದ 10.05.2013 ರಂದು ಕೆಳಕಂಡಂತೆ ಒಟ್ಟು 6 ಜನ ಗುತ್ತಿಗೆದಾರರು ಭಾಗವಹಿಸಿರುತ್ತಾರೆ.

1) ಮೆ॥ ಕೆ.ಪಿ.ಸಿ. ಪ್ರಾಜೆಕ್ಟ್ಸ್ ಲಿಮಿಟೆಡ್
2) ಶ್ರೀ. ಬಿ.ಹೆಚ್. ರಾಮಚಂದ್ರ
3) ಮೆ॥ ಸ್ವಸ್ಥಿಕ್ ಎಂಟರ್‌ಪ್ರೈಸರ್ಸ್
4) ಮೆ॥ ಡೆಕ್ಕನ್ ಇಂಜಿನೀಯರ್ಸ್ ಅಂಡ್ ಕನ್ಸಟ್ರಕ್ಷನ್ಸ್
5) ಶ್ರೀ. ಟಾಮ್ ಟಾಮ್ ಪೆದ್ದ ಗುರುವ ರೆಡ್ಡಿ
6) ಮೆ॥ ಸಿದ್ಧಾರ್ಥ ಸಿವಿಲ್ ವರ್ಕ್ಸ್ ಪ್ರೈವೇಟ್ ಲಿಮಿಟೆಡ್

ಸದರಿ ಗುತ್ತಿಗೆದಾರರು ಸಲ್ಲಿಸಿದ್ದ ದಾಖಲೆಗಳನ್ನು ಪರಿಶೀಲಿಸಲಾಗಿ ತಾಂತ್ರಿಕವಾಗಿ 3 ಜನ ಗುತ್ತಿಗೆದಾರರು ಅರ್ಹತೆಯನ್ನು ಹೊಂದಿರುವರೆಂದು ಘೋಷಿಸಿದ ನಂತರ ಇವರು ಸಲ್ಲಿಸಿದ್ದ ಆರ್ಥಿಕ ಬಿಡ್ಡುಗಳನ್ನು ದಿನಾಂಕ: 18.05.2013 ರಂದು ತೆರೆಯಲಾಗಿ, ವಿವರಗಳು ಕೆಳಕಂಡಂತಿರುತ್ತದೆ.

| ಕ್ರ ಸಂ | ಗುತ್ತಿಗೆದಾರರ ಹೆಸರು | ಟೆಂಡರ್‌ನಲ್ಲಿ ಗುತ್ತಿಗೆದಾರರು ನಮೂದಿಸಿರುವ ದರಗಳಂತೆ ಒಟ್ಟಾರೆ ಟೆಂಡರ್ ಮೊತ್ತ/ಸಂಧಾನದ ಮೊತ್ತ |
|---|---|---|
| 1 | ಮೆ॥ ಸಿದ್ಧಾರ್ಥ ಸಿವಿಲ್ ವರ್ಕ್ಸ್ ಪ್ರೈವೇಟ್ ಲಿಮಿಟೆಡ್ | ರೂ 6,45,66,379/- |
| 2 | ಮೆ॥ ಕೆ.ಪಿ.ಸಿ. ಪ್ರಾಜೆಕ್ಟ್ಸ್ ಲಿಮಿಟೆಡ್ | ರೂ 6,52,03,651/- |
| 3 | ಶ್ರೀ. ಬಿ.ಹೆಚ್. ರಾಮಚಂದ್ರ | ರೂ 6,91,34,992/- |

......................2

ಮೆ॥ ಸಿದ್ಧಾರ್ಥ ಸಿವಿಲ್ ವರ್ಕ್ಸ್ ಪ್ರೈವೇಟ್ ಲಿಮಿಟೆಡ್‌ರವರು ಕಡಿಮೆ ದರ ನಮೂದಿಸಿರುವ ಬಿಡ್ಡುದಾರರಾಗಿದ್ದು ವಿವರಗಳು ಕೆಳಕಂಡಂತಿವೆ;

1) ಮಂಜೂರಾದ ಅಂದಾಜಿನ ದರಗಳಂತೆ ಟೆಂಡರಿಗೆ ಇಡಲಾದ ಮೊತ್ತ (2009-10ನೇ ಸಾಲಿನ ದರಪಟ್ಟಿಯಂತೆ) = ರೂ. 5,09,40,387.00
2) ಪ್ರಸಕ್ತ ಸಾಲಿನ ಅಂದರೆ 2012-13ನೇ ಸಾಲಿನ ದರಪಟ್ಟಿಯ ದರಗಳನ್ನು ಪರಿಗಣಿಸಿ ಪರಿಷ್ಕರಿಸಿದಾಗ ಟೆಂಡರಿಗಿಟ್ಟ ಮೊತ್ತ = ರೂ. 6,21,40,687.00

ಮೆ॥ ಸಿದ್ಧಾರ್ಥ ಸಿವಿಲ್ ವರ್ಕ್ಸ್ ಪ್ರೈವೇಟ್ ಲಿಮಿಟೆಡ್ ರವರು ನಮೂದಿಸಿರುವ ಮೊತ್ತವು ಮಂಜೂರಾದ ಅಂದಾಜಿನಂತೆ ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇ. **26.75** ರಷ್ಟು ಹೆಚ್ಚುವರಿ ಇದ್ದು ಪ್ರಸಕ್ತ ಸಾಲಿನ ಅಂದರೆ 2012-13ನೇ ಸಾಲಿನ ದರಪಟ್ಟಿಯ ದರಗಳನ್ನು ಪರಿಗಣಿಸಿ ಪರಿಷ್ಕರಿಸಿದ ಟೆಂಡರಿಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇ.**3.90** ರಷ್ಟು ಹೆಚ್ಚುವರಿ ಆಗಿದ್ದು, ಸ್ಪರ್ಧಾತ್ಮಕವಾಗಿರುವುದು ಕಂಡುಬಂದಿರುತ್ತದೆ.

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ, ಟೆಂಡರಿನಲ್ಲಿ ಭಾಗವಹಿಸಿ ಕಡಿಮೆ ಬಿಡ್ಡುದಾರರಾಗಿರುವ ಮೆ॥ ಸಿದ್ಧಾರ್ಥ ಸಿವಿಲ್ ವರ್ಕ್ಸ್ ಪ್ರೈವೇಟ್ ಲಿಮಿಟೆಡ್‌ರವರು ನಮೂದಿಸಿರುವ ಒಟ್ಟಾರೆ ಟೆಂಡರ್ ಮೊತ್ತ **ರೂ 6,45,66,379/-** (ಮಂಜೂರಾದ ಅಂದಾಜು ಮೊತ್ತದಂತೆ ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇ. **26.75** ರಷ್ಟು ಹೆಚ್ಚುವರಿ ಇದ್ದು ಹಾಗೂ ಪ್ರಸಕ್ತ ಸಾಲಿನ ಅಂದರೆ 2012-13ನೇ ಸಾಲಿನ ದರಪಟ್ಟಿಯ ದರಗಳಂತೆ ಪರಿಷ್ಕರಿಸಿಲಾದ ಟೆಂಡರ್ ಮೊತ್ತಕ್ಕೆ ಹೋಲಿಸಿದಾಗ ಶೇ. **3.90** ರಷ್ಟು ಹೆಚ್ಚುವರಿ ಇದ್ದು) ಗಳಿಗೆ ಅನುಮೋದನೆ ಕೋರಿ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ:02-08-2013ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ: 05-10-2013ರ ನಿರ್ಣಯ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ:05-10-2013ರ ನಿರ್ಣಯವನ್ನು ಒಪ್ಪುವುದು".

ಶ್ರೀ. ಬಿ.ಆರ್.ನಂಜುಂಡಪ್ಪ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ: 05-10-2013ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

(ಬಿ.ಎಸ್.ಸತ್ಯನಾರಾಯಣ)
ಮಹಾಪೌರರು

# ದಿನಾಂಕ:28–10–2013 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 08 (67)/2013–14

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ರಾಜರಾಜೇಶ್ವರಿನಗರ ವಲಯದ ವಾರ್ಡ್ ನಂ.72 ಹಾಗೂ ಯಲಹಂಕ ವಲಯ ವಾರ್ಡ್ ನಂ:5ರ ವ್ಯಾಪ್ತಿಯಲ್ಲಿ ಬರುತ್ತಿರುತ್ತವೆ. ವಾರ್ಡ್ ನಂ:72ರ ವ್ಯಾಪ್ತಿಯ ಹೇರೋಹಳ್ಳಿ ಕೆರೆ ತೂಬಿನಿಂದ ನೈಸ್ ರಸ್ತೆ ದಾಟಿ ಖಾಚೋಹಳ್ಳಿ ಕೆರೆಗೆ ಸೇರುವ ರಾಜಕಾಲುವೆ ಸರಪಳಿ:625.00ಮೀ ನಿಂದ 1000.00 ಮೀ ವರೆಗೆ (ಕೆಂಪೇಗೌಡ ನಗರ) ಪ್ರದೇಶದಲ್ಲಿ 2011ರ ಆಗಸ್ಟ್‌ನಲ್ಲಿ ಬಿದ್ದ ಭಾರೀ ಮಳೆಯಿಂದಾಗಿ ಸಾರ್ವಜನಿಕ ಆಸ್ತಿಪಾಸ್ತಿಗಳಿಗೆ ಹಾನಿಯುಂಟಾಗಿದ್ದು, ಇದರಿಂದಾಗಿ ಸಾರ್ವನಿಕರಿಗೆ ತುಂಬಾ ಅನಾನುಕೂಲವಾಗಿರುತ್ತದೆ. ಇದೇ ರೀತಿ ಯಲಹಂಕ ವಲಯದ ವಾರ್ಡ್ ಸಂಖ್ಯೆ:5 ರ ವ್ಯಾಪ್ತಿಯ ಕಟ್ಟಿಗೇನಹಳ್ಳಿ ಹಾಗೂ Air force ಪ್ರದೇಶದಿಂದ ಪಾಲನಹಳ್ಳಿ ಕೆರೆಗೆ ಸೇರುವ ರಾಜಕಾಲುವೆಯ ಸರಪಳಿ 410.00 ಮೀ ನಿಂದ 770.00ಮೀ ವರೆಗೆ (ಬ್ರಹ್ಮಯ್ಯ ದೇವಸ್ಥಾನ ಮತ್ತು ದ್ವಾರಕ ನಗರ) ಈ ಪ್ರದೇಶದಲ್ಲಿ ಬೀಳುವ ಮಳೆಯಿಂದಾಗಿ ಅಕ್ಕ ಪಕ್ಕದ ಸಾರ್ವಜನಿಕ ಮನೆಗಳಿಗೆ ಹಾಗೂ ಆಸ್ತಿಗಳಿಗೆ ನೀರು ನುಗ್ಗಿ ಹಾನಿಯುಂಟಾಗಿರುತ್ತದೆ. ಮುಂದೆ ಬರಬಹುದಾದ ಅನಿರೀಕ್ಷಿತ ಮಳೆಯಿಂದ ಯಾವುದೇ ರೀತಿಯ ಅಹಿತಕರ ಘಟನೆಗಳು ಹಾಗೂ ಸಾರ್ವಜನಿಕರ ಆಸ್ತಿ ಪಾಸ್ತಿಗಳಿಗೆ ಹಾನಿಯುಂಟಾಗದಂತೆ ಮುಂಜಾಗ್ರತ ಕ್ರಮವಾಗಿ ಈ 2 ಕಾಲುವೆಯ ಉದ್ದಕ್ಕೂ ಆರ್.ಸಿ.ಸಿ. ಬಾಕ್ಸ್‌ಡ್ರೈನ್ ನಿರ್ಮಾಣ ಮಾಡುವ ಅವಶ್ಯಕತೆ ಇರುತ್ತದೆ. ಮೇಲ್ಕಂಡ 2 ಕಾಮಗಾರಿಗಳನ್ನು ತುರ್ತಾಗಿ ಮುಗಿಸುವ ಉದ್ದೇಶದಿಂದ ತುರ್ತಾದ ಸಂದರ್ಭದಲ್ಲಿ ಶೀಘ್ರ ಪ್ರಗತಿ ಸಾಧಿಸಲು ಪ್ರೀ- ಕ್ಯಾಸ್ಟ್ ಎಲಿಮೆಂಟ್‌ಗಳನ್ನು ಅಳವಡಿಸಿಕೊಂಡು ಕಾಮಗಾರಿಯನ್ನು ಕೈಗೊಳ್ಳಲು ಉದ್ದೇಶಿಸಲಾಗಿದೆ. ಈ ತರಹದ ಕಾಮಗಾರಿಗಳನ್ನು ನಿರ್ವಹಿಸಲು ತಾಂತ್ರಿಕ ಸಲಹಾ ಸಮಿತಿಯು ಸಹ ಒಪ್ಪಿಗೆ ನೀಡಿರುತ್ತದೆ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ ಹಾಗೂ ಮುಂದಿನ ದಿನಗಳಲ್ಲಿ ಭಾರಿ ಮಳೆಯಿಂದ ಸಂಭವಿಸಬಹುದಾದ ಹಾನಿಗಳನ್ನು ತಪ್ಪಿಸಲು ಪ್ರೀ–ಕ್ಯಾಸ್ಟ್ ಎಲಿಮೆಂಟ್‌ಗಳನ್ನು ಅಳವಡಿಸಿಕೊಂಡು ಕ್ಷಿಪ್ರಗತಿಯಲ್ಲಿ ಪ್ರಗತಿ ಸಾಧಿಸಲು ಅನುಕೂಲವಾಗುವಂತೆ ಈ ಕೆಳಕಂಡ 2 ಅಂದಾಜು ಪಟ್ಟಿಗಳನ್ನು ಒಟ್ಟು ರೂ.685.10 ಲಕ್ಷಗಳಿಗೆ ಸಿದ್ಧಪಡಿಸಿ ಅನುಮೋದನೆಗೆ ಸಲ್ಲಿಸಲಾಗಿದೆ.

| ಕ್ರ ಸಂ. | ಕಾಮಗಾರಿಯ ಹೆಸರು | ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ) |
|---|---|---|
| 1 | Remodelling of Storm water drain (DH-367)in from ch: 625.00 to 1000.00m in Kempegowda Nagara, Herohalli ward (ward No:72) in Rajarajeshwari Nagara zone. | 279.90 |
| 2 | Remodelling of storm water drain BP-151 (Kattigehalli drain) Brahmaya temple to PalanahalliKere in Yelahanka zone from ch: 410.00 to 770.00m | 405.20 |
| | ಒಟ್ಟು ಮೊತ್ತ | **685.10** |

ಮೇಲ್ಕಂಡ ವಿವರಗಳನ್ನು ಪರಿಗಣಿಸಿ ಮಾನ್ಯ ಆಯುಕ್ತರವರು ಅನುಮೋದಿಸಿರುವ ಮೇರೆಗೆ ಮೇಲ್ಕಂಡ ಕಾಮಗಾರಿಗಳಿಗೆ ಜಾಬ್‌ಕೋಡ್ ಅನುಮೋದನೆ ಹಾಗೂ ಆಡಳಿತಾತ್ಮಕ ಮಂಜೂರಾತಿ ಕೋರಿ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ:22–06–2013ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ:05–10–2013ರ ನಿರ್ಣಯ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ:05-10-2013ರ ನಿರ್ಣಯವನ್ನು ಒಪ್ಪುವುದು".

ಶ್ರೀ. ಬಿ.ಆರ್.ನಂಜುಂಡಪ್ಪ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ: 05-10-2013ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

(ಬಿ.ಎಸ್.ಸತ್ಯನಾರಾಯಣ)
ಮಹಾಪೌರರು

# ದಿನಾಂಕ:28-10-2013 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 10 (69)/2013-14

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಟಿ.ಮರೀಗೌಡ (ಹೊಸುರು ರಸ್ತೆ) ರಸ್ತೆಯು ಒಂದು ಪ್ರಮುಖ ರಸ್ತೆಯಾಗಿದ್ದು, ನಗರದ ಕೇಂದ್ರ ಭಾಗದಿಂದ ಹಾಯ್ದು ರಾಷ್ಟ್ರೀಯ ಹೆದ್ದಾರಿ NH-7 ಗೆ ಸಂಪರ್ಕ ಕಲ್ಪಿಸುವ ಮುಖ್ಯರಸ್ತೆಯಾಗಿರುತ್ತದೆ. ಸದರಿ ರಸ್ತೆಯಲ್ಲಿ ತೀವ್ರ ವಾಹನ ದಟ್ಟಣೆ ಇದ್ದು, ತೀವ್ರವಾಗಿ ಶಿಥಿಲಗೊಂಡಿರುವುದರಿಂದ ವಾಹನಗಳ ಸುಗಮ ಸಂಚಾರಕ್ಕೆ ಅಡಚಣೆಯಾಗುತ್ತಿರುವ ಬಗ್ಗೆ ಸಾರ್ವಜನಿಕರಿಂದ ದೂರುಗಳು ಬರುತ್ತಿದ್ದು, ಸ್ಥಳೀಯ ಶಾಸಕರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವರು ಸಹ ದೂರವಾಣಿ ಹಾಗೂ ಪತ್ರ ಮುಖೇನ ಸದರಿ ರಸ್ತೆಯನ್ನು ಅಭಿವೃದ್ಧಿಗೊಳಿಸಲು ಕೋರಿರುತ್ತಾರೆ.

ಈ ಮೇರೆಗೆ ಕಾರ್ಯಪಾಲಕ ಅಭಿಯಂತರರು, ರಸ್ತೆ ಮೂಲಭೂತ ಸೌಕರ್ಯ-ದಕ್ಷಿಣ ರವರು ಸ್ಥಳ ಪರಿವೀಕ್ಷಣೆ ನಡೆಸಿ ಸದರಿ ಕಾಮಗಾರಿಯು ಅತ್ಯವಶ್ಯಕವಾಗಿರುವುದರಿಂದ ರೂ.255.00 ಲಕ್ಷಗಳಿಗೆ ಅಂದಾಜು ಪಟ್ಟಿಯನ್ನು ಸಲ್ಲಿಸಿ, ಸದರಿ ಕಾಮಗಾರಿಯನ್ನು ತುರ್ತಾಗಿ ನಿರ್ವಹಿಸಬೇಕಾಗಿರುವುದರಿಂದ ಸ್ಥಾಯಿ ಸಮಿತಿ ಹಾಗೂ ಪಾಲಿಕೆ ಸಭೆಯ ಆಡಳಿತಾತ್ಮಕ ಅನುಮೋದನೆ ನಿರೀಕ್ಷಿಸಿ ಅಲ್ಪಾವಧಿ ಟೆಂಡರ್ ಕರೆದು ಒಟ್ಟಾರೆಯಾಗಿ ಆಡಳಿತಾತ್ಮಕ ಅನುಮೋದನೆ ಹಾಗೂ ಟೆಂಡರ್ ಅನುಮೋದನೆಗೆ ಟಿಪ್ಪಣಿ ಮಂಡಿಸಲು ಅನುಮೋದನೆ ಕೋರಿದ್ದರ ಮೇರೆಗೆ ಮಾನ್ಯ ಆಯುಕ್ತರು ಅನುಮೋದನೆ ನೀಡಿದ್ದು, 2012-13ನೇ ಸಾಲಿನ ಲೆಕ್ಕ ಶೀರ್ಷಿಕೆ ಪಿ-2019 ರಡಿಯಲ್ಲಿ ಜಾಬ್ ನಂಬರ್ ಸಹ ಆಗಿರುತ್ತದೆ.

ಮೇಲ್ಕಂಡ ಕಾಮಗಾರಿಗೆ ಕಾರ್ಯಪಾಲಕ ಅಭಿಯಂತರರು, ಕಾರ್ಯಪಾಲಕ ಅಭಿಯಂತರರು, ರಮೂಸೌ-ದಕ್ಷಿಣ, ವಿಭಾಗದವರು e-procurement ಅಡಿಯಲ್ಲಿ ದ್ವಿ-ಲಕೋಟೆ ಪದ್ಧತಿಯಲ್ಲಿ ಅಲ್ಪಾವಧಿ ಟೆಂಡರ್ ಆಹ್ವಾನಿಸಿರುತ್ತಾರೆ. ಸದರಿ ಟೆಂಡರ್‌ನಲ್ಲಿ ಇಬ್ಬರು ಗುತ್ತಿಗೆದಾರರು ತಾಂತ್ರಿಕ ಬಿಡ್‌ನಲ್ಲಿ ಅರ್ಹತೆ ಹೊಂದಿದ್ದು, ಇವರುಗಳ ಆರ್ಥಿಕ ಬಿಡ್ ತೆರೆಯಲಾಗಿ, ಶ್ರೀ. ರಾಮಯ್ಯ ಲೋಕೇಶ್ ರವರು ಕನಿಷ್ಠ ದರ ನಮೂದಿಸಿರುವ ಗುತ್ತಿಗೆದಾರರಾಗಿದ್ದು, ವಿವರಗಳು ಕೆಳಕಂಡಂತಿರುತ್ತದೆ.

| ಕ್ರ ಸಂ | ತಾಂತ್ರಿಕ ಮೌಲ್ಯ ಮಾಪನದಲ್ಲಿ ಅರ್ಹರಾದ ಗುತ್ತಿಗೆದಾರರ ಹೆಸರು | ಟೆಂಡರ್‌ಗಿಟ್ಟ ಮೊತ್ತ (ರೂ. ಗಳಲ್ಲಿ) | ಗುತ್ತಿಗೆದಾರರು ನಮೂದಿಸಿರುವ ಮೊತ್ತ (ರೂ. ಗಳಲ್ಲಿ) | 2012-13ನೇ ಸಾಲಿನ ಪರಿಷ್ಕೃತ ದರಪಟ್ಟಿಗೆ ಹೋಲಿಸಿದಾಗ | ಷರಾ |
|---|---|---|---|---|---|
| 1 | ಶ್ರೀ. ರಾಮಯ್ಯ ಲೋಕೇಶ್ | 2,46,31,284.10 | 2,32,21,435.48 | 5.72% ಕಡಿಮೆ | L1 |
| 2 | ಶ್ರೀ. ಎಂ.ರಮೇಶ್ | | 2,46,35,539.83 | 0.02% ಕಡಿಮೆ | L2 |

ಸದರಿ ಟೆಂಡರ್‌ನಲ್ಲಿ ಕನಿಷ್ಠ ದರ ನಮೂದಿಸಿರುವ ಗುತ್ತಿಗೆದಾರರಾದ (L-1) ಶ್ರೀ. ರಾಮಯ್ಯ ಲೋಕೇಶ್ ರವರ ಟೆಂಡರ್‌ನ್ನು 2012-13ನೇ ಸಾಲಿನ ಲೋಕೋಪಯೋಗಿ ಇಲಾಖೆ, ಬೆಂಗಳೂರು ವೃತ್ತದ ಪರಿಷ್ಕೃತ ದರಗಳಿಗೆ ಹೋಲಿಸಿದಾಗ ಟೆಂಡರ್ ದರವು 5.72% ಕಡಿಮೆ ಇರುತ್ತದೆ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಪ್ರಸ್ತಾಪಿತ ಕಾಮಗಾರಿಯ ಅಂದಾಜು ಮೊತ್ತ ರೂ.255.00 ಲಕ್ಷಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡಿರುವ ಕ್ರಮಕ್ಕೆ ಸ್ಥಿರೀಕರಣ ಹಾಗೂ ಸದರಿ ಟೆಂಡರ್‌ಗೆ ಕಡಿಮೆ ದರ

.....................2

ನಮೂದಿಸಿರುವ ಗುತ್ತಿಗೆದಾರರಾದ ಶ್ರೀ. ರಾಮಯ್ಯ ಲೋಕೇಶ್ ರವರ ಟೆಂಡರ್ ಮೊತ್ತ ರೂ.2,32,21,435.48 ಗಳ ಟೆಂಡರ್‌ಗೆ ಅನುಮೋದನೆ ಕೋರಿ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ:03-08-2013ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ:26-09-2013ರ ನಿರ್ಣಯ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ:26-09-2013ರ ನಿರ್ಣಯವನ್ನು ಒಪ್ಪುವುದು".

ಶ್ರೀ. ಬಿ.ಆರ್.ನಂಜುಂಡಪ್ಪ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ: 26-09-2013ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

(ಬಿ.ಎಸ್.ಸತ್ಯನಾರಾಯಣ)
ಮಹಾಪೌರರು

# ದಿನಾಂಕ:28-10-2013 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 11 (70)/2013-14

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೆಂಗಳೂರು ನಗರದಲ್ಲಿನ ವಾಹನಗಳ ಸಂಖ್ಯೆಯಲ್ಲಿ ಇತ್ತೀಚಿನ ಅನಿರೀಕ್ಷಿತ ಬೆಳವಣಿಗೆಯಿಂದಾಗಿ ವಾಹನ ದಟ್ಟಣೆ ಹೆಚ್ಚಾಗಿದ್ದು, ನಗರ ಪ್ರದೇಶದಲ್ಲಿನ ಸಂಚಾರದ ಸಮಯ ಪ್ರತಿ ಕಿಲೋ. ಮೀಟರ್‌ಗೆ ಸುಮಾರು 10 ರಿಂದ 15 ನಿಮಿಷಗಳಾಗಿರುತ್ತದೆ. ಇದರಿಂದಾಗಿ, ಪ್ರಯಾಣದಲ್ಲಿ ಸಾಕಷ್ಟು ಸಮಯ ವ್ಯರ್ಥವಾಗುವುದರ ಜೊತೆಗೆ ಇಂಧನದ ವ್ಯಯ ಹಾಗೂ ಪರಿಸರ ಮಾಲಿನ್ಯ ಹೆಚ್ಚಾಗಿರುತ್ತದೆ. ವಾಹನ ದಟ್ಟಣೆಯನ್ನು ಕಡಿಮೆಗೊಳಿಸಿ, ಪ್ರಯಾಣ ಸಮಯವನ್ನು ಉಳಿಸುವ ಹಾಗೂ ಇಂಧನವನ್ನು ಮಿತವ್ಯಯಗೊಳಿಸಿ ಶಬ್ದ ಮಾಲಿನ್ಯ, ವಾಯು ಮಾಲಿನ್ಯವನ್ನು ಕಡಿಮೆ ಮಾಡುವ ದೃಷ್ಟಿಯಿಂದ ಪಾಲಿಕೆಯಿಂದ ವಿವಿಧ ಯೋಜನೆಗಳನ್ನು ಅಂದರೆ ರಸ್ತೆ ಅಗಲೀಕರಣ, ಗ್ರೇಡ್ ಸಪರೇಟರ್‌ಗಳ ನಿರ್ಮಾಣ, ಪಾದಚಾರಿ ಸುರಂಗ ಮಾರ್ಗ, ಎಲಿವೇಟೆಡ್ ಕಾರಿಡಾರ್ಸ್ ಇತ್ಯಾದಿ ಯೋಜನೆಗಳನ್ನು ಕೈಗೆತ್ತಿಕೊಳ್ಳಲಾಗಿದೆ. ಈ ನಿಟ್ಟಿನಲ್ಲಿ ಬೆಂಗಳೂರು ನಗರದ ದಕ್ಷಿಣ ಭಾಗದಿಂದ ಕೇಂದ್ರ ಭಾಗಕ್ಕೆ ಸಂಪರ್ಕವನ್ನು ಸುಗಮಗೊಳಿಸುವ ನಿಟ್ಟಿನಲ್ಲಿ ಪ್ರಮುಖ ರಸ್ತೆಯಾದ ಜೆ.ಸಿ.ರಸ್ತೆಯಲ್ಲಿ ವಾಹನ ಸಂಚಾರವನ್ನು ಸಿಗ್ನಲ್ ಮುಕ್ತಗೊಳಿಸುವ ಬಗ್ಗೆ ಚಿಂತನೆ ಮಾಡಲಾಗಿದೆ. ಸದರಿ ರಸ್ತೆಯನ್ನು ಪ್ರಸ್ತುತ ಏಕಮುಖ ಸಂಚಾರಕ್ಕೆ ಮಾತ್ರ ಸೀಮಿತಗೊಂಡಿದ್ದು ಈಗ ದ್ವಿಮುಖ ರಸ್ತೆ ನಿರ್ಮಿಸಲು ಉದ್ದೇಶಿಸಲಾಗಿದೆ. ಈ ಸಂಬಂಧ ಸಲಹೆಗಾರರಾದ ಮೆ: ನಾಗೇಶ್ ಕನ್ಸಲ್ಟೆಂಟ್ಸ್ ರವರನ್ನು ಸಲಹೆಗಾರರನ್ನಾಗಿ ನೇಮಕ ಮಾಡಲಾಗಿದೆ. ಈ ಮಾರ್ಗದಲ್ಲಿ ಕೆಳಕಂಡ ಜಂಕ್ಷನ್‌ಗಳಲ್ಲಿ ಸಿಗ್ನಲ್‌ಗಳಿಂದಾಗಿ ವಾಹನ ನಿಲುಗಡೆ ಇರುತ್ತದೆ.

1. ಮಿನರ್ವ ವೃತ್ತ.
2. ಭಾರತ್ ಟಾಕೀಸ್ ಜಂಕ್ಷನ್
3. ಶಿವಾಜಿ ಟಾಕೀಸ್ ಜಂಕ್ಷನ್
4. ಟೌನ್ ಹಾಲ್ ಜಂಕ್ಷನ್
5. ಎಲ್.ಐ.ಸಿ.ಆಫೀಸ್ ಜಂಕ್ಷನ್
6. ಹಲಸೂರು ಗೇಟ್ ಪೊಲೀಸ್ ಸ್ಟೇಷನ್ ಜಂಕ್ಷನ್
7. ಹಡ್ಸನ್ ವೃತ್ತದ ಜಂಕ್ಷನ್.

ಸುಮಾರು ಎರಡು ಕಿ.ಮೀ. ಉದ್ದದ ಈ ರಸ್ತೆಯಲ್ಲಿ ಮೇಲ್ಕಂಡ (7) ಜಂಕ್ಷನ್‌ಗಳಲ್ಲಿ ಸಿಗ್ನಲ್‌ಗಳಿಂದಾಗಿ ವಾಹನಗಳ ನಿಲುಗಡೆಯಿಂದಾಗಿ ಸಾಕಷ್ಟು ಸಮಯ ಮತ್ತು ಇಂಧನದ ವ್ಯಯವಾಗುವುದನ್ನು ತಪ್ಪಿಸಲು ಮಿನರ್ವ ವೃತ್ತದಿಂದ ಹಡ್ಸನ್ ವೃತ್ತದವರೆಗೆ ಎಲಿವೇಟೆಡ್ ಕಾರಿಡಾರ್ ನಿರ್ಮಿಸಲು ಉದ್ದೇಶಿಸಲಾಗಿದೆ. ಈ ರಸ್ತೆ ಮತ್ತು ಜಂಕ್ಷನ್‌ಗಳಲ್ಲಿನ ವಾಹನಗಳ ಸಂಚಾರದ ಅಧ್ಯಯನ ನಡೆಸಲಾಗಿ ಲಘು ವಾಹನಗಳ ಸಂಖ್ಯೆ ಸುಮಾರು 90% ಇರುವುದು ಕಂಡುಬರುತ್ತದೆ. ಆದ್ದರಿಂದ ಎಲಿವೇಟೆಡ್ ಕಾರಿಡಾರ್‌ಅನ್ನು ಲಘು ವಾಹನಗಳಿಗೆ ಸೀಮಿತಗೊಳಿಸಿ ನಿರ್ಮಿಸಲು ಯೋಜನೆ ಸಿದ್ಧಪಡಿಸಲಾಗಿದೆ.

ಈ ಸಂಬಂಧ ಅಗತ್ಯವಿರುವ ವಿವರವಾದ ಯೋಜನಾ ವರದಿಯನ್ನು ಪಾಲಿಕೆಯ ತಾಂತ್ರಿಕ ಸಲಹಾ ಸಮಿತಿ (ಟಿ.ಎ.ಸಿ) ಮುಂದೆ ಮಂಡಿಸಲಾಯಿತು. ಸಮಿತಿಯ ಕೆಲವು ಅಭಿಪ್ರಾಯಗಳನ್ನು ವರದಿಯಲ್ಲಿ ಅಳವಡಿಸಿಕೊಂಡು ಅಂತಿಮವಾಗಿ ಯೋಜನೆಯನ್ನು ಸಿದ್ಧಪಡಿಸಲಾಗಿದೆ. ಪ್ರಮುಖ ಅಂಶಗಳು ಕೆಳಗಿನಂತಿವೆ;

- ಜೆ.ಸಿ. ರಸ್ತೆಯಲ್ಲಿ ಸಂಚಾರ ಮಾಡುವ ವಾಹನಗಳಲ್ಲಿ ಶೇಕಡ 90% ರಷ್ಟು ಲಘು ವಾಹನಗಳಾಗಿರುವ ಹಿನ್ನೆಲೆಯಲ್ಲಿ ಮೇಲು ಸೇತುವೆಯನ್ನು ಲಘು ವಾಹನಗಳಿಗೆ ಮಾತ್ರ ನಿರ್ಮಿಸುವುದು.

........................2

- ಹಡ್ಸನ್ ವೃತ್ತದ ಸಂಚಾರ ದಟ್ಟಣೆಯನ್ನು ಸಮರ್ಪಕವಾಗಿ ನಿರ್ವಹಿಸಲು ಹಡ್ಸನ್ ವೃತ್ತದಲ್ಲಿ ಗ್ರೇಡ್ ಸೆಪರೇಟರ್ ನಿರ್ಮಿಸುವುದು.
- ಎಲಿವೇಟೆಡ್ ಕಾರಿಡಾರ್‌ಅನ್ನು ಲಘುವಾಹನಗಳ ದ್ವಿಮುಖ ಸಂಚಾರಕ್ಕೆ ನಿರ್ಮಿಸುವುದು. ದಕ್ಷಿಣ ಭಾಗದಿಂದ ಕೇಂದ್ರ ಭಾಗಕ್ಕೆ ಸಂಚರಿಸಲು ವಿ.ವಿ ಪುರಂ ರಸ್ತೆಯಿಂದ ಹಾಗೂ ಆರ್.ವಿ.ರಸ್ತೆಯಿಂದ ಎರಡು ಅಪ್‌ರ್‍ಯಾಂಪ್‌ಗಳನ್ನು ನಿರ್ಮಿಸುವುದು, ಹಡ್ಸನ್ ವೃತ್ತದಲ್ಲಿ ಕೆಂಪೇಗೌಡ ರಸ್ತೆ ಮತ್ತು ಕಸ್ತೂರಬಾ ರಸ್ತೆಗಳಿಗೆ ಡೌನ್‌ರ್‍ಯಾಂಪ್ ನಿರ್ಮಿಸುವುದು.
- ಕೇಂದ್ರ ಭಾಗದಿಂದ ದಕ್ಷಿಣ ಭಾಗಕ್ಕೆ ಸಂಚರಿಸಲು ಕೆಂಪೇಗೌಡ ರಸ್ತೆಯಿಂದ ಅಪ್‌ರ್‍ಯಾಂಪ್ ಮತ್ತು ಆರ್.ವಿ.ರಸ್ತೆಗೆ ಡೌನ್‌ರ್‍ಯಾಂಪ್ ನಿರ್ಮಿಸುವುದು.
- ಮೇಲು ಸೇತುವೆಯನ್ನು ಲಘು ವಾಹನಗಳಿಗೆ ಮಾತ್ರ ವಿನ್ಯಾಸಗೊಳಿಸಿರುವುದರಿಂದ Live Load ಕಡಿಮೆಯಾಗಿ ಸೇತುವೆಯನ್ನು Composite Structure ಅಂದರೆ ಸಿಮೆಂಟ್ ಕಾಂಕ್ರೀಟ್ ಬಳಸಿ Foundation ನಿರ್ಮಿಸುವುದು ಮತ್ತು Structural Steel ಬಳಸಿ Pier, Pier cap & Deck slab ನಿರ್ಮಿಸುವುದು. ಇದರಿಂದ ಯೋಜನಾ ವೆಚ್ಚದಲ್ಲಿ ಗಣನೀಯ ಇಳಿಕೆಯಾಗುವುದಲ್ಲದೆ ನೆಲಮಟ್ಟದ ರಸ್ತೆಯಲ್ಲಿ ಕಡಿಮೆ ಜಾಗ ಆವರಿಸಿಕೊಂಡು ವಾಹನ ಸಂಚಾರಕ್ಕೆ ಹೆಚ್ಚು ಜಾಗ ಒದಗಿಸಬಹುದು ಹಾಗೂ ಕೆಲಸವನ್ನು ಅತ್ಯಂತ ಕಡಿಮೆ ಅವಧಿಯಲ್ಲಿ ನಿರ್ವಹಿಸಿ ಪೂರ್ಣಗೊಳಿಸಬಹುದಾಗಿದೆ.
- ಮೆ: ನಾಗೇಶ್ ಕನ್ಸಲ್ಟೆಂಟ್ಸ್‌ರವರು ಅಂತಿಮಗೊಳಿಸಿದ ವಿನ್ಯಾಸವನ್ನು ಪಾಲಿಕೆಯ ತಾಂತ್ರಿಕ ಸಲಹಾ ಸಮಿತಿ (Technical Advisory Committee) ಸಭೆಯಲ್ಲಿ ಮಂಡಿಸಿ ಅಗತ್ಯವಿರುವ ಭೂಮಿಯ ಬಳಕೆ ಅತ್ಯಂತ ಕಡಿಮೆ ಬರುವ ಹಾಗೆ ಮತ್ತು ಸಭೆಯಲ್ಲಿ ಕೈಗೊಂಡ ನಿರ್ಣಯದಂತೆ ವಿನ್ಯಾಸ ಮತ್ತು General Arrangement o Elevated Corridor ನ್ನು ಹಾಗೂ ವಿವರವಾದ ಯೋಜನಾ ವರದಿಯನ್ನು (DPR) ಅಂತಿಮಗೊಳಿಸಲಾಗಿದೆ.

ಮುಂದುವರೆದು, ದಿನಾಂಕ: 05.03.2013 ರಂದು ಪ್ರಧಾನ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ನಡೆದ Jnnurm ಸಭೆಯಲ್ಲಿ ಈ ಯೋಜನೆಯನ್ನು Jnnurm ನಿಂದ ಸಹಾಯ ಧನ ಪಡೆಯಲು ಈ ಯೋಜನೆಯನ್ನು ಸೇರಿಸಲು ಸೂಚಿಸಿರುತ್ತಾರೆ ಹಾಗೂ ಕೂಡಲೇ ಯೋಜನೆಯನ್ನು ಚಾಲ್ತಿ ದರಪಟ್ಟಿಗಳಿಗೆ ಅನುಗುಣವಾಗಿ ಹಾಗೂ ಜೆ.ಎನ್.ಎನ್.ಯು.ಆರ್.ಎಂ. ಮಾರ್ಗಸೂಚಿಯಂತೆ ತಯಾರಿಸಿ ಸಲ್ಲಿಸಲು ಆದೇಶಿಸಿರುವುದರಿಂದ ಈ ಸಂಬಂಧ ಸಲಹೆಗಾರರಿಗೆ Jnnurm ಮಾರ್ಗಸೂಚಿಯ ಅನ್ವಯ ಯೋಜನಾ ವರದಿಯನ್ನು ತಯಾರಿಸಿ ಸಲ್ಲಿಸಲು ಕೋರಲಾಗಿತ್ತು. ಮೆ: ನಾಗೇಶ್ ಸಲಹೆಗಾರರವರನ್ನು Jnnurm ಮಾರ್ಗಸೂಚಿಯಂತೆ ಡಿ.ಪಿ.ಆರ್.ಅನ್ನು ತಯಾರಿಸಿ ಸಲ್ಲಿಸಿದ್ದು ಸದರಿ ಡಿ.ಪಿ.ಆರ್ ನನ್ನು ದಿನಾಂಕ: 26.04.2013 ರಂದು ಕೆ.ಯು.ಐ.ಡಿ.ಎಫ್.ಸಿ.ಗೆ ಸಲ್ಲಿಸಲಾಗಿರುತ್ತದೆ.

ದಿನಾಂಕ:18-07-2013 ರಂದು State Level Steering Committee(SLSC) ಸಭೆಯು ರಾಜ್ಯದ ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ ನಡೆದಿದ್ದು, ಸಭೆಯಲ್ಲಿ ಸದರಿ ಯೋಜನೆಯನ್ನು ಕೈಗೆತ್ತಿಕೊಳ್ಳುವಂತೆ ತೀರ್ಮಾನಿಸಲಾಗಿದ್ದು ಹಾಗೂ ಸಭೆಯಲ್ಲಿ ಸೂಚಿಸಿದಂತೆ ದಿನಾಂಕ: 01.08.2013ರಂದು Jnnurm ಮಾರ್ಗ ಸೂಚಿಯಂತೆ ತಯಾರಿಸಿದ ಡಿ.ಪಿ.ಆರ್.ನನ್ನು Jnnurm ನಿಂದ ಸಹಾಯಧನ ಪಡೆಯಲು Joint secretary & Mission Director , Ministry of Urban Development, Government of India, JNNURM New Delhi ರವರಿಗೆ ಕಳುಹಿಸಲಾಗಿರುತ್ತದೆ.

Jnnurm ಮಾರ್ಗ ಸೂಚಿಯಂತೆ ಮಿನರ್ವ ವೃತ್ತದಿಂದ ಹಡ್ಸನ್ ವೃತ್ತದವರೆಗೆ ಮೇಲು ಸೇತುವೆ ನಿರ್ಮಾಣಕ್ಕಾಗಿ ಈಗಾಗಲೇ ತಯಾರಿಸಿ ಸಲ್ಲಿಸಿರುವ ಡಿ.ಪಿ.ಆರ್.ನಂತೆ ಯೋಜನಾ ವೆಚ್ಚವು ಈ ಕೆಳಕಂಡಂತೆ ಇರುತ್ತದೆ.

.......................3

| | |
|---|---|
| Cost of Land Acquisition is (Rs. 37590.0X1011) (30%+12%+10%+1%) | Rs. 6,09,01,100/- |
| Cost of Structure Acquisition | Rs. 1,50,00,000/- |
| Total cost is | Rs. 7,59,01,100/- |
| Approx Cost of Elevated Road | Rs. 127,30,00,000/- |
| **Total Project Cost** | **Rs. 134,89,01,100/-** |

ಈ ಸಂಬಂಧ 2008-09ನೇ ಸಾಲಿನ ಕೆ.ಪಿ.ಡಬ್ಲ್ಯೂ.ಡಿ. ದರಪಟ್ಟಿ ಮತ್ತು ಎನ್.ಹೆಚ್. ದರಪಟ್ಟಿಗಳ ಆಧಾರದ ಮೇಲೆ ಸಲಹೆಗಾರರಾದ ಮೆ: ನಾಗೇಶ್ ಕನ್ಸಲ್ಟೆಂಟ್ಸ್ ರವರು ರೂ. 104.40 ಕೋಟಿಗಳ ಮೊತ್ತಕ್ಕೆ ಅಂದಾಜು ಪಟ್ಟಿಯನ್ನು ಸಿದ್ಧಪಡಿಸಿದ್ದು, ಸದರಿ ಕಾಮಗಾರಿಗೆ ಪಾಲಿಕೆಯ 2009-10ನೇ ಸಾಲಿನ ಆಯವ್ಯಯದ ಪುಟ ಸಂಖ್ಯೆ: 104 ರಲ್ಲಿ ರೂ. 20.00 ಕೋಟಿಗಳ ಸಾಂಕೇತಿಕ ಅನುದಾನವನ್ನು ಹಡ್ಸನ್ ವೃತ್ತದಿಂದ ಕಾರಿಡಾರ್ ನಿರ್ಮಾಣ (ನಿಲುಗಡೆ ರಹಿತ) ಲೆಕ್ಕ ಶೀರ್ಷಿಕೆ ಅಡಿಯಲ್ಲಿ ಮೀಸಲಿಡಲಾಗಿದೆ.

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ, ದಿನಾಂಕ:18-07-2013 ರಂದು State Level Steering Committee(SLSC) ಸಭೆಯು ರಾಜ್ಯದ ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ತೀರ್ಮಾನದಂತೆ ದಿನಾಂಕ: 01.08.2013ರಂದು Jnnurm ಮಾರ್ಗ ಸೂಚಿಯಂತೆ ತಯಾರಿಸಿದ ಡಿ.ಪಿ.ಆರ್.ಅನ್ನು Jnnurm ನಿಂದ ಸಹಾಯಧನ ಪಡೆಯಲು Joint secretary & Mission Director , Ministry of Urban Development, Government of India, JNNURM New Delhi ರವರಿಗೆ ಕಳುಹಿಸಿರುವ ಕ್ರಮವನ್ನು ಸ್ಥಿರೀಕರಣಕ್ಕಾಗಿ ಹಾಗೂ ಕಾಮಗಾರಿಯ ಅಂದಾಜು ಮೊತ್ತ ರೂ. **134,89,01,100/-** ಗಳಿಗೆ ಆಡಳಿತಾತ್ಮಕ ಅನುಮೋದನೆ ಕೋರಿ ಘನ ಸರ್ಕಾರಕ್ಕೆ ಪತ್ರ ಬರೆಯುವ ಬಗ್ಗೆ ಅನುಮೋದನೆ ಕೋರಿ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಮುಂದೆ ಮಂಡಿಸಿರುವ ವಿಶೇಷ ಆಯುಕ್ತರು (ಯೋಜನೆ) ದಿನಾಂಕ:03-09-2013ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ:05-10-2013ರ ನಿರ್ಣಯ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ:05-10-2013ರ ನಿರ್ಣಯವನ್ನು ಒಪ್ಪುವುದು".

ಶ್ರೀ. ಬಿ.ಆರ್.ನಂಜುಂಡಪ್ಪ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ: 05-10-2013ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

(ಬಿ.ಎಸ್.ಸತ್ಯನಾರಾಯಣ)
ಮಹಾಪೌರರು

# ದಿನಾಂಕ:28-10-2013 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 12 (71)/2013-14

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಾರ್ಡ್ ಸಂಖ್ಯೆ:126ರ ಮಾರುತಿ ಮಂದಿರ ವ್ಯಾಪ್ತಿಯಲ್ಲಿ ಬರುವ ಕೆನರಾ ಬ್ಯಾಂಕ್ ಕಾಲೋನಿಯಲ್ಲಿರುವ ಉದ್ಯಾನವನಕ್ಕೆ ಕೆನರಾ ಬ್ಯಾಂಕ್ ಸಂಸ್ಥಾಪಕರಾದ ಶ್ರೀ ಅಮ್ಮೆಮ್ಬಾಲ್ ಸುಬ್ಬರಾವ್ ಪೈ ರವರ ಹೆಸರನ್ನು ನಾಮಕರಣ ಮಾಡುವ ಬಗ್ಗೆ ದಿನಾಂಕ: 16-03-2013 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ವಿಷಯದ ಸಂಖ್ಯೆ:457/2012-13 ರಲ್ಲಿ ತೀರ್ಮಾನಿಸಲಾಗಿರುತ್ತದೆ.

ಸದರಿ ವಿಷಯದ ಸಂಬಂಧವಾಗಿ ಸಾರ್ವಜನಿಕರಿಂದ ಆಕ್ಷೇಪಣೆಗಳು / ಸಲಹೆಗಳು ಇದ್ದಲ್ಲಿ ಸಲ್ಲಿಸಲು ತಿಳಿಸಿ, ಪತ್ರಿಕಾ ಪ್ರಕಟಣೆಯನ್ನು ದಿನಾಂಕ:02-06-2013 ರಲ್ಲಿ ಹೊರಡಿಸಲಾಗಿರುತ್ತದೆ. ಸದರಿ ಪತ್ರಿಕಾ ಪ್ರಕಟಣೆಯನ್ನು ಹೊರಡಿಸಲಾದ ಮೂವತ್ತು ದಿನಗಳ ಕಾಲಾವಕಾಶದಲ್ಲಿ, ಆಕ್ಷೇಪಣೆ ಸಲ್ಲಿಸಲು ಅವಕಾಶಗಳು ಇದ್ದು, ಈ ಅವಧಿಯಲ್ಲಿ ಯಾವುದೇ ಆಕ್ಷೇಪಣೆಗಳನ್ನು ಸ್ವೀಕರಿಸಲಾಗಿರುವುದಿಲ್ಲ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಾರ್ಡ್ ಸಂಖ್ಯೆ:126ರ ಮಾರುತಿ ಮಂದಿರ ವ್ಯಾಪ್ತಿಯಲ್ಲಿ ಬರುವ ಕೆನರಾ ಬ್ಯಾಂಕ್ ಕಾಲೋನಿಯಲ್ಲಿರುವ ಉದ್ಯಾನವನಕ್ಕೆ ಕೆನರಾ ಬ್ಯಾಂಕ್ ಸಂಸ್ಥಾಪಕರಾದ ಶ್ರೀ ಅಮ್ಮೆಮ್ಬಾಲ್ ಸುಬ್ಬರಾವ್ ಪೈ ರವರ ಹೆಸರನ್ನು ನಾಮಕರಣ ಮಾಡುವ ಬಗ್ಗೆ ಅಂತಿಮ ತೀರ್ಮಾನಕ್ಕಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:06-10-2013ರ ಟಿಪ್ಪಣಿ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ವಾರ್ಡ್ ಸಂಖ್ಯೆ:126 ಮಾರುತಿ ಮಂದಿರ ವ್ಯಾಪ್ತಿಯಲ್ಲಿ ಬರುವ ಕೆನರಾ ಬ್ಯಾಂಕ್ ಕಾಲೋನಿಯಲ್ಲಿರುವ ಉದ್ಯಾನವನಕ್ಕೆ ಕೆನರಾ ಬ್ಯಾಂಕ್ ಸಂಸ್ಥಾಪಕರಾದ ಶ್ರೀ ಅಮ್ಮೆಮ್ಬಾಲ್ ಸುಬ್ಬರಾವ್ ಪೈ ಉದ್ಯಾನವನ ಎಂದು ನಾಮಕರಣ ಮಾಡುವುದು".

ಶ್ರೀ. ಬಿ.ಆರ್.ನಂಜುಂಡಪ್ಪ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ವಾರ್ಡ್ ಸಂಖ್ಯೆ:126 ಮಾರುತಿ ಮಂದಿರ ವ್ಯಾಪ್ತಿಯಲ್ಲಿ ಬರುವ ಕೆನರಾ ಬ್ಯಾಂಕ್ ಕಾಲೋನಿಯಲ್ಲಿರುವ ಉದ್ಯಾನವನಕ್ಕೆ ಕೆನರಾ ಬ್ಯಾಂಕ್ ಸಂಸ್ಥಾಪಕರಾದ ಶ್ರೀ ಅಮ್ಮೆಮ್ಬಾಲ್ ಸುಬ್ಬರಾವ್ ಪೈ ಉದ್ಯಾನವನ ಎಂದು ನಾಮಕರಣ ಮಾಡುವುದೆಂದು ಸಭೆಯು ತೀರ್ಮಾನಿಸಲಾಯಿತು".

(ಬಿ.ಎಸ್.ಸತ್ಯನಾರಾಯಣ)
ಮಹಾಪೌರರು

# ದಿನಾಂಕ:28-10-2013 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 13 (72)/2013-14

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಾರ್ಡ್ ಸಂಖ್ಯೆ:129ರ ವ್ಯಾಪ್ತಿಯಲ್ಲಿ ಬರುವ ಜ್ಞಾನಜ್ಯೋತಿ ಬಡಾವಣೆ 1ನೇ ಮುಖ್ಯರಸ್ತೆಗೆ ಶ್ರೀ. ಗಂಗರತ್ನಪ್ಪ ರವರ ಹೆಸರನ್ನು ನಾಮಕರಣ ಮಾಡುವ ಬಗ್ಗೆ ದಿನಾಂಕ:16-03-2013 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ವಿಷಯದ ಸಂಖ್ಯೆ:24(429)/2012-13 ರಲ್ಲಿ ತೀರ್ಮಾನಿಸಲಾಗಿರುತ್ತದೆ.

ಸದರಿ ವಿಷಯದ ಸಂಬಂಧವಾಗಿ ಸಾರ್ವಜನಿಕರಿಂದ ಆಕ್ಷೇಪಣೆಗಳು / ಸಲಹೆಗಳು ಇದ್ದಲ್ಲಿ ಸಲ್ಲಿಸಲು ತಿಳಿಸಿ, ಪತ್ರಿಕಾ ಪ್ರಕಟಣೆಯನ್ನು ದಿನಾಂಕ:02-06-2013 ರಲ್ಲಿ ಹೊರಡಿಸಲಾಗಿರುತ್ತದೆ. ಸದರಿ ಪತ್ರಿಕಾ ಪ್ರಕಟಣೆಯನ್ನು ಹೊರಡಿಸಲಾದ ಮೂವತ್ತು ದಿನಗಳ ಕಾಲಾವಕಾಶದಲ್ಲಿ, ಆಕ್ಷೇಪಣೆ ಸಲ್ಲಿಸಲು ಅವಕಾಶಗಳು ಇದ್ದು, ಈ ಅವಧಿಯಲ್ಲಿ ಯಾವುದೇ ಆಕ್ಷೇಪಣೆಗಳು ಸ್ವೀಕರಿಸಲಾಗಿರುವುದಿಲ್ಲ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಾರ್ಡ್ ಸಂಖ್ಯೆ:129ರ ವ್ಯಾಪ್ತಿಯಲ್ಲಿ ಬರುವ ಜ್ಞಾನಜ್ಯೋತಿ ಬಡಾವಣೆ 1ನೇ ಮುಖ್ಯರಸ್ತೆಗೆ ಶ್ರೀ ಗಂಗರತ್ನಪ್ಪ ರವರ ಹೆಸರನ್ನು ನಾಮಕರಣ ಮಾಡುವ ಬಗ್ಗೆ ಅಂತಿಮ ತೀರ್ಮಾನಕ್ಕಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:06-10-2013ರ ಟಿಪ್ಪಣಿ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ವಾರ್ಡ್ ಸಂಖ್ಯೆ:129ರ ವ್ಯಾಪ್ತಿಯಲ್ಲಿ ಬರುವ ಜ್ಞಾನಜ್ಯೋತಿ ಬಡಾವಣೆ 1ನೇ ಮುಖ್ಯರಸ್ತೆಗೆ ಶ್ರೀ ಗಂಗರತ್ನಪ್ಪ ರವರ ಹೆಸರನ್ನು ನಾಮಕರಣ ಮಾಡುವುದು".

ಶ್ರೀ. ಬಿ.ಆರ್.ನಂಜುಂಡಪ್ಪ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ವಾರ್ಡ್ ಸಂಖ್ಯೆ:129ರ ವ್ಯಾಪ್ತಿಯಲ್ಲಿ ಬರುವ ಜ್ಞಾನಜ್ಯೋತಿ ಬಡಾವಣೆ 1ನೇ ಮುಖ್ಯರಸ್ತೆಗೆ ಶ್ರೀ ಗಂಗರತ್ನಪ್ಪ ರವರ ಹೆಸರನ್ನು ನಾಮಕರಣ ಮಾಡುವುದೆಂದು ಸಭೆಯು ತೀರ್ಮಾನಿಸಲಾಯಿತು".

(ಬಿ.ಎಸ್.ಸತ್ಯನಾರಾಯಣ)
ಮಹಾಪೌರರು

# ದಿನಾಂಕ:28-10-2013 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 14 (73)/2013-14

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಾರ್ಡ್ ಸಂಖ್ಯೆ:160ರ ವ್ಯಾಪ್ತಿಯಲ್ಲಿ ಬರುವ ಮೈಸೂರು ರಸ್ತೆಯಿಂದ (ಅಂದರೆ ರಾಜರಾಜೇಶ್ವರಿನಗರ ಮುಖ್ಯದ್ವಾರದಿಂದ (Arch) ಉತ್ತರಹಳ್ಳಿ ಮುಖ್ಯರಸ್ತೆ ಸಂಧಿಸುವ ರಸ್ತೆಗೆ ಪರಮ ಪೂಜ್ಯ " ಶ್ರೀ. ಶ್ರೀ. ಶ್ರೀ ತಿರುಚ್ಚಿ ಮಹಾಸ್ವಾಮಿ ರಸ್ತೆ " ಎಂದು ನಾಮಕರಣ ಮಾಡುವ ಬಗ್ಗೆ ದಿನಾಂಕ:16-03-2013 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ವಿಷಯದ ಸಂಖ್ಯೆ:28(433)/2012-13 ರಲ್ಲಿ ತೀರ್ಮಾನಿಸಲಾಗಿರುತ್ತದೆ.

ಸದರಿ ವಿಷಯದ ಸಂಬಂಧವಾಗಿ ಸಾರ್ವಜನಿಕರಿಂದ ಆಕ್ಷೇಪಣೆಗಳು / ಸಲಹೆಗಳು ಇದ್ದಲ್ಲಿ ಸಲ್ಲಿಸಲು ತಿಳಿಸಿ, ಪತ್ರಿಕಾ ಪ್ರಕಟಣೆಯನ್ನು ದಿನಾಂಕ:04-06-2013 ರಲ್ಲಿ ಹೊರಡಿಸಲಾಗಿರುತ್ತದೆ. ಸದರಿ ಪತ್ರಿಕಾ ಪ್ರಕಟಣೆಯನ್ನು ಹೊರಡಿಸಲಾದ ಮೂವತ್ತು ದಿನಗಳ ಕಾಲಾವಕಾಶದಲ್ಲಿ, ಆಕ್ಷೇಪಣೆ ಸಲ್ಲಿಸಲು ಅವಕಾಶಗಳು ಇದ್ದು, ಈ ಅವಧಿಯಲ್ಲಿ ಯಾವುದೇ ಆಕ್ಷೇಪಣೆಗಳನ್ನು ಸ್ವೀಕರಿಸಲಾಗಿರುವುದಿಲ್ಲ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಾರ್ಡ್ ಸಂಖ್ಯೆ:160 ರ ವ್ಯಾಪ್ತಿಯಲ್ಲಿ ಬರುವ ಮೈಸೂರು ರಸ್ತೆಯಿಂದ (ಅಂದರೆ ರಾಜರಾಜೇಶ್ವರಿನಗರ ಮುಖ್ಯದ್ವಾರದಿಂದ (Arch) ಉತ್ತರಹಳ್ಳಿ ಮುಖ್ಯರಸ್ತೆ ಸಂಧಿಸುವ ರಸ್ತೆಗೆ ಪರಮಪೂಜ್ಯ " ಶ್ರೀ. ಶ್ರೀ. ಶ್ರೀ ತಿರುಚ್ಚಿ ಮಹಾಸ್ವಾಮಿ ರಸ್ತೆ " ಎಂದು ನಾಮಕರಣ ಮಾಡುವ ಬಗ್ಗೆ ಅಂತಿಮ ತೀರ್ಮಾನಕ್ಕಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:06-10-2013ರ ಟಿಪ್ಪಣಿ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ವಾರ್ಡ್ ಸಂಖ್ಯೆ:160ರ ವ್ಯಾಪ್ತಿಯಲ್ಲಿ ಬರುವ ಮೈಸೂರು ರಸ್ತೆಯಿಂದ (ಅಂದರೆ ರಾಜರಾಜೇಶ್ವರಿನಗರ ಮುಖ್ಯದ್ವಾರದಿಂದ (Arch) ಉತ್ತರಹಳ್ಳಿ ಮುಖ್ಯರಸ್ತೆ ಸಂಧಿಸುವ ರಸ್ತೆಗೆ ಪರಮಪೂಜ್ಯ " ಶ್ರೀ ಶ್ರೀ ಶ್ರೀ ತಿರುಚ್ಚಿ ಮಹಾಸ್ವಾಮಿ ರಸ್ತೆ " ಎಂದು ನಾಮಕರಣ ಮಾಡುವುದು".

ಶ್ರೀ. ಬಿ.ಆರ್.ನಂಜುಂಡಪ್ಪ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ವಾರ್ಡ್ ಸಂಖ್ಯೆ:160ರ ವ್ಯಾಪ್ತಿಯಲ್ಲಿ ಬರುವ ಮೈಸೂರು ರಸ್ತೆಯಿಂದ (ಅಂದರೆ ರಾಜರಾಜೇಶ್ವರಿನಗರ ಮುಖ್ಯದ್ವಾರದಿಂದ (Arch) ಉತ್ತರಹಳ್ಳಿ ಮುಖ್ಯರಸ್ತೆ ಸಂಧಿಸುವ ರಸ್ತೆಗೆ ಪರಮ ಪೂಜ್ಯ " ಶ್ರೀ ಶ್ರೀ ಶ್ರೀ ತಿರುಚ್ಚಿ ಮಹಾಸ್ವಾಮಿ ರಸ್ತೆ " ಎಂದು ನಾಮಕರಣ ಮಾಡುವುದೆಂದು ಸಭೆಯು ತೀರ್ಮಾನಿಸಲಾಯಿತು".

(ಬಿ.ಎಸ್.ಸತ್ಯನಾರಾಯಣ)
ಮಹಾಪೌರರು

# ದಿನಾಂಕ:28-10-2013 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 15 (74)/2013-14

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ದಿನಾಂಕ:29-12-2012 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ, ವಾರ್ಡ್ ಸಂಖ್ಯೆ:67 ನಾಗಪುರ ವ್ಯಾಪ್ತಿಯಲ್ಲಿ ಬರುವ ರಸ್ತೆಗಳಿಗೆ ಕೆಳಕಂಡಂತೆ ನಾಮಕರಣ ಮಾಡುವ ಬಗ್ಗೆ ಆಯುಕ್ತರು ಕ್ರಮ ಕೈಗೊಳ್ಳುವುದು ಎಂದು ತೀರ್ಮಾನಿಸಲಾಗಿದೆ.

1) 11ನೇ ಮುಖ್ಯರಸ್ತೆಗೆ ಕೆ.ಬಿ.ವೆಂಕಟೇಶ್ ರಸ್ತೆ ಎಂದು ನಾಮಕರಣ ಮಾಡುವುದು.
2) 12ನೇ ಮುಖ್ಯರಸ್ತೆಗೆ ಛೇರ್‌ಮನ್ ಎಂ.ಚಿನ್ನಪ್ಪ ರಸ್ತೆ ಎಂದು ನಾಮಕರಣ ಮಾಡುವುದು.
3) 14ನೇ ಮುಖ್ಯರಸ್ತೆಗೆ ಸಿ. ಮುದ್ದಯ್ಯ ರಸ್ತೆ ಎಂದು ನಾಮಕರಣ ಮಾಡುವುದು.

ಸದರಿ ವಿಷಯದ ಸಂಬಂಧವಾಗಿ ಸಾರ್ವಜನಿಕರಿಂದ ಆಕ್ಷೇಪಣೆಗಳು / ಸಲಹೆಗಳು ಇದ್ದಲ್ಲಿ ಸಲ್ಲಿಸಲು ತಿಳಿಸಿ, ಪತ್ರಿಕಾ ಪ್ರಕಟಣೆಯನ್ನು ದಿನಾಂಕ:03-02-2013 ಮತ್ತು 04-02-2013 ರಲ್ಲಿ ಹೊರಡಿಸಲಾಗಿರುತ್ತದೆ. ಸದರಿ ಪತ್ರಿಕಾ ಪ್ರಕಟಣೆಯನ್ನು ಹೊರಡಿಸಲಾದ ಮೂವತ್ತು ದಿನಗಳ ಕಾಲಾವಕಾಶದಲ್ಲಿ, ಆಕ್ಷೇಪಣೆ ಸಲ್ಲಿಸಲು ಅವಕಾಶಗಳು ಇದ್ದು, ಈ ಅವಧಿಯಲ್ಲಿ ಯಾವುದೇ ಆಕ್ಷೇಪಣೆಗಳನ್ನು ಸ್ವೀಕರಿಸಲಾಗಿರುವುದಿಲ್ಲ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಾರ್ಡ್ ಸಂಖ್ಯೆ:67, ನಾಗಪುರ ವ್ಯಾಪ್ತಿಯಲ್ಲಿ ಬರುವ ರಸ್ತೆಗಳಿಗೆ ಮೇಲ್ಕಂಡಂತೆ ನಾಮಕರಣ ಮಾಡುವ ಬಗ್ಗೆ ಅಂತಿಮ ತೀರ್ಮಾನಕ್ಕಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:06-10-2013ರ ಟಿಪ್ಪಣಿ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ವಾರ್ಡ್ ಸಂಖ್ಯೆ:67, ನಾಗಪುರ ವ್ಯಾಪ್ತಿಯಲ್ಲಿ ಬರುವ 11ನೇ ಮುಖ್ಯರಸ್ತೆಗೆ ಕೆ.ಬಿ.ವೆಂಕಟೇಶ್ ರಸ್ತೆ, 12ನೇ ಮುಖ್ಯರಸ್ತೆಗೆ ಛೇರ್‌ಮನ್ ಎಂ.ಚಿನ್ನಪ್ಪ ರಸ್ತೆ, 14ನೇ ಮುಖ್ಯರಸ್ತೆಗೆ ಸಿ.ಮುದ್ದಯ್ಯ ರಸ್ತೆ ಎಂದು ನಾಮಕರಣ ಮಾಡುವುದು".

ಶ್ರೀ. ಬಿ.ಆರ್.ನಂಜುಂಡಪ್ಪ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ವಾರ್ಡ್ ಸಂಖ್ಯೆ:67, ನಾಗಪುರ ವ್ಯಾಪ್ತಿಯಲ್ಲಿ ಬರುವ 11ನೇ ಮುಖ್ಯರಸ್ತೆಗೆ ಕೆ.ಬಿ.ವೆಂಕಟೇಶ್ ರಸ್ತೆ, 12ನೇ ಮುಖ್ಯರಸ್ತೆಗೆ ಛೇರ್‌ಮನ್ ಎಂ.ಚಿನ್ನಪ್ಪ ರಸ್ತೆ, 14ನೇ ಮುಖ್ಯರಸ್ತೆಗೆ ಸಿ.ಮುದ್ದಯ್ಯ ರಸ್ತೆ ಎಂದು ನಾಮಕರಣ ಮಾಡುವುದೆಂದು ಸಭೆಯು ತೀರ್ಮಾನಿಸಲಾಯಿತು".

(ಬಿ.ಎಸ್.ಸತ್ಯನಾರಾಯಣ)
ಮಹಾಪೌರರು

## ದಿನಾಂಕ:28-10-2013 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

### ವಿಷಯದ ಸಂಖ್ಯೆ : 16 (75)/2013-14

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಬರುವ ಕಲಾಸಿ ಪಾಳ್ಯಂ ಬಸ್ ನಿಲ್ದಾಣಕ್ಕೆ ಬೆಂಗಳೂರು ಮಹಾನಗರ ಪಾಲಿಕೆಯ ಮಾಜಿ ಮಹಾಪೌರರು, ಕನ್ನಡ ಸಾಹಿತ್ಯ ಪರಿಷತ್ತಿನ ಮಾಜಿ ಅಧ್ಯಕ್ಷರು ಆದ "ಶ್ರೀ. ಜಿ.ನಾರಾಯಣ್" ರವರ ಹೆಸರನ್ನು ನಾಮಕರಣ ಮಾಡುವ ಬಗ್ಗೆ ದಿನಾಂಕ:16-03-2013 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ವಿಷಯದ ಸಂಖ್ಯೆ:462/2012-13 ರಲ್ಲಿ ತೀರ್ಮಾನಿಸಲಾಗಿರುತ್ತದೆ.

ಸದರಿ ವಿಷಯದ ಸಂಬಂಧವಾಗಿ ಸಾರ್ವಜನಿಕರಿಂದ ಆಕ್ಷೇಪಣೆಗಳು / ಸಲಹೆಗಳು ಇದ್ದಲ್ಲಿ ಸಲ್ಲಿಸಲು ತಿಳಿಸಿ, ಪತ್ರಿಕಾ ಪ್ರಕಟಣೆಯನ್ನು ದಿನಾಂಕ:13-06-2013 ರಲ್ಲಿ ಹೊರಡಿಸಲಾಗಿರುತ್ತದೆ. ಸದರಿ ಪತ್ರಿಕಾ ಪ್ರಕಟಣೆಯನ್ನು ಹೊರಡಿಸಲಾದ ಮೂವತ್ತು ದಿನಗಳ ಕಾಲಾವಕಾಶದಲ್ಲಿ, ಆಕ್ಷೇಪಣೆ ಸಲ್ಲಿಸಲು ಅವಕಾಶಗಳು ಇದ್ದು, ಈ ಅವಧಿಯಲ್ಲಿ ಯಾವುದೇ ಆಕ್ಷೇಪಣೆಗಳನ್ನು ಸ್ವೀಕರಿಸಲಾಗಿರುವುದಿಲ್ಲ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವ ಕಲಾಸಿ ಪಾಳ್ಯಂ ಬಸ್ ನಿಲ್ದಾಣಕ್ಕೆ ಬೆಂಗಳೂರು ಮಹಾನಗರ ಪಾಲಿಕೆಯ ಮಾಜಿ ಮಹಾಪೌರರು, ಕನ್ನಡ ಸಾಹಿತ್ಯ ಪರಿಷತ್ತಿನ ಮಾಜಿ ಅಧ್ಯಕ್ಷರು ಆದ "ಶ್ರೀ. ಜಿ.ನಾರಾಯಣ್" ರವರ ಹೆಸರನ್ನು ನಾಮಕರಣ ಮಾಡುವ ಬಗ್ಗೆ ಅಂತಿಮ ತೀರ್ಮಾನಕ್ಕಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:06-10-2013ರ ಟಿಪ್ಪಣಿ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವ ಕಲಾಸಿಪಾಳ್ಯಂ ಬಸ್ ನಿಲ್ದಾಣಕ್ಕೆ ಬೆಂಗಳೂರು ಮಹಾನಗರ ಪಾಲಿಕೆಯ ಮಾಜಿ ಮಹಾಪೌರರು, ಕನ್ನಡ ಸಾಹಿತ್ಯ ಪರಿಷತ್ತಿನ ಮಾಜಿ ಅಧ್ಯಕ್ಷರಾದ "ಶ್ರೀ. ಜಿ.ನಾರಾಯಣ್" ರವರ ಹೆಸರನ್ನು ನಾಮಕರಣ ಮಾಡುವುದು".

ಶ್ರೀ. ಬಿ.ಆರ್.ನಂಜುಂಡಪ್ಪ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವ ಕಲಾಸಿಪಾಳ್ಯಂ ಬಸ್ ನಿಲ್ದಾಣಕ್ಕೆ ಬೆಂಗಳೂರು ಮಹಾನಗರ ಪಾಲಿಕೆಯ ಮಾಜಿ ಮಹಾಪೌರರು, ಕನ್ನಡ ಸಾಹಿತ್ಯ ಪರಿಷತ್ತಿನ ಮಾಜಿ ಅಧ್ಯಕ್ಷರಾದ "ಶ್ರೀ. ಜಿ.ನಾರಾಯಣ್" ರವರ ಹೆಸರನ್ನು ನಾಮಕರಣ ಮಾಡುವುದೆಂದು ಸಭೆಯು ತೀರ್ಮಾನಿಸಲಾಯಿತು".

(ಬಿ.ಎಸ್.ಸತ್ಯನಾರಾಯಣ)
ಮಹಾಪೌರರು

## ದಿನಾಂಕ:28-10-2013 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 17 (76)/2013-14

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಾರ್ಡ್ ಸಂಖ್ಯೆ:160 ರಾಜರಾಜೇಶ್ವರಿನಗರ ಮಾವಿನ ತೋಪ್ ಉದ್ಯಾನವನಕ್ಕೆ "ಶ್ರೀ ಸ್ವಾಮಿ ವಿವೇಕಾನಂದ ಉದ್ಯಾನವನ ಬಿ.ಎಂ.ಇ.ಎಲ್ ಬಡಾವಣೆ" ಎಂದು ನಾಮಕರಣ ಮಾಡುವ ಬಗ್ಗೆ ದಿನಾಂಕ:16-03-2013 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ವಿಷಯದ ಸಂಖ್ಯೆ:29(434)/2012-13 ರಲ್ಲಿ ತೀರ್ಮಾನಿಸಲಾಗಿರುತ್ತದೆ.

ಸದರಿ ವಿಷಯದ ಸಂಬಂಧವಾಗಿ ಸಾರ್ವಜನಿಕರಿಂದ ಆಕ್ಷೇಪಣೆಗಳು / ಸಲಹೆಗಳು ಇದ್ದಲ್ಲಿ ಸಲ್ಲಿಸಲು ತಿಳಿಸಿ, ಪತ್ರಿಕಾ ಪ್ರಕಟಣೆಯನ್ನು ದಿನಾಂಕ:02-06-2013 ರಲ್ಲಿ ಹೊರಡಿಸಲಾಗಿರುತ್ತದೆ. ಸದರಿ ಪತ್ರಿಕಾ ಪ್ರಕಟಣೆಯನ್ನು ಹೊರಡಿಸಲಾದ ಮೂವತ್ತು ದಿನಗಳ ಕಾಲಾವಕಾಶದಲ್ಲಿ, ಆಕ್ಷೇಪಣೆ ಸಲ್ಲಿಸಲು ಅವಕಾಶಗಳು ಇದ್ದು, ಈ ಅವಧಿಯಲ್ಲಿ ಯಾವುದೇ ಆಕ್ಷೇಪಣೆಗಳನ್ನು ಸ್ವೀಕರಿಸಲಾಗಿರುವುದಿಲ್ಲ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಾರ್ಡ್ ಸಂಖ್ಯೆ:160 ರಾಜರಾಜೇಶ್ವರಿನಗರ ಮಾವಿನ ತೋಪ್ ಉದ್ಯಾನವನಕ್ಕೆ "ಶ್ರೀ ಸ್ವಾಮಿ ವಿವೇಕಾನಂದ ಉದ್ಯಾನವನ ಬಿ.ಎಂ.ಇ.ಎಲ್ ಬಡಾವಣೆ" ಎಂದು ನಾಮಕರಣ ಮಾಡುವ ಬಗ್ಗೆ ಅಂತಿಮ ತೀರ್ಮಾನಕ್ಕಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:08-10-2013ರ ಟಿಪ್ಪಣಿ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ವಾರ್ಡ್ ಸಂಖ್ಯೆ:160 ರಾಜರಾಜೇಶ್ವರಿನಗರ ಮಾವಿನ ತೋಪ್ ಉದ್ಯಾನವನಕ್ಕೆ "ಶ್ರೀ ಸ್ವಾಮಿ ವಿವೇಕಾನಂದ ಉದ್ಯಾನವನ ಬಿ.ಎಂ.ಇ.ಎಲ್. ಬಡಾವಣೆ" ಎಂದು ನಾಮಕರಣ ಮಾಡುವುದು".

ಶ್ರೀ. ಬಿ.ಆರ್.ನಂಜುಂಡಪ್ಪ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

**ನಿರ್ಣಯ:** "ವಾರ್ಡ್ ಸಂಖ್ಯೆ:160 ರಾಜರಾಜೇಶ್ವರಿನಗರ ಮಾವಿನ ತೋಪ್ ಉದ್ಯಾನವನಕ್ಕೆ "ಶ್ರೀ ಸ್ವಾಮಿ ವಿವೇಕಾನಂದ ಉದ್ಯಾನವನ ಬಿ.ಎಂ.ಇ.ಎಲ್. ಬಡಾವಣೆ" ಎಂದು ನಾಮಕರಣ ಮಾಡುವುದೆಂದು ಸಭೆಯು ತೀರ್ಮಾನಿಸಲಾಯಿತು".

(ಬಿ.ಎಸ್.ಸತ್ಯನಾರಾಯಣ)
ಮಹಾಪೌರರು

## ದಿನಾಂಕ:28-10-2013 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 18 (77)/2013-14

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಾರ್ಡ್ ಸಂಖ್ಯೆ:82, ಗರುಡಾಚಾರ್ ಪಾಳ್ಯ ವ್ಯಾಪ್ತಿಯಲ್ಲಿ ಬರುವ ಆರ್.ಹೆಚ್.ಬಿ. ಕಾಲೋನಿ ಪ್ರದೇಶಕ್ಕೆ "ಶ್ರೀ ಎಂ.ನಾಗಪ್ಪ ಬಡಾವಣೆ" ಎಂದು ಪುನರ್ ನಾಮಕರಣ ಮಾಡುವ ಬಗ್ಗೆ ದಿನಾಂಕ:16-03-2013 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ವಿಷಯದ ಸಂಖ್ಯೆ:26(431)//2012-13 ರಲ್ಲಿ ತೀರ್ಮಾನಿಸಲಾಗಿರುತ್ತದೆ.

ಸದರಿ ವಿಷಯದ ಸಂಬಂಧವಾಗಿ ಸಾರ್ವಜನಿಕರಿಂದ ಆಕ್ಷೇಪಣೆಗಳು / ಸಲಹೆಗಳು ಇದ್ದಲ್ಲಿ ಸಲ್ಲಿಸಲು ತಿಳಿಸಿ, ಪತ್ರಿಕಾ ಪ್ರಕಟಣೆಯನ್ನು ದಿನಾಂಕ:02-06-2013 ರಲ್ಲಿ ಹೊರಡಿಸಲಾಗಿರುತ್ತದೆ. ಸದರಿ ಪತ್ರಿಕಾ ಪ್ರಕಟಣೆಯನ್ನು ಹೊರಡಿಸಲಾದ ಮೂವತ್ತು ದಿನಗಳ ಕಾಲಾವಕಾಶದಲ್ಲಿ, ಆಕ್ಷೇಪಣೆ ಸಲ್ಲಿಸಲು ಅವಕಾಶಗಳು ಇದ್ದು, ಈ ಅವಧಿಯಲ್ಲಿ ಯಾವುದೇ ಆಕ್ಷೇಪಣೆಗಳನ್ನು ಸ್ವೀಕರಿಸಲಾಗಿರುವುದಿಲ್ಲ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಾರ್ಡ್ ಸಂಖ್ಯೆ:82, ಗರುಡಾಚಾರ್ ಪಾಳ್ಯ ವ್ಯಾಪ್ತಿಯಲ್ಲಿ ಬರುವ ಆರ್.ಹೆಚ್.ಬಿ. ಕಾಲೋನಿ ಪ್ರದೇಶಕ್ಕೆ "ಶ್ರೀ ಎಂ.ನಾಗಪ್ಪ ಬಡಾವಣೆ" ಎಂದು ಪುನರ್ ನಾಮಕರಣ ಮಾಡುವ ಬಗ್ಗೆ ಅಂತಿಮ ತೀರ್ಮಾನಕ್ಕಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:06-10-2013ರ ಟಿಪ್ಪಣಿ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ವಾರ್ಡ್ ಸಂಖ್ಯೆ:82, ಗರುಡಾಚಾರ್ ಪಾಳ್ಯ ವ್ಯಾಪ್ತಿಯಲ್ಲಿ ಬರುವ ಆರ್.ಹೆಚ್.ಬಿ. ಕಾಲೋನಿ ಪ್ರದೇಶಕ್ಕೆ "ಶ್ರೀ. ಎಂ.ನಾಗಪ್ಪ ಬಡಾವಣೆ" ಎಂದು ನಾಮಕರಣ ಮಾಡುವುದು".

ಶ್ರೀ. ಬಿ.ಆರ್.ನಂಜುಂಡಪ್ಪ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ವಾರ್ಡ್ ಸಂಖ್ಯೆ:82, ಗರುಡಾಚಾರ್ ಪಾಳ್ಯ ವ್ಯಾಪ್ತಿಯಲ್ಲಿ ಬರುವ ಆರ್.ಹೆಚ್.ಬಿ. ಕಾಲೋನಿ ಪ್ರದೇಶಕ್ಕೆ "ಶ್ರೀ. ಎಂ.ನಾಗಪ್ಪ ಬಡಾವಣೆ" ಎಂದು ನಾಮಕರಣ ಮಾಡುವುದೆಂದು ಸಭೆಯು ತೀರ್ಮಾನಿಸಲಾಯಿತು".

(ಬಿ.ಎಸ್.ಸತ್ಯನಾರಾಯಣ)
ಮಹಾಪೌರರು

## C ದಿನಾಂಕ:28-10-2013 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 19 (78)/2013-14

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಪಾಲಿಕೆಯ ವತಿಯಿಂದ, ದಲಿತ ಸಂಘರ್ಷ ಸಮಿತಿ (ರಿ) (ಸಮತಾವಾದ) ರಾಜ್ಯ ಸಮಿತಿ ರವರು ಯಲಹಂಕ ಉಪನಗರದ ದೊಡ್ಡಬಳ್ಳಾಪುರ ರಸ್ತೆಯ ಯಲಹಂಕ ಪೋಲಿಸ್ ಠಾಣೆ ವೃತ್ತ ಅಥವಾ ಎನ್.ಇ.ಎಸ್. ವೃತ್ತ ಅಥವಾ ಎಸ್ಕಾರ್ಟ್ ಕಾರ್ಖಾನೆಯ ಮುಂಭಾಗದಲ್ಲಿರುವ ಉದ್ಯಾನವನದ ಹತ್ತಿರ ಡಾ.ಬಿ.ಆರ್.ಅಂಬೇಡ್ಕರ್ ಪ್ರತಿಮೆ ಸ್ಥಾಪಿಸಲು ಮತ್ತು ಸದರಿ ಉದ್ಯಾನವನಕ್ಕೆ ಡಾ.ಬಿ.ಆರ್.ಅಂಬೇಡ್ಕರ್ ಎಂದು ನಾಮಕರಣ ಮಾಡಲು ಕೋರಿ ಮನವಿ ಸಲ್ಲಿಸಿರುತ್ತಾರೆ.

ಯಲಹಂಕ ವಿಧಾನಸಭಾ ಕ್ಷೇತ್ರ ಮಾನ್ಯ ಶಾಸಕರು ಮತ್ತು ಸ್ಥಳೀಯ ವಾರ್ಡ್ ಸಂಖ್ಯೆ: 3 ರ ಪಾಲಿಕೆ ಸದಸ್ಯರು ಸಹ ದೊಡ್ಡಬಳ್ಳಾಪುರ ರಸ್ತೆ ಎಸ್ಕಾರ್ಟ್ ಮುಂಭಾಗ ಪಾರ್ಕ್ ಹತ್ತಿರ ಇರುವ ಜಾಗದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ರವರ ಕಂಚಿನ ಪ್ರತಿಮೆಯನ್ನು ಸ್ಥಾಪಿಸಲು ಕೋರಿರುತ್ತಾರೆ.

ಡಾ.ಬಿ.ಆರ್. ಅಂಬೇಡ್ಕರ್ ರವರ 9 ಅಡಿ ಪ್ರತಿಮೆ ಸ್ಥಾಪಿಸಲು, ಪಾಲಿಕೆಯ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ವಿಷಯದ ಸಂಖ್ಯೆ: 377/12-13, ದಿನಾಂಕ: 06-03-2012ರಲ್ಲಿ (1) ಒಟ್ಟು 23.50 ಲಕ್ಷಗಳ ಅಂದಾಜು ಪಟ್ಟಿಗೆ ಕಾಮಗಾರಿ ಸಂಕೇತ ನೀಡುವುದು (2) ಅಂದಾಜು ಪಟ್ಟಿಗೆ ಆಡಳಿತಾತ್ಮಕ, ತಾಂತ್ರಿಕ ಅನುಮೋದನೆ ಮಂಜೂರಾತಿ ನೀಡುವುದು (3) ಈ ಕಾಮಗಾರಿಯನ್ನು ತುರ್ತಾಗಿ ಕೆ.ಆರ್.ಐ.ಡಿ.ಎಲ್ ಮುಖಾಂತರ ಕೈಗೊಳ್ಳಲು ಮಂಜೂರಾತಿ ನೀಡುವುದು (3) ಈ ಕಾಮಗಾರಿಯನ್ನು ತುರ್ತಾಗಿ ಕೆ.ಆರ್.ಐ.ಡಿ.ಎಲ್ ಮುಖಾಂತರ ಕೈಗೊಳ್ಳಲು ಚಿತ್ರಕಲಾ ಪರಿಷತ್‌ರವರಿಗೆ ಮುಂಗಡ ರೂ. 12.00 ಲಕ್ಷಗಳನ್ನು ಪಾವತಿಸಲು (4) ಉದ್ಯಾನವನದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಪ್ರತಿಮೆಯನ್ನು ಸ್ಥಾಪಿಸಲು ನಿರ್ಣಯ ಸಹ ದೊರೆತ್ತಿದ್ದು, ಈ ಹಿಂದೆ ಸದರಿ ಪ್ರತಿಮೆಗೆ ರೂ. 10.00 ಲಕ್ಷ ಮಂಜೂರಾತಿ ದೊರೆತಿರುತ್ತದೆ. ಇದನ್ನು ಹೊರತು ಪಡಿಸಿ, ಹೆಚ್ಚುವರಿಯಾಗಿ ಅಂದಾಜು ಮೊತ್ತ ರೂ. 23.50 ಲಕ್ಷಕ್ಕೆ ಅನುಮೋದನೆ ದೊರೆತಿರುತ್ತದೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಯಲಹಂಕ ವಲಯದ ದೊಡ್ಡಬಳ್ಳಾಪುರ ರಸ್ತೆ ಎಸ್ಕಾರ್ಟ್ ಮುಂಭಾಗ ಪಾರ್ಕ್ ಹತ್ತಿರ ಇರುವ ಜಾಗದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ರವರ ಕಂಚಿನ ಪ್ರತಿಮೆ ಸ್ಥಾಪಿಸಲು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯ ಮುಂದೆ ನಿರ್ಣಯಕ್ಕಾಗಿ ಪ್ರತ್ಯೇಕವಾಗಿ ಕಡತವನ್ನು ಮಂಡಿಸಲಾಗಿರತ್ತದೆ.

ಮುಂದುವರೆದಂತೆ, ಯಲಹಂಕ ವಲಯದ ದೊಡ್ಡಬಳ್ಳಾಪುರ ರಸ್ತೆ ಎಸ್ಕಾರ್ಟ್ ಮುಂಭಾಗ ಇರುವ ಉದ್ಯಾನವನವನ್ನು ಡಾ.ಬಿ.ಆರ್.ಅಂಬೇಡ್ಕರ್ ಉದ್ಯಾನವನವೆಂದು ನಾಮಕರಣ ಮಾಡುವ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ:03-08-2013ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:01-10-2013ರ ನಿರ್ಣಯ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:01-10-2013ರ ನಿರ್ಣಯವನ್ನು ಒಪ್ಪುತ್ತಾ, ಅಂಬೇಡ್ಕರ್ ಉದ್ಯಾನವನವೆಂದು ನಾಮಕರಣ ಮಾಡುವುದು".

ಶ್ರೀ. ಬಿ.ಆರ್.ನಂಜುಂಡಪ್ಪ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

**<u>ನಿರ್ಣಯ:</u>** "ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ: 01-10-2013ರ ನಿರ್ಣಯವನ್ನು ಒಪ್ಪುತ್ತಾ, ಅಂಬೇಡ್ಕರ್ ಉದ್ಯಾನವನವೆಂದು ನಾಮಕರಣ ಮಾಡುವುದೆಂದು ಸಭೆಯು ತೀರ್ಮಾನಿಸಲಾಯಿತು".

(ಬಿ.ಎಸ್.ಸತ್ಯನಾರಾಯಣ)
ಮಹಾಪೌರರು

# ದಿನಾಂಕ:28-10-2013 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 20 (79)/2013-14

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಾರ್ಡ್ ಸಂಖ್ಯೆ: 181ರ ವ್ಯಾಪ್ತಿಯಲ್ಲಿ ಬರುವ ಇಸ್ರೋ ಬಡಾವಣೆ, 1ನೇ ಮುಖ್ಯರಸ್ತೆ, 7ನೇ ಅಡ್ಡರಸ್ತೆಯಲ್ಲಿ ನೂತನವಾಗಿ ನಿರ್ಮಾಣವಾಗುತ್ತಿರುವ ಉದ್ಯಾನವನಕ್ಕೆ **"ಪ್ರೋ. ದೀನ್ ದಯಾಳ್ ಉಪಾಧ್ಯಾಯ ಉದ್ಯಾನವನ"** ಎಂದು ನಾಮಕರಣ ಮಾಡಲು, ದಿನಾಂಕ:30-08-2012ರಂದು ನಡೆದ ಪಾಲಿಕೆಯ ವಿಷಯದ ಸಂಖ್ಯೆ 40(173) 2012-13 ರಲ್ಲಿ ಕೈಗೊಂಡಿರುವ ನಿರ್ಣಯವನ್ನು ರದ್ದುಪಡಿಸಲು ಕೋರಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿದ್ದು, ಈ ಸಂಬಂಧ ಸರ್ಕಾರವು ದಿನಾಂಕ:24-01-2013ರಂದು ನಗರ ಪಾಲಿಕೆಗೆ ಕಾರಣ ಕೇಳುವ ನೋಟಿಸ್ ಜಾರಿ ಮಾಡಿ ಪಾಲಿಕೆಯ ಆಯುಕ್ತರ ಪ್ರಸ್ತಾವನೆಯನ್ನು ಪರಿಶೀಲಿಸಿದ ನಂತರ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ನಾಮಕರಣ ಸಂಬಂಧ ದಿನಾಂಕ:30-08-2012ರಂದು ವಿಷಯದ ಸಂಖ್ಯೆ:40(173)/2012-13ರಲ್ಲಿ ಕೈಗೊಂಡಿರುವ ನಿರ್ಣಯವು ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ (ಸಾರ್ವಜನಿಕ ಸ್ಥಳಕ್ಕೆ ನಾಮಕರಣ ಮಾಡುವುದು) ನಿಯಮಗಳು 2008ರ 7ರ ಸ್ಪಷ್ಟ ಉಲ್ಲಂಘನೆಯಾಗಿರುತ್ತದೆ. ಆದುದರಿಂದ, ಸದರಿ ನಿರ್ಣಯವನ್ನು ಏಕೆ ರದ್ದುಪಡಿಸಬಾರದು ಎಂಬ ಬಗ್ಗೆ ಕೆಂ.ಎಂ.ಸಿ ಕಾಯ್ದೆಯ ಕಲಂ 98(2)ರನ್ವಯ ಈ ನೋಟಿಸ್ ಜಾರಿ ಮಾಡಿದ್ದು ಈ ಸಂಬಂಧ ಆಕ್ಷೇಪಣೆಗಳಿದ್ದಲ್ಲಿ ಈ ನೋಟೀಸ್ ತಲುಪಿದ ದಿನಾಂಕದಿಂದ 15 ದಿನಗಳೊಳಗಾಗಿ ಲಿಖಿತ ಹೇಳಿಕೆಯನ್ನು ಸಂಬಂಧಿಸಿದ ಸ್ಥಾಯಿ ಸಮಿತಿಯಿಂದ ಪಡೆದು ಸರ್ಕಾರಕ್ಕೆ ಸಲ್ಲಿಸುವಂತೆ ಸೂಚಿಸಲಾಗಿದೆ. ನಿಗಧಿತ ದಿನಾಂಕದೊಳಗಾಗಿ ಲಿಖಿತ ಹೇಳಿಕೆ ಬಾರದಿದ್ದಲ್ಲಿ ನಿಯಮಾನುಸಾರ ಏಕಪಕ್ಷೀಯವಾಗಿ ನಿರ್ಣಯವನ್ನು ರದ್ದುಪಡಿಸಲು ಕ್ರಮ ಕೈಗೊಳ್ಳಲಾಗುವುದೆಂದು ಸೂಚಿಸಿರುತ್ತಾರೆ.

ಆದುದರಿಂದ, ದಿನಾಂಕ:24-01-2013ರ ಕಾರಣ ಕೇಳುವ ನೋಟಿಸ್‌ನ್ನು ದಾಖಲಾತಿಗಾಗಿ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:03-08-2013ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಪರಿಶೀಲಿಸಲಾಗಿ, ಸ್ಥಳೀಯ ಪ್ರದೇಶದ ಸಾರ್ವಜನಿಕರ ಕೋರಿಕೆಯ ಮೇರೆಗೆ ಸದರಿ ಉದ್ಯಾನವನಕ್ಕೆ "ಪ್ರೋ ದೀನ್ ದಯಾಳ್ ಉದ್ಯಾನವನ" ಎಂದು ನಾಮಕರಣ ಮಾಡಲು ತೀರ್ಮಾನಿಸಿದ್ದು, ಸರ್ಕಾರದ ಅಂತಿಮ ಅದೇಶಕ್ಕೆ ಬದ್ಧರಾಗಿರುವುದಾಗಿ ತೀರ್ಮಾನಿಸಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:01-10-2013 ರ ನಿರ್ಣಯ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:01-10-2013ರ ನಿರ್ಣಯವನ್ನು ಒಪ್ಪುವುದು".

ಶ್ರೀ. ಬಿ.ಆರ್.ನಂಜುಂಡಪ್ಪ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ: 01-10-2013ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

(ಬಿ.ಎಸ್.ಸತ್ಯನಾರಾಯಣ)
ಮಹಾಪೌರರು

# ದಿನಾಂಕ:28-10-2013 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 21 (80)/2013-14

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಶ್ರೀ ಆರ್.ರಾಜೇಂದ್ರನ್, ನಗರ ಪಾಲಿಕೆ ಸದಸ್ಯರು ರವರು ದಿನಾಂಕ:22-01-2013ರಂದು ಮನವಿ ಪತ್ರ ಸಲ್ಲಿಸಿ ವಾರ್ಡ್ ಸಂಖ್ಯೆ: 59ರ ವ್ಯಾಪ್ತಿಯಲ್ಲಿ ಬರುವ ಬಾಣಸವಾಡಿ ಮುಖ್ಯರಸ್ತೆಗೆ "ಸರ್ವಜ್ಞ ಮುಖ್ಯರಸ್ತೆ" ಎಂದು ನಾಮಕರಣ ಮಾಡಲು ಕೋರಿರುತ್ತಾರೆ.

ಈ ಬಗ್ಗೆ ಪರಿಶೀಲಿಸಲಾಗಿ ಶ್ರೀ ಸರ್ವಜ್ಞ ರವರು 16ನೇ ಶತಮಾನದ ಶ್ರೇಷ್ಠ ಕವಿಗಳು, ವಚನ ಸಾಹಿತ್ಯದಲ್ಲಿ ಇವರ ಕೊಡುಗೆ ಅಪಾರವಾಗಿದ್ದು, ದಿವಂಗತರಾಗಿರುತ್ತಾರೆ.

ಈ ಬಗ್ಗೆ ಸಾರ್ವಜನಿಕ ಪಂಚನಾಮೆ ಜರುಗಿಸಲಾಗಿ ಪ್ರಸ್ತಾವನೆ ಪರವಾಗಿ 2 ಮಂದಿ, ವಿರೋಧವಾಗಿ 19 ಮಂದಿ ಸಹಿ ಮಾಡಿರುವುದು ಕಂಡು ಬಂದಿದೆ.

ಕರ್ನಾಟಕ ಮುನಿಸಿಪಲ್ ಕಾರ್ಪೊರೇಷನ್ ಕಾಯ್ದೆ 1976, 293ನೇ ಪ್ರಕರಣದ (1) ನೇ ಉಪ ಪ್ರಕರಣದ ಅನುಸಾರ ಪ್ರತಿಯೊಂದು ಪ್ರಸ್ತಾವನೆಯನ್ನು ಸಂಬಂಧಪಟ್ಟ ಸ್ಥಾಯಿ ಸಮಿತಿಯು 5, 6 ಮತ್ತು 7ನೇ ನಿಯಮಗಳ ಉಪಬಂಧಗಳ ದೃಷ್ಟಿಯಿಂದ ಪರಿಶೀಲಿಸತಕ್ಕದ್ದು ಮತ್ತು ನಗರಪಾಲಿಕೆಯು ಗೊತ್ತುವಳಿಯನ್ನು ಅಂಗೀಕರಿಸತಕ್ಕದ್ದು. ಆನಂತರ ಅದನ್ನು, ಕನಿಷ್ಠ ಎರಡು ವೃತ್ತ ಪತ್ರಿಕೆಗಳಲ್ಲಿ ವಿಶೇಷವಾಗಿ, ಕನ್ನಡ ಪತ್ರಿಕೆಗಳಲ್ಲಿ, ಅದರಿಂದ ಬಾಧಿತರಾಗಬಹುದಾದ ವ್ಯಕ್ತಿಗಳಿಗೆ ಮಾಹಿತಿಗಾಗಿ ಮತ್ತು ಅದು ಪ್ರಕಟವಾದ ದಿನಾಂಕದಿಂದ ಮೂವತ್ತು ದಿನಗಳೊಳಗಾಗಿ ಆಕ್ಷೇಪಣೆಗಳು ಮತ್ತು ಸಲಹೆಗಳನ್ನು ಆಹ್ವಾನಿಸಿ ಪ್ರಕಟಿಸತಕ್ಕದ್ದು. ಮೇಲೆ ಹೇಳಿಕೆ ಅವಧಿಯೊಳಗೆ ಯಾವುದೇ ಆಕ್ಷೇಪಣೆಗಳು ಮತ್ತು ಸಲಹೆಗಳು ಬಂದರೆ, ಆಕ್ಷೇಪಣೆಗಳು ಮತ್ತು ಸಲಹೆಗಳನ್ನು ಪರಿಶೀಲಿಸುವುದಕ್ಕಾಗಿ ನಗರ ಪಾಲಿಕೆಯ ಮುಂದಿನ ಸಭೆಯಲ್ಲಿ ಅವುಗಳನ್ನು ಮಂಡಿಸತಕ್ಕದ್ದು. ರಾಜ್ಯ ಸರ್ಕಾರದ ಯಾವುದೇ ನಿರ್ದೇಶನಗಳಿದ್ದರೆ ಅವುಗಳಿಗೆ ಒಳಪಟ್ಟು ಗೊತ್ತುವಳಿಯನ್ನು ಅಂಗೀಕರಿಸಿದ ಮೇಲೆ ಅದರಂತೆ ನಗರ ಪಾಲಿಕೆಯ ಬೀದಿಗೆ ನಾಮಕರಣ ಮಾಡುವುದಕ್ಕೆ ಕ್ರಮ ಕೈಗೊಳ್ಳತಕ್ಕದ್ದೆಂದು ಉಲ್ಲೇಖಿಸಲಾಗಿದೆ

ಆದುದರಿಂದ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಾರ್ಡ್ ಸಂಖ್ಯೆ: 59ರ ವ್ಯಾಪ್ತಿಯಲ್ಲಿ ಬರುವ ಬಾಣಸವಾಡಿ ಮುಖ್ಯರಸ್ತೆಗೆ **"ಸರ್ವಜ್ಞ ಮುಖ್ಯರಸ್ತೆ"** ಎಂದು ನಾಮಕರಣ ಮಾಡುವ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:14-03-2013ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:01-10-2013ರ ನಿರ್ಣಯ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:01-10-2013ರ ನಿರ್ಣಯವನ್ನು ಒಪ್ಪುವುದು".

ಶ್ರೀ. ಬಿ.ಆರ್.ನಂಜುಂಡಪ್ಪ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ: 01-10-2013ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

(ಬಿ.ಎಸ್.ಸತ್ಯನಾರಾಯಣ)
ಮಹಾಪೌರರು

# ದಿನಾಂಕ:28–10–2013 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 22 (81)/2013–14

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಾರ್ಡ್ ಸಂಖ್ಯೆ:155ರ ವ್ಯಾಪ್ತಿಯ ರಾಮಾಂಜನೇಯ ಗುಡ್ಡದಲ್ಲಿ ಹೊಸದಾಗಿ ಕಟ್ಟಿರುವ ರಂಗಮಂದಿರಕ್ಕೆ "ರಂಗ ಕಲಾವಿದ ಶ್ರೀ ಎ.ಎಸ್.ಮೂರ್ತಿ" ರವರ ಹೆಸರನ್ನು ನಾಮಕರಣ ಮಾಡುವ ಬಗ್ಗೆ ದಿನಾಂಕ:26–02–2013 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ವಿಷಯದ ಸಂಖ್ಯೆ:440/2012–13 ರಲ್ಲಿ ತೀರ್ಮಾನಿಸಲಾಗಿರುತ್ತದೆ.

ಸದರಿ ವಿಷಯದ ಸಂಬಂಧವಾಗಿ ಸಾರ್ವಜನಿಕರಿಂದ ಆಕ್ಷೇಪಣೆಗಳು / ಸಲಹೆಗಳು ಇದ್ದಲ್ಲಿ ಸಲ್ಲಿಸಲು ತಿಳಿಸಿ, ಪತ್ರಿಕಾ ಪ್ರಕಟಣೆಯನ್ನು ದಿನಾಂಕ:02–08–2013 ರಲ್ಲಿ ಹೊರಡಿಸಲಾಗಿರುತ್ತದೆ. ಸದರಿ ಪತ್ರಿಕಾ ಪ್ರಕಟಣೆಯು ಹೊರಡಿಸಲಾದ ಮೂವತ್ತು ದಿನಗಳ ಕಾಲಾವಕಾಶದಲ್ಲಿ, ಆಕ್ಷೇಪಣೆ ಸಲ್ಲಿಸಲು ಅವಕಾಶಗಳು ಇದ್ದು, ಈ ಅವಧಿಯಲ್ಲಿ ಯಾವುದೇ ಆಕ್ಷೇಪಣೆಗಳನ್ನು ಸ್ವೀಕರಿಸಲಾಗಿರುವುದಿಲ್ಲ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಾರ್ಡ್ ಸಂಖ್ಯೆ:155ರ ವ್ಯಾಪ್ತಿಯ ರಾಮಾಂಜನೇಯ ಗುಡ್ಡದಲ್ಲಿ ಹೊಸದಾಗಿ ಕಟ್ಟಿರುವ ರಂಗಮಂದಿರಕ್ಕೆ "ರಂಗ ಕಲಾವಿದ ಶ್ರೀ ಎ.ಎಸ್.ಮೂರ್ತಿ" ರವರ ಹೆಸರನ್ನು ನಾಮಕರಣ ಮಾಡುವ ಬಗ್ಗೆ ಅಂತಿಮ ತೀರ್ಮಾನಕ್ಕಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:01–10–2013ರ ಟಿಪ್ಪಣಿ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ವಾರ್ಡ್ ಸಂಖ್ಯೆ:155ರ ವ್ಯಾಪ್ತಿಯ ರಾಮಾಂಜನೇಯ ಗುಡ್ಡದಲ್ಲಿ ಹೊಸದಾಗಿ ಕಟ್ಟಿರುವ ರಂಗಮಂದಿರಕ್ಕೆ "ರಂಗ ಕಲಾವಿದ ಶ್ರೀ.ಎ.ಎಸ್.ಮೂರ್ತಿ ರಂಗಮಂದಿರ" ಎಂದು ನಾಮಕರಣ ಮಾಡುವುದು".

ಶ್ರೀ. ಬಿ.ಆರ್.ನಂಜುಂಡಪ್ಪ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ವಾರ್ಡ್ ಸಂಖ್ಯೆ:155ರ ವ್ಯಾಪ್ತಿಯ ರಾಮಾಂಜನೇಯ ಗುಡ್ಡದಲ್ಲಿ ಹೊಸದಾಗಿ ಕಟ್ಟಿರುವ ರಂಗಮಂದಿರಕ್ಕೆ "ರಂಗ ಕಲಾವಿದ ಶ್ರೀ.ಎ.ಎಸ್.ಮೂರ್ತಿ ರಂಗಮಂದಿರ" ಎಂದು ನಾಮಕರಣ ಮಾಡುವುದೆಂದು ಸಭೆಯು ತೀರ್ಮಾನಿಸಲಾಯಿತು".

(ಬಿ.ಎಸ್.ಸತ್ಯನಾರಾಯಣ)
ಮಹಾಪೌರರು

# ದಿನಾಂಕ:28-10-2013 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 23 (82)/2013-14

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಾರ್ಡ್ ಸಂಖ್ಯೆ:154ರ ವ್ಯಾಪ್ತಿಯ ಮಾಡಲ್ ಹೌಸ್ 3ನೇ ರಸ್ತೆಗೆ ಹೆಸರಾಂತ ಗಾಯಕ "ದಿವಂಗತ ಸಿ.ಅಶ್ವಥ್" ರವರ ಹೆಸರನ್ನು ನಾಮಕರಣ ಮಾಡುವ ಬಗ್ಗೆ ದಿನಾಂಕ:30-01-2013 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ವಿಷಯದ ಸಂಖ್ಯೆ:381/2012-13 ರಲ್ಲಿ ತೀರ್ಮಾನಿಸಲಾಗಿರುತ್ತದೆ.

ಸದರಿ ವಿಷಯದ ಸಂಬಂಧವಾಗಿ ಸಾರ್ವಜನಿಕರಿಂದ ಆಕ್ಷೇಪಣೆಗಳು / ಸಲಹೆಗಳು ಇದ್ದಲ್ಲಿ ಸಲ್ಲಿಸಲು ತಿಳಿಸಿ, ಪತ್ರಿಕಾ ಪ್ರಕಟಣೆಯನ್ನು ದಿನಾಂಕ:02-08-2013 ರಲ್ಲಿ ಹೊರಡಿಸಲಾಗಿರುತ್ತದೆ. ಸದರಿ ಪತ್ರಿಕಾ ಪ್ರಕಟಣೆಯನ್ನು ಹೊರಡಿಸಲಾದ ಮೂವತ್ತು ದಿನಗಳ ಕಾಲಾವಕಾಶದಲ್ಲಿ, ಆಕ್ಷೇಪಣೆ ಸಲ್ಲಿಸಲು ಅವಕಾಶಗಳು ಇದ್ದು, ಈ ಅವಧಿಯಲ್ಲಿ ಯಾವುದೇ ಆಕ್ಷೇಪಣೆಗಳನ್ನು ಸ್ವೀಕರಿಸಲಾಗಿರುವುದಿಲ್ಲ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಾರ್ಡ್ ಸಂಖ್ಯೆ:154ರ ವ್ಯಾಪ್ತಿಯ ಮಾಡಲ್ ಹೌಸ್ 3ನೇ ರಸ್ತೆಗೆ ಹೆಸರಾಂತ ಗಾಯಕ "ದಿವಂಗತ ಸಿ.ಅಶ್ವಥ್" ರವರ ಹೆಸರನ್ನು ನಾಮಕರಣ ಮಾಡುವ ಬಗ್ಗೆ ಅಂತಿಮ ತೀರ್ಮಾನಕ್ಕಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:01-10-2013ರ ಟಿಪ್ಪಣಿ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ವಾರ್ಡ್ ಸಂಖ್ಯೆ:154ರ ವ್ಯಾಪ್ತಿಯ ಮಾಡಲ್ ಹೌಸ್ 3ನೇ ರಸ್ತೆಗೆ ಹೆಸರಾಂತ ಗಾಯಕ "ಸಿ.ಅಶ್ವಥ್ ರಸ್ತೆ" ರವರ ಹೆಸರನ್ನು ನಾಮಕರಣ ಮಾಡುವುದು".

ಶ್ರೀ. ಬಿ.ಆರ್.ನಂಜುಂಡಪ್ಪ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ವಾರ್ಡ್ ಸಂಖ್ಯೆ:154ರ ವ್ಯಾಪ್ತಿಯ ಮಾಡಲ್ ಹೌಸ್ 3ನೇ ರಸ್ತೆಗೆ ಹೆಸರಾಂತ ಗಾಯಕ "ಸಿ.ಅಶ್ವಥ್ ರಸ್ತೆ" ಎಂದು ನಾಮಕರಣ ಮಾಡುವುದೆಂದು ಸಭೆಯು ತೀರ್ಮಾನಿಸಲಾಯಿತು".

(ಬಿ.ಎಸ್.ಸತ್ಯನಾರಾಯಣ)
ಮಹಾಪೌರರು

# ದಿನಾಂಕ:28–10–2013 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 25 (84)/2013–14

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಾರ್ಡ್ ಸಂಖ್ಯೆ:182, ಪದ್ಮನಾಭನಗರ ವಾರ್ಡಿನ ವ್ಯಾಪ್ತಿಯಲ್ಲಿರುವ ಕಾರ್ಮೆಲ್ ಶಾಲೆಯ ಪಕ್ಕದಲ್ಲಿರುವ ನಗರ ಪಾಲಿಕೆಯ ಆಟದ ಮೈದಾನಕ್ಕೆ "ಶ್ರೀ ಎಂ.ಕೆ.ಪುಟ್ಟಲಿಂಗಯ್ಯ ಆಟದ ಮೈದಾನ" ಎಂದು ನಾಮಕರಣ ಮಾಡುವ ಬಗ್ಗೆ ದಿನಾಂಕ: 16–03–2013 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ವಿಷಯದ ಸಂಖ್ಯೆ:464/2012–13 ರಲ್ಲಿ ತೀರ್ಮಾನಿಸಲಾಗಿರುತ್ತದೆ.

ಸದರಿ ವಿಷಯದ ಸಂಬಂಧವಾಗಿ ಸಾರ್ವಜನಿಕರಿಂದ ಆಕ್ಷೇಪಣೆಗಳು / ಸಲಹೆಗಳು ಇದ್ದಲ್ಲಿ ಸಲ್ಲಿಸಲು ತಿಳಿಸಿ, ಪತ್ರಿಕಾ ಪ್ರಕಟಣೆಯನ್ನು ದಿನಾಂಕ:02–08–2013 ರಲ್ಲಿ ಹೊರಡಿಸಲಾಗಿರುತ್ತದೆ. ಸದರಿ ಪತ್ರಿಕಾ ಪ್ರಕಟಣೆಯನ್ನು ಹೊರಡಿಸಲಾದ ಮೂವತ್ತು ದಿನಗಳ ಕಾಲಾವಕಾಶದಲ್ಲಿ, ಆಕ್ಷೇಪಣೆ ಸಲ್ಲಿಸಲು ಅವಕಾಶಗಳು ಇದ್ದು, ಈ ಅವಧಿಯಲ್ಲಿ ಯಾವುದೇ ಆಕ್ಷೇಪಣೆಗಳನ್ನು ಸ್ವೀಕರಿಸಲಾಗಿರುವುದಿಲ್ಲ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಾರ್ಡ್ ಸಂಖ್ಯೆ:182, ಪದ್ಮನಾಭನಗರ ವಾರ್ಡಿನ ವ್ಯಾಪ್ತಿಯಲ್ಲಿರುವ ಕಾರ್ಮೆಲ್ ಶಾಲೆಯ ಪಕ್ಕದಲ್ಲಿರುವ ನಗರ ಪಾಲಿಕೆಯ ಆಟದ ಮೈದಾನಕ್ಕೆ "ಶ್ರೀ ಎಂ.ಕೆ.ಪುಟ್ಟಲಿಂಗಯ್ಯ ಆಟದ ಮೈದಾನ" ಎಂದು ನಾಮಕರಣ ಮಾಡುವ ಬಗ್ಗೆ ಅಂತಿಮ ತೀರ್ಮಾನಕ್ಕಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:01–10–2013ರ ಟಿಪ್ಪಣಿ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ವಾರ್ಡ್ ಸಂಖ್ಯೆ:182, ಪದ್ಮನಾಭನಗರ ವಾರ್ಡಿನ ವ್ಯಾಪ್ತಿಯಲ್ಲಿರುವ ಕಾರ್ಮೆಲ್ ಶಾಲೆಯ ಪಕ್ಕದಲ್ಲಿರುವ ನಗರ ಪಾಲಿಕೆಯ ಆಟದ ಮೈದಾನಕ್ಕೆ "ಶ್ರೀ ಎಂ.ಕೆ.ಪುಟ್ಟಲಿಂಗಯ್ಯ ಆಟದ ಮೈದಾನ" ಎಂದು ನಾಮಕರಣ ಮಾಡುವುದು".

ಶ್ರೀ. ಬಿ.ಆರ್.ನಂಜುಂಡಪ್ಪ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ವಾರ್ಡ್ ಸಂಖ್ಯೆ:182, ಪದ್ಮನಾಭನಗರ ವಾರ್ಡಿನ ವ್ಯಾಪ್ತಿಯಲ್ಲಿರುವ ಕಾರ್ಮೆಲ್ ಶಾಲೆಯ ಪಕ್ಕದಲ್ಲಿರುವ ನಗರ ಪಾಲಿಕೆಯ ಆಟದ ಮೈದಾನಕ್ಕೆ "ಶ್ರೀ. ಎಂ.ಕೆ.ಪುಟ್ಟಲಿಂಗಯ್ಯ ಆಟದ ಮೈದಾನ" ಎಂದು ನಾಮಕರಣ ಮಾಡುವುದೆಂದು ಸಭೆಯು ತೀರ್ಮಾನಿಸಲಾಯಿತು".

(ಬಿ.ಎಸ್.ಸತ್ಯನಾರಾಯಣ)
ಮಹಾಪೌರರು

## ದಿನಾಂಕ:28-10-2013 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 27 (86)/2013-14

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಾರ್ಡ್ ಸಂಖ್ಯೆ:38ರ ವ್ಯಾಪ್ತಿಯ ಪೀಣ್ಯದಲ್ಲಿ ನಿರ್ಮಿಸಲಾಗುತ್ತಿರುವ ಕ್ರೀಡಾಂಗಣಕ್ಕೆ "ದಿವಂಗತ ಆರ್.ರಾಜಣ್ಣ ಕ್ರೀಡಾಂಗಣ" ಎಂದು ನಾಮಕರಣ ಮಾಡುವ ಬಗ್ಗೆ ದಿನಾಂಕ:16-03-2013 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ವಿಷಯದ ಸಂಖ್ಯೆ:27(432)/2012-13 ರಲ್ಲಿ ತೀರ್ಮಾನಿಸಲಾಗಿರುತ್ತದೆ.

ಸದರಿ ವಿಷಯದ ಸಂಬಂಧವಾಗಿ ಸಾರ್ವಜನಿಕರಿಂದ ಆಕ್ಷೇಪಣೆಗಳು / ಸಲಹೆಗಳು ಇದ್ದಲ್ಲಿ ಸಲ್ಲಿಸಲು ತಿಳಿಸಿ, ಪತ್ರಿಕಾ ಪ್ರಕಟಣೆಯನ್ನು ದಿನಾಂಕ:02-08-2013 ರಲ್ಲಿ ಹೊರಡಿಸಲಾಗಿರುತ್ತದೆ. ಸದರಿ ಪತ್ರಿಕಾ ಪ್ರಕಟಣೆಯನ್ನು ಹೊರಡಿಸಲಾದ ಮೂವತ್ತು ದಿನಗಳ ಕಾಲಾವಕಾಶದಲ್ಲಿ, ಆಕ್ಷೇಪಣೆ ಸಲ್ಲಿಸಲು ಅವಕಾಶಗಳು ಇದ್ದು, ಈ ಅವಧಿಯಲ್ಲಿ ಯಾವುದೇ ಆಕ್ಷೇಪಣೆಗಳನ್ನು ಸ್ವೀಕರಿಸಲಾಗಿರುವುದಿಲ್ಲ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಾರ್ಡ್ ಸಂಖ್ಯೆ:38ರ ವ್ಯಾಪ್ತಿಯ ಪೀಣ್ಯದಲ್ಲಿ ನಿರ್ಮಿಸಲಾಗುತ್ತಿರುವ ಕ್ರೀಡಾಂಗಣಕ್ಕೆ "ದಿವಂಗತ ಆರ್.ರಾಜಣ್ಣ ಕ್ರೀಡಾಂಗಣ" ಎಂದು ನಾಮಕರಣ ಮಾಡುವ ಬಗ್ಗೆ ಅಂತಿಮ ತೀರ್ಮಾನಕ್ಕಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:01-10-2013ರ ಟಿಪ್ಪಣಿ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ವಾರ್ಡ್ ಸಂಖ್ಯೆ:38ರ ವ್ಯಾಪ್ತಿಯ ಪೀಣ್ಯದಲ್ಲಿ ನಿರ್ಮಿಸಲಾಗುತ್ತಿರುವ ಕ್ರೀಡಾಂಗಣಕ್ಕೆ "ಆರ್.ರಾಜಣ್ಣ ಕ್ರೀಡಾಂಗಣ" ಎಂದು ನಾಮಕರಣ ಮಾಡುವುದು".

ಶ್ರೀ. ಬಿ.ಆರ್.ನಂಜುಂಡಪ್ಪ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ವಾರ್ಡ್ ಸಂಖ್ಯೆ:38ರ ವ್ಯಾಪ್ತಿಯ ಪೀಣ್ಯದಲ್ಲಿ ನಿರ್ಮಿಸಲಾಗುತ್ತಿರುವ ಕ್ರೀಡಾಂಗಣಕ್ಕೆ "ಆರ್.ರಾಜಣ್ಣ ಕ್ರೀಡಾಂಗಣ" ಎಂದು ನಾಮಕರಣ ಮಾಡುವುದೆಂದು ಸಭೆಯು ತೀರ್ಮಾನಿಸಲಾಯಿತು".

(ಬಿ.ಎಸ್.ಸತ್ಯನಾರಾಯಣ)
ಮಹಾಪೌರರು

# ದಿನಾಂಕ:28–10–2013 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯಲ್ಲಿ ತೀರ್ಮಾನವಾದ ಅಧಿಕ ವಿಷಯ

## ವಿಷಯದ ಸಂಖ್ಯೆ : 01 (87)/2013–14

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ವೈದ್ಯಕೀಯ ಕಾರಣಗಳ ಮೇಲೆ ನಿವೃತ್ತಿ ಹೊಂದಿದ್ದ ಸರ್ಕಾರಿ ನೌಕರರ ಅವಲಂಬಿತರ ನೇಮಕಾತಿ ಸಂಬಂಧ ಸರ್ಕಾರದ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ ಅಧಿಸೂಚನೆ ಸಂಖ್ಯೆ: ಸಿಆಸುಇ 78 ಸೇಅನೇ 2011 ದಿ: 13–10–2011 ರಲ್ಲಿ ಕರ್ನಾಟಕ ಸಿವಿಲ್ ಸೇವಾ (ಅನುಕಂಪದ ಆಧಾರದ ಮೇಲೆ ನೇಮಕಾತಿ) ನಿಯಮಗಳು 1966 ಇದನ್ನು ಮತ್ತಷ್ಟು ತಿದ್ದುಪಡಿ ಮಾಡುವುದಕ್ಕೆ ದಿನಾಂಕ: 06–09–2011 ರ ಅಧಿಸೂಚನೆ ಸಂಖ್ಯೆ ಸಿಆಸುಇ 78 ಸೇಅನೇ 2011 ರಲ್ಲಿ ಪ್ರಕಟಿಸಿರುವ ಈ ಮುಂದಿನ ನಿಯಮಗಳು ಕರಡನ್ನು ಅಧಿಕೃತ ರಾಜ್ಯಪತ್ರದಲ್ಲಿ ಇದರ ಪ್ರಕಟಣೆಯ ದಿನಾಂಕದಿಂದ 15 ದಿನಗಳೊಳಗಾಗಿ ಅದರಿಂದ ಭಾದಿತರಾಗುವ ಸಂಭವವಿರುವ ಎಲ್ಲಾ ವ್ಯಕ್ತಿಗಳಿಂದ ಆಕ್ಷೇಪಣೆಗಳನ್ನು ಮತ್ತು ಸಲಹೆಗಳನ್ನು ಆಹ್ವಾನಿಸಿ ದಿನಾಂಕ: 08–09–2011 ರ ಕರ್ನಾಟಕ ರಾಜ್ಯಪತ್ರದ ಭಾಗ–iv ಎ (ಪಿ.ಆರ್.ಸಂ 808) ರಲ್ಲಿ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ ಅಧಿನಿಯಮ 1978 (1990 ರ ಕರ್ನಾಟಕ ಅಧಿನಿಯಮ 14) ರ 3ನೇ ಪ್ರಕರಣದ (2)ನೇ ಉಪ ಪ್ರಕರಣದ (ಎ) ಖಂಡದ ಮೂಲಕ ಅಗತ್ಯ ಪಡಿಸಲಾದಂತೆ ಪ್ರಕಟಿಸಲಾಗಿರುವುದರಿಂದ:

ಸದರಿ ರಾಜ್ಯಪತ್ರವನ್ನು ದಿನಾಂಕ:08–09–2011 ರಂದು ಸಾರ್ವಜನಿಕರಿಗೆ ಲಭ್ಯವಾಗುವಂತೆ ಮಾಡಿರುವುದರಿಂದ ಮತ್ತು ಸದರಿ ಕರಡು ಪತ್ರದ ಬಗ್ಗೆ ಯಾವುದೇ ಆಕ್ಷೇಪಣೆ/ಸಲಹೆಗಳು ಸ್ವೀಕೃತವಾಗದಿರುವುದರಿಂದ ಈಗ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ ಅಧಿನಿಯಮ 1978 (1990 ರ ಕರ್ನಾಟಕ ಅಧಿನಿಯಮ (14) ರ 8ನೇ ಪ್ರಕರಣದೊಂದಿಗೆ ಓದಿಕೊಂಡ 3ನೇ ಪ್ರಕರಣದ (1)ನೇ ಉಪ ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಿಗಳನ್ನು ಚಲಾಯಿಸಿ ಕರ್ನಾಟಕ ಸರ್ಕಾರವು ಈ ಮೂಲಕ ಈ ಕೆಳಕಂಡ ನಿಯಮಗಳನ್ನು ರಚಿಸುತ್ತದೆ. ಎಂದರೆ:

**ನಿಯಮಗಳು**

1) **ಶಿರೋನಾಮೆ ಮತ್ತು ಪ್ರಾರಂಭ:** (1) ಈ ನಿಯಮಗಳನ್ನು ಕರ್ನಾಟಕ ಸಿವಿಲ್ ಸೇವಾ (ಅನುಕಂಪದ ಆಧಾರದ ಮೇಲೆ ನೇಮಕಾತಿ) (ಆರನೇ ತಿದ್ದುಪಡಿ) ನಿಯಮಗಳು 2011 ಎಂದು ಕರೆಯತಕ್ಕದ್ದು.

2) ಇವು ಅಧಿಕೃತ ರಾಜ್ಯಪತ್ರದಲ್ಲಿ ಪ್ರಕಟವಾದ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

2. **ನಿಯಮ 1 ಕ್ಕೆ ತಿದ್ದುಪಡಿ**:– ಕರ್ನಾಟಕ ಸಿವಿಲ್ ಸೇವಾ (ಅನುಕಂಪದ ಆಧಾರದ ಮೇಲೆ ನೇಮಕಾತಿ) ನಿಯಮಗಳು, 1996 (ಇನ್ನು ಮುಂದೆ ಸದರಿ ನಿಯಮಗಳೆಂದು ಉಲ್ಲೇಖಿಸಲಾಗುವುದು) ನಿಯಮ 1 ರ ಉಪ ನಿಯಮ (3) ರಲ್ಲಿ " ಮೃತ ಸರ್ಕಾರಿ ನೌಕರ" ಎಂಬ ಪದಗಳ ನಂತರ ಅಥವಾ " ವೈದ್ಯಕೀಯ ಕಾರಣಗಳ ಮೇಲೆ ನಿವೃತ್ತಿ ಹೊಂದಿ ಸರ್ಕಾರಿ ನೌಕರ" ಎಂಬ ಪದಗಳನ್ನು ಸೇರಿಸತಕ್ಕದ್ದು.

3. **ಹೊಸ ನಿಯಮ 3 (ಅ) ರ ಸೇರ್ಪಡೆ**:– ಸದರಿ ನಿಯಮಗಳ ನಿಯಮ 3 ರ ನಂತರ ಈ ಕೆಳಕಂಡದ್ದನ್ನು ಸೇರಿಸತಕ್ಕದ್ದು ಅಂದರೆ:–

3. **ಅ. ವೈದ್ಯಕೀಯ ಕಾರಣಗಳ ಮೇಲೆ ನಿವೃತ್ತಿ ಹೊಂದಿದ ಸರ್ಕಾರಿ ನೌಕರರ ಅವಲಂಬಿತರ ನೇಮಕಾತಿ**

(1) ವೈದ್ಯಕೀಯ ಕಾರಣಗಳ ಮೇಲೆ ನಿವೃತ್ತಿ ಹೊಂದಿದ ಸರ್ಕಾರಿ ನೌಕರರ ಅವಲಂಬಿತರು ಈ ನಿಯಮಗಳ ವ್ಯಾಪಕತೆಗೆ ಹಾನಿ ಉಂಟು ಮಾಡದಂತೆ ಅನುಕಂಪದ ಆಧಾರದ ಮೇಲೆ ನೇಮಕಾತಿ ಹೊಂದಲು ಅರ್ಹರಾಗುತ್ತಾರೆ.

.........................2

(2) ಈ ನಿಯಮಗಳು ನಿಯಮ 9ನ್ನು ಹೊರತುಪಡಿಸಿ ಮೃತ ಸರ್ಕಾರಿ ನೌಕರನ ಅವಲಂಬಿತರಿಗೆ ಅನ್ವಯವಾಗುವ ಅರ್ಹತೆಯ ಎಲ್ಲಾ ಷರತ್ತುಗಳು ನೇಮಕಾತಿ ನಿಬಂಧನೆಗಳು ಮತ್ತು ಅರ್ಜಿ ಸಲ್ಲಿಸುವ ಮತ್ತು ನೇಮಕಾತಿ ಮಾಡುವ ಕಾರ್ಯ ವಿಧಾನದ ನಿಯಮಗಳು ವೈದ್ಯಕೀಯ ಕಾರಣಗಳ ಮೇಲೆ ನಿವೃತ್ತಿ ಹೊಂದಿದ ಸರ್ಕಾರಿ ನೌಕರನ ಅವಲಂಬಿತರಿಗೆ ನೌಕರನು ನಿವೃತ್ತಿ ಹೊಂದಿದ ದಿನಾಂಕದಿಂದ ಯಥೋಚಿತ ವ್ಯತ್ಯಾಸಗಳೊಂದಿಗೆ ಅನ್ವಯವಾಗುತ್ತದೆ.

**ಪರಂತು, ಕರ್ನಾಟಕ ಸಿವಿಲ್ ಸೇವಾ ( ಅನುಕಂಪದ ಆಧಾರದ ಮೇಲೆ ನೇಮಕಾತಿ) (ಆರನೇ ತಿದ್ದುಪಡಿ) ನಿಯಮಗಳು, 2011 ಜಾರಿಗೆ ಬಂದ ದಿನಾಂಕದಂದು ವೈದ್ಯಕೀಯ ಕಾರಣಗಳ ಮೇಲೆ ನಿವೃತ್ತರಾದ ಸರ್ಕಾರಿ ನೌಕರರ ಅರ್ಹ ಅವಲಂಬಿತರು ಸದರಿ ನಿಯಮಗಳು ಜಾರಿಗೆ ಬಂದ ದಿನಾಂಕದಿಂದ ಒಂದು ವರ್ಷದೊಳಗೆ ಅರ್ಜಿ ಸಲ್ಲಿಸತಕ್ಕದ್ದು.**

**ವಿವರಣೆ:** ಈ ನಿಯಮಗಳು ಉದ್ದೇಶಕ್ಕಾಗಿ:

(i) "ವೈದ್ಯಕೀಯ ಕಾರಣಗಳ ಮೇಲೆ ನಿವೃತ್ತರಾದ ಸರ್ಕಾರಿ ನೌಕರ" ಎಂದರೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದಲ್ಲಿ ರಚಿತವಾದ ವೈದ್ಯಕೀಯ ಮಂಡಳಿಯು ನೀಡಿದ ಪ್ರಮಾಣ ಪತ್ರದನ್ವಯ ಸಾರ್ವಜನಿಕ ಸೇವೆಯ ಮೇಲೆ ಕರ್ತವ್ಯದಲ್ಲಿರುವಾಗ ದೈಹಿಕವಾಗಿ ಅಥವಾ ಮಾನಸಿಕವಾಗಿ ಶಾಶ್ವತವಾಗಿ ಅಸಮರ್ಥರಾಗಿ ಕರ್ನಾಟಕ ಸಿವಿಲ್ ಸೇವಾ ನಿಯಮಗಳನ್ವಯ 1ನೇ ಜನವರಿ 2010 ರಂದು ಅಥವಾ ತದನಂತರ ವೈದ್ಯಕೀಯ ಕಾರಣಗಳ ಮೇಲೆ ನಿವೃತ್ತರಾದ ಸರ್ಕಾರಿ ನೌಕರ.

(ii) "ಕರ್ತವ್ಯದ ಮೇಲಿರುವಾಗ" ಎಂಬ ಪದಗಳು ಮನೆಯಿಂದ ಕರ್ತವ್ಯ ನಿರ್ವಹಿಸುವ ಸ್ಥಳಕ್ಕೆ ಹೋಗಿಬರುವ ಪ್ರಮಾಣವನ್ನು ಒಳಗೊಂಡಿರುತ್ತವೆ.

(iii) ಮೃತ ಸರ್ಕಾರಿ ನೌಕರನಿಗೆ ಸಂಬಂಧಿಸಿದಂತೆ ಪರಿಭಾಷಿಸಿರುವ " ಅವಲಂಬಿತರು" ಮತ್ತು ಕುಟುಂಬದ ಸದಸ್ಯರು" ಎಂಬ ಪದಗಳು ವೈದ್ಯಕೀಯ ಕಾರಣಗಳ ಮೇಲೆ ನಿವೃತ್ತರಾದ ಸರ್ಕಾರಿ ನೌಕರರ ಅವಲಂಬಿತರಿಗೂ ಅರ್ಥೈಸಲ್ಪಡತಕ್ಕದ್ದು.

(iv) ಈ ನಿಯಮಗಳಲ್ಲಿ ಮೃತ ಸರ್ಕಾರಿ ನೌಕರನಿಗೆ ಸಂಬಂಧಿಸಿದಂತೆ ನಮೂದಾಗಿರುವ "ವಿಧವೆ" ಅಥವಾ "ವಿಧುರ" ಎಂಬ ಪದಗಳು ವೈದ್ಯಕೀಯ ಕಾರಣಗಳ ಮೇಲೆ ನಿವೃತ್ತರಾದ ಸರ್ಕಾರಿ ನೌಕರರ ಪ್ರಕರಣಗಳಲ್ಲಿ ಕ್ರಮವಾಗಿ " ಪತ್ನಿ" ಅಥವಾ ' ಪತಿ' ಎಂದು ಪರಿಗಣಿಸಲ್ಪಡತಕ್ಕದ್ದು.

ಕಾನೂನು ಕೋಶದ ಮುಖ್ಯಸ್ಥರು ನೀಡಿರುವ ಅಭಿಪ್ರಾಯ ವರದಿಯಲ್ಲಿ ಸರ್ಕಾರದ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯು ಹೊರಡಿಸಿರುವ ದಿನಾಂಕ: 13-10-2011 ಅಧಿಸೂಚನೆ ಸಂಖ್ಯೆ: ಸಿಆಸುಇ 78 ಸೇಅನೇ 2011 ರಲ್ಲಿ ಕರ್ನಾಟಕ ಸಿವಿಲ್ ಸೇವಾ (ಅನುಕಂಪದ ಆಧಾರದ ಮೇಲೆ ನೇಮಕಾತಿ) ನಿಯಮಗಳು 1966 ರ ನಿಯಮ 1 ರ ಉಪ ನಿಯಮ (3) ರಲ್ಲಿ ಮೃತ ಸರ್ಕಾರಿ ನೌಕರ ಎಂಬ ಪದಗಳ ನಂತರ ಅಥವಾ ವೈದ್ಯಕೀಯ ಕಾರಣಗಳ ಮೇಲೆ ನಿವೃತ್ತಿ ಹೊಂದಿದ ಸರ್ಕಾರಿ ನೌಕರ ಎಂಬ ಪದಗಳನ್ನು ಸೇರಿಸಿಕೊಂಡು ಹೊಸ ನಿಯಮ 3(ಅ) ರ ಸೇರ್ಪಡಿಸಿಕೊಂಡು ಹೊರಡಿಸಲಾಗಿರುವ ಅಧಿಸೂಚನೆಯನ್ನು ಪಾಲಿಕೆಯಲ್ಲಿ ಅಳವಡಿಸಿಕೊಳ್ಳುವ ಬಗ್ಗೆ ಟಿಪ್ಪಣಿಯನ್ನು ತಯಾರಿಸಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ ಮುಂದೆ ಮಂಡಿಸಲು ಆದೇಶ ಕೋರಿರುವುದು ಕಂಡುಬರುತ್ತದೆ. ಆದುದರಿಂದ, ಪಾಲಿಕೆಯಲ್ಲಿ ನಿಯಮಾವಳಿಗಳಂತೆ ಸದರಿ ಅಧಿಸೂಚನೆಯನ್ನು ಅಳವಡಿಸಿಕೊಳ್ಳಬಹುದಾಗಿದೆ ಎಂದು ಅಭಿಪ್ರಾಯ ನೀಡಿರುತ್ತಾರೆ.

ಜಂಟಿ ಆಯುಕ್ತರು (ಆರೋಗ್ಯ) ರವರು ಸರ್ಕಾರದ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯು ದಿನಾಂಕ: 13-10-2011 ರಂದು ಹೊರಡಿಸಿರುವ ಅಧಿಸೂಚನೆ ಸಂಖ್ಯೆ: ಸಿಆಸುಇ 78 ಸೇಅನೇ 2011 ನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಅಳವಡಿಸಿಕೊಳ್ಳಲು ಕ್ರಮವಹಿಸಬಹುದು ಎಂದು ದಿನಾಂಕ: 07-02-2012 ರಂದು ಕಡತದಲ್ಲಿ ವರದಿಯನ್ನು ನೀಡಿರುತ್ತಾರೆ.

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ, ಸರ್ಕಾರದ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯು ವೈದ್ಯಕೀಯ ಕಾರಣಗಳ ಮೇಲೆ ನಿವೃತ್ತಿ ಹೊಂದಿದ ಸರ್ಕಾರಿ ನೌಕರರ ಅವಲಂಬಿತರಿಗೆ ಅನುಕಂಪದ ಆಧಾರದ ಮೇಲೆ ನೇಮಕಾತಿ ನೀಡುವ ಸಂಬಂಧ ಹೊರಡಿಸಿರುವ ಅಧಿಸೂಚನೆ ಸಂಖ್ಯೆ: ಸಿಆಸುಇ 78 ಸೇಅನೇ 2011 ದಿನಾಂಕ: 13-10-2011 ನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಅಳವಡಿಸಿಕೊಳ್ಳುವ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:14-02-2012ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪುತ್ತಾ, ಇನ್ನು ಮುಂದೆ ಇಂತಹ ಪ್ರಕರಣಗಳಲ್ಲಿ ವಿನಾ ಕಾರಣ ವಿಳಂಬ ಮಾಡತಕ್ಕದಲ್ಲ ಎಂದು ತೀರ್ಮಾನಿಸಿರುವ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯ ದಿನಾಂಕ: 07-10-2013ರ ನಿರ್ಣಯ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯ ದಿನಾಂಕ:07-10-2013ರ ನಿರ್ಣಯವನ್ನು ಒಪ್ಪುವುದು".

ಶ್ರೀ. ಬಿ.ಆರ್.ನಂಜುಂಡಪ್ಪ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯ ದಿನಾಂಕ: 07-10-2013ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

**(ಬಿ.ಎಸ್.ಸತ್ಯನಾರಾಯಣ)**
ಮಹಾಪೌರರು

# ದಿನಾಂಕ:28-10-2013 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯಲ್ಲಿ ತೀರ್ಮಾನವಾದ ಅಧಿಕ ವಿಷಯ

## ವಿಷಯದ ಸಂಖ್ಯೆ : 02 (88)/2013-14

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಸರ್ಕಾರದ ಆದೇಶಗಳ ಸಂಖ್ಯೆ: 1) 24/ಎಂಎನ್‌ವೈ/2009 ದಿನಾಂಕ: 28-09-2009, 771/ಎಂಎನ್‌ವೈ/2011 ದಿನಾಂಕ:03-01-2012. 3) 140/ಎಂಎನ್‌ವೈ/2012 ದಿನಾಂಕ:11-07-2012 ಮತ್ತು 4) 140/ಎಂಎನ್‌ವೈ/2012 ದಿನಾಂಕ:11-02-2013 ಗಳಂತೆ ಪಾಲಿಕೆಯು ಯೋಜನಾ ಕಾಮಗಾರಿಗಳಿಗೆ ಮತ್ತು ಪಾಲಿಕೆ ವ್ಯಾಪ್ತಿಯಲ್ಲಿ ಮೂಲಭೂತ ಸೌಕರ್ಯ ಅಭಿವೃದ್ಧಿಪಡಿಸಲು ಹಲವಾರು ಬ್ಯಾಂಕ್‌ಗಳಿಂದ ದೀರ್ಘಾವಧಿ ಸಾಲವನ್ನು ಪಡೆಯಲಾಗಿದ್ದು, ಈ ರೀತಿ ಬ್ಯಾಂಕ್‌ಗಳಲ್ಲಿ ಪಡೆದಿರುವ ಹೆಚ್ಚಿನ ಬಡ್ಡಿಯ ಸಾಲವನ್ನು (ಶೇ.10.70 ರಿಂದ 13.25%ರ ದರದವರೆಗೂ) ತೀರುವಳಿ ಮಾಡುವ ಸಲುವಾಗಿ ಹುಡ್ಕೋ ಸಂಸ್ಥೆಯಿಂದ ಪ್ರಸ್ತುತ ಶೇ.10.5% ಬಡ್ಡಿ ದರದಲ್ಲಿ ಹುಡ್ಕೋ ಸಂಸ್ಥೆಯ ಷರತ್ತು ಮತ್ತು ನಿಬಂಧನೆಗಳಿಗೆ ಒಳಪಟ್ಟು ಸರ್ಕಾರದ ಆದೇಶಗಳ ಮೇರೆಗೆ ಸಾಲವನ್ನು ಪಡೆಯಲಾಗಿದೆ. ವಿವರಗಳು ಕೆಳಕಂಡಂತಿವೆ.

| ಕ್ರ ಸಂ. | ವಿವರ | ಸಾಲದ ಮೊತ್ತ (ರೂ.ಕೋಟಿಗಳಲ್ಲಿ) | ಶಾಸನಬದ್ಧವಾದ ದಾಖಲೆಗಳನ್ನು ಸಹಿ ಮಾಡಿ ಸಲ್ಲಿಸಿದ ದಿನಾಂಕ |
|---|---|---|---|
| 1 | ಬಹುಮುಖ್ಯವಾದ ನಗರದ ಮೂಲಭೂತ ಸೌಕರ್ಯಗಳಿಗೆ ಪಡೆದಿರುವ ಹಣಕಾಸು ನೆರವು (ಸ್ಕೀಂ ಸಂಖ್ಯೆ: 20040- ಸಾಲದ ತೀರುವಳಿಗಾಗಿ) | 256.53 | 12-10-2011 |
| 2 | ಬಿ.ಬಿ.ಎಂ.ಪಿ. ಪ್ರದೇಶದಲ್ಲಿ ಆದ್ಯತೆಯ ಮೇರೆಗೆ ಕೈಗೊಳ್ಳುವ ಮೂಲಭೂತ ಸೌಕರ್ಯ ಯೋಜನೆಗಳಿಗೆ ಹಣಕಾಸು ನೆರವು (ಸ್ಕೀಂ ಸಂಖ್ಯೆ: 20060 - ಯೋಜನೆ ಆರ್ಥಿಕ ನೆರವಿಗಾಗಿ) | 500.00 | 25-11-2011 |
| 3 | ಪಾಲಿಕೆಯು ಹಲವಾರು ಬ್ಯಾಂಕ್‌ಗಳಿಂದ ಸಾಲವನ್ನು ಪಡೆದಿರುವುದು (ಸ್ಕೀಂ:20153-ಸಾಲದ ತೀರುವಳಿಗಾಗಿ) | 443.45 | 6-11-2012 |
| 4 | ಪಾಲಿಕೆಯ ವ್ಯಾಪ್ತಿಯಲ್ಲಿ ಮೂಲಭೂತ ಸೌಕರ್ಯಕ್ಕಾಗಿ ಸಾಲವನ್ನು ಪಡೆದಿರುವುದು (ಸ್ಕೀಂ ಸಂಖ್ಯೆ 20160- ಯೋಜನೆ ಆರ್ಥಿಕ ನೆರವಿಗಾಗಿ) | 200.00 | 6-11-2012 |
| 5 | ಪಾಲಿಕೆಯು ಹಲವಾರು ವಿವಿಧ ಬ್ಯಾಂಕ್‌ಗಳಿಂದ ಹೆಚ್ಚಿನ ಬಡ್ಡಿಯ ಸಾಲವನ್ನು ಪಡೆದಿರುವುದು (ಸ್ಕೀಂ ಸಂಖ್ಯೆ 20232 - ಸಾಲದ ತೀರುವಳಿಗಾಗಿ ) | 107.84 | 22-3-2013 |
| | ಒಟ್ಟು | **1507.82** | |

ಪಾಲಿಕೆಯ ಕೌನ್ಸಿಲ್ ಸಭೆಯ ನಿರ್ಣಯದಂತೆ, ಸಾಲವನ್ನು ಪಡೆಯಲು ಕರ್ನಾಟಕ ಸರ್ಕಾರದ ಆದೇಶದಂತೆ ಪಾಲಿಕೆಯು ಅಗತ್ಯವಾದ ದಾಖಲಾತಿಗಳು, ಭದ್ರತೆಗಾಗಿ ಆಸ್ತಿಗಳನ್ನು ಅಡಮಾನ ಮಾಡಲಾಗಿರುತ್ತದೆ. ಮೇಲ್ಕಂಡ ಸಾಲಗಳನ್ನು ಪಾಲಿಕೆಯು ನಗರದ ಮೂಲಭೂತ ಸೌಕರ್ಯಗಳನ್ನು ಒದಗಿಸುವ ಸಲುವಾಗಿ ಮತ್ತು ವಿವಿಧ ಬ್ಯಾಂಕ್‌ಗಳಿಂದ ಪಡೆಯಲಾದ ಹೆಚ್ಚಿನ ಬಡ್ಡಿಯ ಸಾಲವನ್ನು ತೀರುವಳಿ ಮಾಡಲು ಹುಡ್ಕೋ ಸಂಸ್ಥೆಯಿಂದ ಸಾಲವನ್ನು ಪಡೆಯಲಾಗಿದೆ. ಇದರಿಂದ ಪಾಲಿಕೆಗೆ ಹೆಚ್ಚಿನ ಹಣ ಉಳಿತಾಯವಾಗಲಿದ್ದು, ಮರುಪಾವತಿಗೆ ಹೆಚ್ಚಿನ ಸಮಯಾವಕಾಶ ಲಭ್ಯವಾಗಲಿದೆ.

ಮುಂದುವರೆದು ಕ್ರಸ. (1) ರಲ್ಲಿ ಈ ಹಿಂದೆ ಪಾಲಿಕೆಯು ಕಾರ್ಪೋರೇಷನ್ ಬ್ಯಾಂಕ್ ಹಾಗೂ ಸಿಂಡಿಕೇಟ್ ಬ್ಯಾಂಕ್‌ಗಳಿಂದ ಕ್ರಮವಾಗಿ ಶೇ.12.50 ಮತ್ತು ಶೇ.13.25 ಬಡ್ಡಿ ದರದಲ್ಲಿ ಪಡೆಯಲಾಗಿದ್ದ ಸಾಲವನ್ನು ತೀರುವಳಿಗಾಗಿ ಹುಡ್ಕೊ ಸಂಸ್ಥೆಯಿಂದ ಶೇ.10.50% ದರದಲ್ಲಿ ಸಾಲವನ್ನು ಪಡೆದು ತೀರುವಳಿ ಮಾಡಲಾಗಿದೆ. ಕ್ರಸ. (3) ರಲ್ಲಿ ಈ ಹಿಂದೆ ಪಾಲಿಕೆಯು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ರವರಿಂದ ಶೇ.12.75 ಮತ್ತು ಕೆನರಾ ಬ್ಯಾಂಕ್‌ನಿಂದ ಶೇ.11.25, ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಶೇ.11.50% ಕಾರ್ಪೋರೇಷನ್ ಬ್ಯಾಂಕ್ ಶೇ.12.25 (ಲೋನ್ ಅಕೌಂಟ್ 2) ಬಡ್ಡಿದರದಲ್ಲಿ ಪಡೆಯಲಾಗಿದ್ದ ಸಾಲವನ್ನು ತೀರುವಳಿಗಾಗಿ ಹುಡ್ಕೊ ಸಂಸ್ಥೆಯಿಂದ ಶೇ.10.50% ದರದಲ್ಲಿ ಸಾಲವನ್ನು ಪಡೆದು ತೀರುವಳಿ ಮಾಡಲಾಗಿದೆ. ಕ್ರಸ. (5) ರಲ್ಲಿ ಈ ಹಿಂದೆ ಕೆನರಾ ಬ್ಯಾಂಕ್ ನಿಂದ ಶೇ.11.25 ಬಡ್ಡಿದರದಲ್ಲಿ ಪಡೆಯಲಾಗಿದ್ದ ಸಾಲವನ್ನು ತೀರುವಳಿಗಾಗಿ ಹುಡ್ಕೊ ಸಂಸ್ಥೆಯಿಂದ ಶೇ.10.50% ದರದಲ್ಲಿ ಸಾಲವನ್ನು ಪಡೆದು ತೀರುವಳಿ ಮಾಡಲಾಗಿದೆ. ತೀರುವಳಿ ಸಾಲಗಳಿಗೆ 10 ವರ್ಷಗಳ ಮರುಪಾವತಿ ಕಾಲಮಿತಿಯಾಗಿರುತ್ತದೆ. ಕ್ರಸಂ. (2) ಮತ್ತು (4) ರಲ್ಲಿನ ಸಾಲಗಳನ್ನು ಯೋಜನೆಯ ಆರ್ಥಿಕ ನೆರವಿಗಾಗಿ ಹುಡ್ಕೊ ಸಂಸ್ಥೆಯಿಂದ ಸುಮಾರು 15 ವರ್ಷಗಳ ಕಾಲಮಿತಿಯಲ್ಲಿ ಶೇ.10.50% ದರದಲ್ಲಿ ಸಾಲವನ್ನು ಪಡೆಯಲಾಗಿದೆ.

ಮೇಲ್ಕಂಡ ಪ್ರಸ್ತಾವನೆಯ ಹಿನ್ನೆಲೆಯಲ್ಲಿ ಈ ಕೆಳಕಂಡ ಅಂಶಗಳಿಗೆ ಪಾಲಿಕೆ ಸಭೆಯ ನಿರ್ಣಯವನ್ನು ಕೋರಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:28-10-2013ರ ಟಿಪ್ಪಣಿ.

1. ಪಾಲಿಕೆಯು ಹೊಸದಾಗಿ ಕಾಲಕಾಲಕ್ಕೆ ಹುಡ್ಕೋ ಸಂಸ್ಥೆಯಿಂದ, ಸಾಲವನ್ನು ಪಡೆಯಲು ಮತ್ತು ವಿವಿಧ ಬ್ಯಾಂಕ್‌ಗಳಿಂದ ಪಡೆದ ಹೆಚ್ಚಿನ ಬಡ್ಡಿಯ ಸಾಲವನ್ನು ತೀರುವಳಿ ಮಾಡಲು ಮತ್ತು ಯೋಜನಾ ಕಾಮಗಾರಿಗಳಿಗೆ ಸಾಲದ ಮೂಲಕ ಆರ್ಥಿಕ ನೆರವನ್ನು ಪಡೆಯಲು ಮತ್ತು ಇದಕ್ಕೆ ಅಗತ್ಯವಾದ ಸಾಲಪತ್ರಗಳನ್ನು ತಯಾರಿಸಲು ಮತ್ತು ಭದ್ರತೆ/ಅಡಮಾನ ಪತ್ರಗಳನ್ನು ಹುಡ್ಕೋ ಸಂಸ್ಥೆಯ ಹೆಸರಿಗೆ ಪಾಲಿಕೆಯ ಪರವಾಗಿ ಸಹಿ ಮಾಡಿ ಒದಗಿಸಲು ಆಯುಕ್ತರವರಿಗೆ ಅಧಿಕಾರವನ್ನು ನೀಡುವುದು.

2. ಹುಡ್ಕೋ ಸಂಸ್ಥೆಗೆ ಸಾಲದ ಭದ್ರತೆಗಾಗಿ ಪಾಲಿಕೆಯ ಸಾಲದ ದಾಖಲಾತಿಗಳನ್ನು ಕಾಲಕಾಲಕ್ಕೆ ಅಡಮಾನ ನೀಡಲು ಮತ್ತು ಈ ಹಿಂದೆ ಕ್ರಸ. (1)ರಿಂದ (5)ರವರೆಗಿನ ಸಾಲದ ಮೊತ್ತಗಳಿಗೆ ಆಯುಕ್ತರು ಸಹಿ ಮಾಡಿ, ನೀಡಲಾಗಿರುವ ಸಾಲದ ದಾಖಲಾತಿಗಳ ಪ್ರಕ್ರಿಯೆಗೆ ಸ್ಥಿರಿಕರಣ ಕೋರಿ.

3. ಪ್ರಸ್ತುತ ಚರಂಡಿಗಳ ಅಭಿವೃದ್ಧಿಗಾಗಿ (ಪುನರ್ ನವೀಕರಣ ಕಾಮಗಾರಿಗಳು) ರೂ.50.00 ಕೋಟಿ ಮತ್ತು ಸಿಂಡಿಕೇಟ್ ಬ್ಯಾಂಕ್ (ಶೇ.11.00% ಬಡ್ಡಿ ದರ) ಹಾಗೂ ವಿಜಯ ಬ್ಯಾಂಕ್ (ಶೇ.10.70% ಬಡ್ಡಿ ದರ) ರವರಿಂದ ಪಡೆದಿರುವ ಹೆಚ್ಚು ಬಡ್ಡಿ ದರದ ಒಟ್ಟು ರೂ.169.03 ಕೋಟಿಗಳ ಸಾಲವನ್ನು ತೀರುವಳಿ ಮಾಡುವ ಸಲುವಾಗಿ ಪ್ರಸ್ತುತ ಹುಡ್ಕೋ ಸಂಸ್ಥೆಯ ಷರತ್ತು ಮತ್ತು ನಿಬಂಧನೆಗಳಿಗೆ ಒಪ್ಪಿ ಮತ್ತು ಅವುಗಳಿಗೆ ಒಳಪಟ್ಟು ಕಾಲಕಾಲಕ್ಕೆ ಅನ್ವಯವಾಗುವ ಬಡ್ಡಿದರವನ್ನು ಒಪ್ಪುತ್ತಾ, ಪ್ರಸ್ತುತ ಜಾರಿಯಲ್ಲಿರುವ ಶೇ.10.50% ಬಡ್ಡಿ ದರದಲ್ಲಿ ಸಾಲವನ್ನು ಪಡೆದು ಸೂಕ್ತ ಭದ್ರತಾ ದಾಖಲಾತಿಗಳನ್ನು ಮತ್ತು ಅಡಮಾನಗಳ ಪತ್ರಗಳನ್ನು ಸರ್ಕಾರದ ಆದೇಶ ಸಂಖ್ಯೆ: 140 ಎಂ.ಎನ್.ವೈ 2012 ದಿನಾಂಕ: 11-02-2013 ರೀತ್ಯಾ ಹುಡ್ಕೋ ಸಂಸ್ಥೆಗೆ ಆಯುಕ್ತರು ಸಾಲದ ದಾಖಲಾತಿಗಳನ್ನು ಪಾಲಿಕೆಯ ಪರವಾಗಿ ಸಹಿ ಮಾಡಿ ಒದಗಿಸಲು ಆಯುಕ್ತರವರಿಗೆ ಅಧಿಕಾರ ನೀಡುವುದು.

....................3

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಆಯುಕ್ತರವರ ದಿನಾಂಕ:28–10–2013ರ ಟಿಪ್ಪಣಿಯನ್ನು ಒಪ್ಪುವುದು".

ಶ್ರೀ. ಬಿ.ಆರ್.ನಂಜುಂಡಪ್ಪ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ಆಯುಕ್ತರವರ ದಿನಾಂಕ:28–10–2013ರ ಟಿಪ್ಪಣಿಯನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

(ಬಿ.ಎಸ್.ಸತ್ಯನಾರಾಯಣ)
ಮಹಾಪೌರರು

# ದಿನಾಂಕ:28-10-2013 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯಲ್ಲಿ ತೀರ್ಮಾನವಾದ ಅಧಿಕ ವಿಷಯ

## ವಿಷಯದ ಸಂಖ್ಯೆ : 03 (89)/2013-14

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಜಯನಗರ ವಿಧಾನ ಸಭಾ ಕ್ಷೇತ್ರದ ವಾರ್ಡ್ ಸಂಖ್ಯೆ:168ರ ವ್ಯಾಪ್ತಿಯ ಜಯನಗರ 4ನೇ ಟಿ ಬಡಾವಣೆಯ 18ನೇ ಮುಖ್ಯರಸ್ತೆಯಲ್ಲಿರುವ ಪಾಲಿಕೆಯ ಷಟಲ್ ಬ್ಯಾಡ್ಮಿಂಟನ್ ಒಳಾಂಗಣ ಹಾಗೂ ಕಟ್ಟಡವನ್ನು ನಿರ್ವಹಣೆ ಮತ್ತು ನಡೆಸಿಕೊಂಡು ಹೋಗಲು ಸಾಂಕೇತಿಕ ಬಾಡಿಗೆ ಆಧಾರದಲ್ಲಿ ರಕ್ಷಾ ಫೌಂಡೇಷನ್ (ರಿ) ಸಂಘಕ್ಕೆ ವಹಿಸಿಕೊಡುವ ಬಗ್ಗೆ ಪ್ರಸ್ತಾವನೆ ಸಲ್ಲಿಸಲಾಗಿದ್ದು, ಸದರಿ ಕ್ರೀಡಾಂಗಣದ ನೋಂದಾಯಿತ 58 ಸದಸ್ಯರು ಪ್ರತಿ ತಿಂಗಳಿಗೆ ರೂ.750/- ಗಳಂತೆ ಪಾವತಿಸುತ್ತಿದ್ದು, ಒಟ್ಟು ಮೊತ್ತ ರೂ.43,500/- ಗಳು ಆದಾಯ ಬರುತ್ತಿರುವುದಾಗಿ, ಸದರಿ ಕ್ರೀಡಾಂಗಣದ ನಿರ್ವಹಣೆಯ ಸಹಾಯಕರಾಗಿ ಎರಡು ಪಾಳಿಗಳಲ್ಲಿ ಕೆಲಸ ನಿರ್ವಹಿಸಲು ರೂ.11,454/- ಗಳು ಹಾಗೂ ಕಾವಲುಗಾರರಿಗೆ ರೂ.11,454/- ಗಳು ಬೇಕಾಗಿದ್ದು, ಒಳಾಂಗಣ ಕ್ರೀಡಾಂಗಣದ ನಿರ್ವಹಣೆಗೆ ಶೇ.10% ರಂತೆ ರೂ.4,350/- ಗಳು ಬೇಕಾಗಿದ್ದು, ಈ ಎಲ್ಲಾ ಖರ್ಚುಗಳು ಕಳೆದು ರೂ.5,000/- ಗಳು ಪಾಲಿಕೆ ಆದಾಯ ಇರುವುದಾಗಿ ವರದಿಸಿರುತ್ತಾರೆ.

ಕಾರ್ಯಪಾಲಕ ಅಭಿಯಂತರರು (ಜಯನಗರ) ವಿಭಾಗ ರವರು ಸಲ್ಲಿಸಿರುವ ಪ್ರಸ್ತಾವನೆಯಂತೆ ಮೇಲ್ಕಂಡ ಕಟ್ಟಡ ಮತ್ತು ಕ್ರೀಡಾಂಗಣವನ್ನು ರಕ್ಷಾ ಫೌಂಡೇಷನ್ (ರಿ) ರವರಿಗೆ ಚಾಲ್ತಿಯಲ್ಲಿರುವ ಷರತ್ತುಗಳನ್ನೊಳಗೊಂಡಂತೆ ಎಂ.ಓ.ಯು. ಮಾಡಿಕೊಂಡು ಬಾಡಿಗೆ ಆಧಾರದ ಮೇಲೆ 5 ವರ್ಷಗಳ ಅವಧಿಗೆ ವಹಿಸಿಕೊಡುವ ಬಗ್ಗೆ ಅನುಮೋದನೆ ಕೋರಿ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ:12-09-2013ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:01-10-2013ರ ನಿರ್ಣಯ ಹಾಗೂ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:01-10-2013ರ ನಿರ್ಣಯವನ್ನು ಒಪ್ಪಿರುವ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:24-10-2013ರ ನಿರ್ಣಯ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:24-10-2013ರ ನಿರ್ಣಯವನ್ನು ಒಪ್ಪುವುದು".

ಶ್ರೀ. ಬಿ.ಆರ್.ನಂಜುಂಡಪ್ಪ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:24-10-2013ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

(ಬಿ.ಎಸ್.ಸತ್ಯನಾರಾಯಣ)
ಮಹಾಪೌರರು

## ದಿನಾಂಕ:28-10-2013 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯಲ್ಲಿ ತೀರ್ಮಾನವಾದ ಅಧಿಕ ವಿಷಯ

## ವಿಷಯದ ಸಂಖ್ಯೆ : 04 (90)/2013-14

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ದಿನಾಂಕ:29-09-2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಕಾಮಗಾರಿಗಳ ಸ್ಥಾಯಿ ಸಮಿತಿಯ ಸಭೆಯಲ್ಲಿ ಸ್ಥಾಯಿ ಸಮಿತಿಯ ಅಧ್ಯಕ್ಷರು ಪಾಲಿಕೆಯ (ಕೇಂದ್ರ ಕಛೇರಿಯ) ಆವರಣದಲ್ಲಿ ಪಾಲಿಕೆ ಕಛೇರಿ ಸಂಕೀರ್ಣ ನಿರ್ಮಾಣ ಮಾಡಲು ಯೋಜನೆಯನ್ನು ತಯಾರಿಸಿ ಸ್ಥಾಯಿ ಸಮಿತಿಯ ಅನುಮತಿಯೊಂದಿಗೆ ಮಂಡಿಸಲು ಸೂಚಿಸಿರುತ್ತಾರೆ.

ಪಾಲಿಕಾ ಆವರಣವು ಸುಮಾರು 10.78 ಎಕರೆ ಪ್ರದೇಶವಾಗಿದ್ದು. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯು 800 ಚ.ಕೀ.ಮಿ ಗೆ ವಿಸ್ತೀರ್ಣವಾಗಿದ್ದು ಇದನ್ನು ಸಮರ್ಪಕವಾಗಿ ನಿರ್ವಹಿಸುವ ದೃಷ್ಟಿಯಿಂದ ಕರ್ನಾಟಕ ಸರ್ಕಾರವು 198 ವಾರ್ಡ್‌ಗಳನ್ನಾಗಿ ವಿಂಗಡಿಸಿ ಪಾಲಿಕೆಯ ಸ್ಥಾಯಿ ಸಮಿತಿಗಳನ್ನು 12ಕ್ಕೆ ಹೆಚ್ಚಿಸಿ ಆದೇಶ ಹೊರಡಿಸಿದ್ದು, ಇದಕ್ಕೆ ಅಗತ್ಯವಾಗಿ ಹೆಚ್ಚುವರಿ ಅಧಿಕಾರಿ / ಸಿಬ್ಬಂದಿ ಹುದ್ದೆಗಳು ಸೃಷ್ಟಿಯಾಗಿದ್ದು ಇದರಿಂದ ಕೇಂದ್ರ ಕಛೇರಿಯಲ್ಲಿ ಅಧಿಕಾರಿ ವರ್ಗ ಹಾಗೂ ಸಿಬ್ಬಂದಿಗಳಿಗೆ ಅಗತ್ಯ ಸ್ಥಳಾವಕಾಶದ ಕೊರತೆ ಸೃಷ್ಟಿಯಾಗಿರುತ್ತದೆ. ಮುಂದುವರೆದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ 198 ವಾರ್ಡ್‌ಗಳಿಗೆ ಸದಸ್ಯರು ಚುನಾಯಿತರಾಗಿದ್ದು, ವಿವರಗಳು ಈ ಕೆಳಕಂಡಂತಿವೆ:

1. Councillors – 198
2. Nominated Councillors – 10
3. MLA – 29
4. MLC – 17
5. MP – 5

Total - 260

ಹಾಲಿ ಇರುವ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಗೆ ಚುನಾಯಿತ ಪ್ರತಿನಿಧಿಗಳಿಗಾಗಿ ಸುಮಾರು 275 ಮಂದಿಗೆ ಸ್ಥಳಾವಕಾಶ ಬೇಕಾಗಿದ್ದು ಮುಂದಾಲೋಚನೆಯಿಂದ ಒಟ್ಟಾರೆ ಚುನಾಯಿತ ಪ್ರತಿನಿಧಿಗಳು ಮತ್ತು ಅಧಿಕಾರಿ ವರ್ಗಕ್ಕಾಗಿ ಸುಮಾರು 600 ಮಂದಿ ಕುಳಿತುಕೊಳ್ಳಬಹುದಾದ ಬೃಹತ್ ಸಭಾಂಗಣದ ಅವಶ್ಯಕತೆ ಇರುತ್ತದೆ. ಇದಲ್ಲದೆ ದಿನಾಂಕ:11-03-2011 ರಂದು ಪೂಜ್ಯ ಮಹಾಪೌರರು, ಉಪ ಮಹಾಪೌರರು, ಆಡಳಿತ ಪಕ್ಷದ ನಾಯಕರು, ವಿರೋಧಪಕ್ಷದ ನಾಯಕರು ಹಾಗೂ ಅಧ್ಯಕ್ಷರು (ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಬೃಹತ್ ಕಾಮಗಾರಿಗಳು) ರವರು ಉದ್ದೇಶಿತ ಕಟ್ಟಡ ಕೇಂದ್ರ ಕಛೇರಿ ಪಾಲಿಕಾ ಟವರ್ ವಿನ್ಯಾಸ ಕಲ್ಪಿಸಬೇಕೆಂದು ಸೂಚಿಸಿರುತ್ತಾರೆ.

### ಆಯುಕ್ತರ ಕಛೇರಿ ಕಟ್ಟಡ

ಕೇಂದ್ರ ಕಛೇರಿಯ ಆವರಣದಲ್ಲಿ ಆಡಳಿತ ವಿಭಾಗದ ಮಾನ್ಯ ಆಯುಕ್ತರ ಕಛೇರಿಯ ಕಟ್ಟಡದಲ್ಲಿ ಎಲ್ಲಾ ಇಲಾಖಾ ಮುಖ್ಯಸ್ಥರಿಗೆ ಸ್ಥಳಾವಕಾಶ ಕಲ್ಪಿಸಲು ಸಾಧ್ಯವಾಗದೇ ಇರುವುದರಿಂದ ಸದರಿ ಕಟ್ಟಡದಲ್ಲಿ ಹಾಲಿ ಇರುವ ಇತರೆ ವಿಭಾಗದ ಕಛೇರಿಗಳನ್ನು ಸ್ಥಳಾಂತರಿಸಿ ಈ ಎಲ್ಲಾ ಕಛೇರಿಗಳಲ್ಲಿ ವಿಶೇಷ ಆಯುಕ್ತರು, ಅಪರ ಆಯುಕ್ತರು, ಉಪ ಆಯುಕ್ತರು, ಇಲಾಖಾ ಮುಖ್ಯಸ್ಥರುಗಳು ಹಾಗೂ ಆಡಳಿತ ವಿಭಾಗದ ಅಧಿಕಾರಿರವರುಗಳಿಗೆ ಸ್ಥಳಾವಕಾಶ ಕಲ್ಪಿಸಬೇಕಾಗಿರುತ್ತದೆ.

............................2

ಪಾಲಿಕಾ ಆವರಣವು ಸುಮಾರು 10 ಎಕರೆ ಪ್ರದೇಶವಾಗಿದ್ದು ಇದರಲ್ಲಿ ಮಹಾಪೌರರ ಹಾಗೂ ಆಯುಕ್ತರ ಕಛೇರಿ ಕಟ್ಟಡ ಮತ್ತು ಪಾಲಿಕೆ ಭವನ ಈ ಎರಡೂ ಕಟ್ಟಡಗಳು ಉತ್ತಮ ವಿನ್ಯಾಸದಿಂದ ನಿರ್ಮಾಣವಾಗಿರುತ್ತದೆ. ಮಹಾಪೌರರ ಹಾಗೂ ಆಯುಕ್ತರ ಕಛೇರಿ ಕಟ್ಟಡವು ಹೆರಿಟೇಜ್ ಕಟ್ಟಡವಾಗಿದ್ದು ಇದಕ್ಕೆ ಯಾವುದೇ ರೀತಿಯ ಮಾರ್ಪಾಡು ಅಗತ್ಯವಿರುವುದಿಲ್ಲ.

**ಕೌನ್ಸಿಲ್ ಹಾಲ್**

ಈ ಕಟ್ಟಡವು 1995 ರಲ್ಲಿ ನಿರ್ಮಾಣವಾಗಿದ್ದು ಇದರಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭಾಂಗಣವಿದ್ದು ಈ ಸಭಾಂಗಣವು ಕಿರಿದಾಗಿದ್ದು 600 ಮಂದಿಗೆ ಸ್ಥಳಾವಕಾಶವಿರುವ ಪಾಲಿಕಾ ಸಭಾಂಗಣವನ್ನು ನಿರ್ಮಾಣ ಮಾಡಬೇಕಾಗಿದ್ದು, ಇದರೊಂದಿಗೆ ಆಡಳಿತ ಪಕ್ಷದ ನಾಯಕರು, ವಿರೋಧ ಪಕ್ಷದ ನಾಯಕರುಗಳು ಮತ್ತು ಕೌನ್ಸಿಲ್ ಕಾರ್ಯಾಲಯಗಳಿಗೆ ಅವಶ್ಯಕವಿರುವ ಅಗತ್ಯ ಸ್ಥಳಾವಕಾಶವನ್ನೂ ಸಹಾ ಕಲ್ಪಿಸಬೇಕಾಗಿರಬೇಕಾಗಿರುತ್ತದೆ ಇದಕ್ಕಾಗಿ ಹೆಚ್ಚುವರಿ ಒಂದು ಅಂತಸ್ತನ್ನು ನಿರ್ಮಾಣ ಮಾಡಬೇಕಾಗಿರುತ್ತದೆ.

**ಅನೆಕ್ಸ್ ಬಿಲ್ಡಿಂಗ್**

ಈ ಕಟ್ಟಡವು 1961 ನಿರ್ಮಾಣವಾಗಿದ್ದು 50 ವರ್ಷಗಳಷ್ಟು ಹಳೆಯ ಕಟ್ಟಡವಾಗಿರುತ್ತದೆ. ಈ ಕಟ್ಟಡವು ಸುಮಾರು 800.00 ಚಮೀ ಇದ್ದು ಇದು 3/4 ಅಂತಸ್ತುಗಳ ಕಟ್ಟಡವಾಗಿರುತ್ತದೆ ಮತ್ತು ಅನೆಕ್ಸ್ ಬಿಲ್ಡಿಂಗ್ -1 ಎ ಕಟ್ಟಡವು 1978 ರಲ್ಲಿ ನಿರ್ಮಾಣವಾಗಿದ್ದು 32 ವರ್ಷಗಳಷ್ಟು ಹಳೆಯ ಕಟ್ಟಡವಾಗಿರುತ್ತದೆ. ಈ ಕಟ್ಟಡವು ಸುಮಾರು 500.00 ಚಮೀ ಇದ್ದು ಇದು 4 ಅಂತಸ್ತು ಕಟ್ಟಡವಾಗಿದ್ದು ಒಟ್ಟಾರೆ 1300.00 ಚ.ಮೀ ಇದ್ದು ಇದರಲ್ಲಿ ಅಧಿಕಾರಿ ವರ್ಗ ಹಾಗೂ ಕಛೇರಿ ಸಿಬ್ಬಂದಿಯವರಿಗೆ ಸ್ಥಳಾವಕಾಶವು ಅಸಮರ್ಪಕವಾಗಿರುತ್ತದೆ ಹಾಗೂ ಉದ್ದೇಶಿತ ಕೇಂದ್ರ ಕಛೇರಿ ಪಾಲಿಕಾ ಟವರ್ ನಿರ್ಮಾಣಕ್ಕೆ ಅಗತ್ಯವಿರುವ ರಸ್ತೆ ಅಂಚಿನಿಂದ 16 ಮೀ.ಗಳ ಸೆಟ್‌ಬ್ಯಾಕ್ ಅನ್ನು ಬಿಡಬೇಕಾಗಿದ್ದು ಈ ಕಟ್ಟಡದ ಸೆಟ್‌ಬ್ಯಾಕ್ ಸುಮಾರು 4.50 ಮೀ ಮಾತ್ರ ಇರುತ್ತದೆ.

**ಅನೆಕ್ಸ್ ಬಿಲ್ಡಿಂಗ್ - 2**

ಈ ಕಟ್ಟಡವು 2010 ರಲ್ಲಿ ನಿರ್ಮಾಣವನ್ನು ಚಾಲ್ತಿ ಮಾಡಿದ್ದು, ನಿರ್ಮಾಣದ ಕೆಲಸವು ಪ್ರಗತಿಯಲ್ಲಿರುತ್ತದೆ. ಈ ಕಟ್ಟಡವು ಸುಮಾರು 760.00 ಚಮೀ ಇದ್ದು ಈ ಕಟ್ಟಡವು ಏಳು ಅಂತಸ್ಥಿನ ಕಟ್ಟಡವಾಗಿದ್ದು ಒಟ್ಟಾರೆ 5320.00 ಚ.ಮೀ ಇರುತ್ತದೆ. ಪಾಲಿಕೆಯ ಎಲ್ಲಾ ಪ್ರಾಜೆಕ್ಟ್ ವಿಭಾಗಗಳನ್ನು ಈ ಕಟ್ಟಡಕ್ಕೆ ಸ್ಥಳಾಂತರಿಸಲು ಮಾನ್ಯ ಆಯುಕ್ತರು ಆದೇಶಿಸಿರುವುದರಿಂದ ಈ ಕಟ್ಟಡದಲ್ಲಿ ಸಹ ಎಲ್ಲಾ ಪ್ರಾಜೆಕ್ಟ್ ವಿಭಾಗದ ಅಧಿಕಾರಿ ಹಾಗೂ ಸಿಬ್ಬಂದಿ ವರ್ಗದವರಿಗೆ ಸ್ಥಳಾವಕಾಶ ಇರುವುದಿಲ್ಲ.

**ರಾಜ್‌ಕುಮಾರ್ ಗಾಜಿನ ಮನೆ**

ಈ ಕಟ್ಟಡವು ಸುಮಾರು 1300.00 ಚಮೀ ಇದ್ದು ಈಗಾಗಲೇ ಪದ್ಮಭೂಷಣ ಡಾ:ರಾಜ್‌ಕುಮಾರ್ ರವರ ಹೆಸರಿನಲ್ಲಿ ನಿರ್ಮಾಣವಾಗಿರುವ ಗಾಜಿನ ಮನೆಯನ್ನು ಡಾ: ರಾಜ್‌ಕುಮಾರ್ ಸಮಾಧಿಗೆ ಸ್ಥಳಾಂತರಿಸಲು ದಿನಾಂಕ: 11-03-2011 ರಂದು ಪೂಜ್ಯ ಮಹಾಪೌರರು ಹಾಗೂ ಆಡಳಿತ ಪಕ್ಷದ ನಾಯಕರು ಮೌಖಿಕವಾಗಿ ಸೂಚಿಸಿರುತ್ತಾರೆ ಹಾಗೂ ಸದರಿ ಗಾಜಿನ ಮನೆಯನ್ನು ಕಂಠೀರವ ಸ್ಟೂಡಿಯೋ ಆವರಣದಲ್ಲಿರುವ ಡಾ: ರಾಜ್‌ಕುಮಾರ್ ಸಮಾಧಿ ಇರುವ ಜಾಗಕ್ಕೆ ಸ್ಥಳಾಂತರಿಸುವ ವಿಚಾರವನ್ನು ಡಾ: ರಾಜ್‌ಕುಮಾರ್ ಕುಟುಂಬದವರೊಂದಿಗೆ ಚರ್ಚಿಸುವುದಾಗಿ ತಿಳಿಸಿರುತ್ತಾರೆ. ಪದ್ಮಭೂಷಣ ಡಾ:ರಾಜ್‌ಕುಮಾರ್ ಗಾಜಿನ ಮನೆಯನ್ನು ಸ್ಥಳಾಂತರಿಸಬಹುದಾಗಿರುತ್ತದೆ.

..............3

**ತಾತ್ಕಾಲಿಕ ಕಟ್ಟಡಗಳು:**

ಪಾಲಿಕೆಯ ಆವರಣದಲ್ಲಿ ಹಲವಾರು ಸಂಘ ಸಂಸ್ಥೆಗಳು, ಕ್ಯಾಂಟಿನ್, ಗುಣ ನಿಯಂತ್ರಣ ವಿಭಾಗ, ತಾತ್ಕಾಲಿಕ ಮೇಲ್ವಿಚಾರಣೆಯ ಕಟ್ಟಡಗಳಿದ್ದು ಈ ಎಲ್ಲಾ ಕಟ್ಟಡಗಳನ್ನು ಒಡೆದು ಹಾಕಿ ಉದ್ದೇಶಿತ ಕೇಂದ್ರ ಕಛೇರಿ ಪಾಲಿಕಾ ಟವರ್ ಕಟ್ಟಡದಲ್ಲಿ ಸ್ಥಳಾವಕಾಶ ಕಲ್ಪಿಸಬೇಕಾಗುತ್ತದೆ.

**ವಾಹನ ನಿಲುಗಡೆ:**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಸಂದರ್ಭದಲ್ಲಿ ಈಗಿನ ಪರಿಸ್ಥಿತಿಯಲ್ಲಿ ಸುಮಾರು 500 ಕಾರುಗಳಿಗೆ ಸ್ಥಳಾವಕಾಶ ಬೇಕಾಗಿರುತ್ತದೆ. ದೂರದೃಷ್ಟಿಯಿಂದ ಉದ್ದೇಶಿತ ಕೇಂದ್ರ ಕಛೇರಿ ಪಾಲಿಕಾ ಟವರ್ ಕಟ್ಟಡದಲ್ಲಿ 750 ಕಾರುಗಳು ಹಾಗೂ ಪಾಲಿಕೆಯ ಆವರಣದಲ್ಲಿ ಸುಮಾರು 150 ಕಾರುಗಳು, ಅಂದರೆ ಒಟ್ಟಾರೆ 900 ಕಾರುಗಳಿಗೆ ಸ್ಥಳಾವಕಾಶ ಕಲ್ಪಿಸಬಹುದಾಗಿರುತ್ತದೆ.

**ಕೇಂದ್ರ ಕಛೇರಿ ಪಾಲಿಕಾ ಟವರ್ ಕಟ್ಟಡ**

ಉದ್ದೇಶಿತ ಕೇಂದ್ರ ಕಛೇರಿ ಪಾಲಿಕಾ ಟವರ್ ಕಟ್ಟಡದಲ್ಲಿ ಎಲ್ಲಾ ಸ್ಥಾಯಿ ಸಮಿತಿಯ ಅಧ್ಯಕ್ಷರುಗಳಿಗೆ ಹಾಗೂ ಸ್ಥಾಯಿ ಸಮಿತಿಗಳಿಗೆ ಸ್ಥಳಾವಕಾಶ ಕಲ್ಪಿಸಬೇಕಾಗಿರುತ್ತದೆ.

ಈ ಕಟ್ಟಡವನ್ನು ಆಧುನಿಕ ತಂತ್ರಜ್ಞಾನದಲ್ಲಿ ನಿರ್ಮಾಣ ಮಾಡಬೇಕಾಗಿದ್ದು ಹಾಗೂ ಈ ಕಟ್ಟಡವನ್ನು ಗ್ರೀನ್ ಬಿಲ್ಡಿಂಗ್ ಆಗಿ ನಿರ್ಮಾಣ ಮಾಡಲು ಉದ್ದೇಶಿಸಲಾಗಿರುತ್ತದೆ. (Green Building is one which uses less water, optimizes energy efficiency, conserves natural resources, generates less waste and provides healthier spaces for occupants, as compared to a conventional building) ಇದಕ್ಕಾಗಿ Indian Green Building Council IGBC – LEED- India (The Leadership in Energy & Environmental Design) ನ ಮಾರ್ಗದರ್ಶನದಲ್ಲಿ ನಿರ್ಮಾಣ ಮಾಡಬೇಕಾಗಿರುತ್ತದೆ.

1978 ರಲ್ಲಿ ನಿರ್ಮಾಣವಾಗಿದ್ದ ಅನೆಕ್ಸ್ ಬಿಲ್ಡಿಂಗ್ ಕಟ್ಟಡವನ್ನು ಒಡೆದು ಹಾಕಿ ಸುಮಾರು 10 ಎಕರೆ 78 ಕುಂಟೆ ವಿಸ್ತೀರ್ಣದ ಜಾಗದಲ್ಲಿ 29 ಅಂತಸ್ತಿನ ಅಂದಾಜು 129751.00 ಚ.ಮೀ ಕೇಂದ್ರ ಕಛೇರಿ ಪಾಲಿಕಾ ಟವರ್ ಕಟ್ಟಡದ ನಿರ್ಮಾಣದ ಅಂದಾಜು ವೆಚ್ಚ ರೂ 400.00 ಕೋಟಿಗಳ ಯೋಜನೆಯನ್ನು ಕೈಗೆತ್ತಿಕೊಳ್ಳಬಹುದಾಗಿರುತ್ತದೆ. ಹಾಗೂ ಸದರಿ ಕಾಮಗಾರಿಗೆ 2013-14ನೇ ಸಾಲಿನ ಆಯವ್ಯಯದ ಪುಟ ಸಂಖ್ಯೆ: 134 ಲೆಕ್ಕ ಶೀರ್ಷಿಕೆ ಪಿ-2186 ಅಡಿಯಲ್ಲಿ ರೂ.200.00 ಲಕ್ಷಗಳ ಅನುದಾನವನ್ನು ಮೀಸಲಿಡಲಾಗಿರುತ್ತದೆ ಹಾಗೂ ಈಗಾಗಲೇ ದಿನಾಂಕ: 29-09-2010 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯಲ್ಲಿ ಈ ಯೋಜನೆಗೆ ಸಲಹೆಗಾರರನ್ನು ನೇಮಕ ಮಾಡಲು ಅನುಮೋದನೆ ನೀಡಲಾಗಿರುತ್ತದೆ.

ದಿನಾಂಕ:23.09.2013 ರಂದು ಪೂಜ್ಯ ಮಹಾಪೌರರ ಕಛೇರಿಯಲ್ಲಿ ನಡೆದ ಸಭೆಯಲ್ಲಿ ಪೂಜ್ಯ ಮಹಾಪೌರರು ಸದರಿ ಕಾಮಗಾರಿಯನ್ನು PPP (Public Private Partnership) ಅಡಿಯಲ್ಲಿ ಕೈಗೆತ್ತಿಕೊಳ್ಳಲು ಸೂಚಿಸಿರುವ ಹಿನ್ನೆಲೆಯಲ್ಲಿ ಪಾಲಿಕೆ ಭವನ ನಿರ್ಮಾಣ ಕಾಮಗಾರಿಯನ್ನು PPP (Public Private Partnership) ಅಡಿಯಲ್ಲಿ ಕೈಗೆತ್ತಿಕೊಳ್ಳಲು ಮತ್ತು ppp ಮಾದರಿಯಲ್ಲಿ ವಿವಿಧ ಗುತ್ತಿಗೆದಾರರ ಸಂಸ್ಥೆಗಳಿಂದ Expression of Interest ಅನ್ನು ಕರೆಯುವ ಬಗ್ಗೆ ಅನುಮೋದನೆ ಕೋರಿ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ:21-10-2013ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ:24-10-2013ರ ನಿರ್ಣಯ.

.........4

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ:24-10-2013ರ ನಿರ್ಣಯವನ್ನು ಒಪ್ಪುವುದು".

ಶ್ರೀ. ಬಿ.ಆರ್.ನಂಜುಂಡಪ್ಪ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ದೀರ್ಘವಾದ ಚರ್ಚೆಯ ನಂತರ ಪಿ.ಪಿ.ಪಿ. ಅಡಿಯಲ್ಲಿ ಕಾಮಗಾರಿಯನ್ನು ತೆಗೆದುಕೊಳ್ಳಬಾರದೆಂದು ಸಭೆಯು ಅಭಿಪ್ರಾಯ ವ್ಯಕ್ತಪಡಿಸಿದ್ದು, ಸದರಿ ಅಭಿಪ್ರಾಯವನ್ನು ಮತಕ್ಕೆ ಹಾಕಲಾಗಿ ಅಭಿಪ್ರಾಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ</u>: "ಪಿ.ಪಿ.ಪಿ. ಎನ್ನುವ ಪದವನ್ನು ತೆಗೆದುಹಾಕಿ, ಕಾನ್ಸೆಪ್ಟ್ ತಯಾರು ಮಾಡಲು ಸಭೆಯು ತೀರ್ಮಾನಿಸಲಾಯಿತು".

(ಬಿ.ಎಸ್.ಸತ್ಯನಾರಾಯಣ)
ಮಹಾಪೌರರು

# ದಿನಾಂಕ:28-10-2013 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯಲ್ಲಿ ತೀರ್ಮಾನವಾದ ಅಧಿಕ ವಿಷಯ

## ವಿಷಯದ ಸಂಖ್ಯೆ : 05 (91)/2013-14

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಹೊರಭಾಗದಲ್ಲಿ ನಗರಕ್ಕೆ ಸಂಪರ್ಕ ಕಲ್ಪಿಸುವ ಮುಖ್ಯರಸ್ತೆ / ಹೆದ್ದಾರಿಗಳಲ್ಲಿ ನಾಡಪ್ರಭು ಕೆಂಪೇಗೌಡರ ಗೋಪುರಗಳನ್ನು ಡೆವಲಪರ್ಸ್‌ಗಳ ಪ್ರಾಯೋಜಕತ್ವದಲ್ಲಿ ನಿರ್ಮಿಸಲು ದಿನಾಂಕ:11-09-2013 ರಂದು ನಡೆದ ಪೂಜ್ಯ ಮಹಾಪೌರರ ಸಭೆಯಲ್ಲಿ ಚರ್ಚಿಸಿ ನಿರ್ದೇಶನ ನೀಡಲಾಗಿದೆ.

ನಾಡಪ್ರಭು ಕೆಂಪೇಗೌಡರ ಗೋಪುರಗಳನ್ನು ನಗರದ ಎಂಟು ಪ್ರಮುಖ ರಸ್ತೆಗಳಲ್ಲಿ ಮತ್ತು ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಪ್ರವೇಶ ವೃತ್ತದಲ್ಲಿ ಸ್ಥಾಪಿಸುವ ಬಗ್ಗೆ ಸ್ಥಳಗಳನ್ನು ಗುರುತಿಸಲಾಗಿರುತ್ತದೆ. ಸದರಿ ಸ್ಥಳ / ರಸ್ತೆಗಳ ವಿವರ ಈ ಕೆಳಗಿನಂತಿವೆ.

1. ಕನಕಪುರ ರಸ್ತೆ – ನೈಸ್ ರಸ್ತೆ ಹೊರಗೆ ವ್ಯಾಲಿ ಸ್ಕೂಲ್ ರಸ್ತೆ ತಿರುವಿನಲ್ಲಿ
2. ಮೈಸೂರು ರಸ್ತೆ – ನೈಸ್ ರಸ್ತೆ ಲೂಪ್ ರೋಡ್ ಮತ್ತು ಮೈಸೂರು ರಸ್ತೆ ನಡುವೆ ಇರುವ ತ್ರಿಭುಜಾಕಾರದ ಜಾಗ
3. ಮಾಗಡಿ ರಸ್ತೆ – ಕಡಬಗೆರೆ ಕ್ರಾಸ್
4. ತುಮಕೂರು ರಸ್ತೆ – ನೈಸ್ ರಸ್ತೆ ಎಂಟ್ರಿ ಲೂಪ್ ನಡುವೆ ಇರುವ ಉದ್ಯಾನವನ
5. ದೇವನಹಳ್ಳಿ ರಸ್ತೆ – ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ತೆರಳುವ ಏರು ರಸ್ತೆ ಮತ್ತು ಹೆದ್ದಾರಿ ರಸ್ತೆ ನಡುವೆ ಇರುವ ಉದ್ಯಾನವನದಲ್ಲಿ
6. ಹಳೇ ಮದ್ರಾಸ್ ರಸ್ತೆ – ಹೊಸಕೋಟೆ ಟೋಲ್ ಪ್ರವೇಶ ದ್ವಾರದ ಹತ್ತಿರ
7. ಹೊಸೂರು ರಸ್ತೆ – ಸುವಿಧಾ ಕಾಲೇಜ್ ಎದುರು ಮೀಡಿಯನ್ ಪ್ರದೇಶ
8. ಬನ್ನೇರುಘಟ್ಟ ರಸ್ತೆ – ವೀವರ್ಸ್ ಕಾಲೋನಿ ರಸ್ತೆ ತಿರುವಿನಲ್ಲಿ
9. ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಆವರಣ– ವಿಮಾನ ನಿಲ್ದಾಣದ ಪ್ರವೇಶ ರಸ್ತೆಯ ಪ್ರಾರಂಭಿಕ ವೃತ್ತದಲ್ಲಿ.

ಮೇಲ್ಕಂಡ ಸ್ಥಳಗಳು ರಾಜ್ಯ ಹೆದ್ದಾರಿ, ರಾಷ್ಟ್ರೀಯ ಹೆದ್ದಾರಿ, ನೈಸ್ ರಸ್ತೆ ಇತರೆ ರಸ್ತೆಗಳ ವ್ಯಾಪ್ತಿಗೆ ಒಳಪಡುವ ಪ್ರದೇಶಗಳಲ್ಲಿ ಇರುವುದರಿಂದ ಸಂಬಂಧಪಟ್ಟ ಇಲಾಖೆಗಳೊಂದಿಗೆ ವ್ಯವಹರಿಸಲಾಗುತ್ತಿದ್ದು, ಸದರಿ ಇಲಾಖೆಗಳಿಂದ ನಾಡಪ್ರಭು ಕೆಂಪೇಗೌಡರ ಗೋಪುರ ಸ್ಥಾಪಿಸಲು ಅನುಮತಿ (NOC) ಕೋರಲಾಗಿದೆ.

ಪಾಲಿಕೆಗೆ ಹಣಕಾಸು ಹೊರೆಯಾಗದಂತೆ ಯೋಜನೆ ಅನುಷ್ಠಾನಗೊಳಿಸಲು ನಗರದ ಪ್ರಮುಖ ಡೆವಲಪರ್ಸ್‌ಗಳನ್ನು ನಾಡಪ್ರಭು ಕೆಂಪೇಗೌಡರ ಗೋಪುರಗಳ ನಿರ್ಮಾಣ ಪ್ರಾಯೋಜಕತ್ವ ವಹಿಸಿಕೊಂಡು ಮೂರು ತಿಂಗಳೊಳಗೆ ಕಾರ್ಯಗತಗೊಳಿಸಿಕೊಟ್ಟು, ತಮ್ಮ ಸಂಸ್ಥೆಯ ಜಾಹೀರಾತು ಫಲಕ ಅಳವಡಿಸಿಕೊಳ್ಳುವಂತೆ ಕೋರಲಾಗಿರುತ್ತದೆ. ಈ ನಿಟ್ಟಿನಲ್ಲಿ ಕೆಲವೊಂದು ಡೆವಲಪರ್ಸ್‌ಗಳು ನಿರ್ದಿಷ್ಟ ರಸ್ತೆಯಲ್ಲಿ ನಾಡಪ್ರಭು ಕೆಂಪೇಗೌಡರ ಗೋಪುರ ನಿರ್ಮಿಸಲು ಇಚ್ಛೆ ವ್ಯಕ್ತಪಡಿಸಿ ಮೌಖಿಕವಾಗಿ ತಿಳಿಸಿರುತ್ತಾರೆ.

ಹೀಗಾಗಿ, ಹಡ್ಸನ್ ವೃತ್ತದಲ್ಲಿರುವ ನಾಡಪ್ರಭು ಕೆಂಪೇಗೌಡರ ಗೋಪುರದ ಮಾದರಿಯಲ್ಲಿ ನಗರದ ಹೊರವಲಯದಲ್ಲಿ ಪ್ರಮುಖ ರಸ್ತೆಗಳಲ್ಲಿ ನಾಡಪ್ರಭು ಕೆಂಪೇಗೌಡರ ಗೋಪುರಗಳನ್ನು ಡೆವಲಪರ್ಸ್‌ಗಳ ಪ್ರಾಯೋಜಕತ್ವದಲ್ಲಿ ಸ್ಥಾಪಿಸಲು ಉದ್ದೇಶಿಸಲಾದ ಪ್ರಸ್ತಾವನೆಗೆ ಸಂಬಂಧಪಟ್ಟ ವಿವಿಧ ಇಲಾಖೆಗಳ ನಿರಾಕ್ಷೇಪಣಾ ಪತ್ರ (NOC) ಬಂದ ನಂತರ ಪಾಲಿಕೆಗೆ ಹಣಕಾಸು ಹೊರೆಯಾಗದಂತೆ ನಾಡಪ್ರಭು ಕೆಂಪೇಗೌಡರ ಗೋಪುರಗಳನ್ನು ನಿರ್ದಿಷ್ಟ ಸಮಯದಲ್ಲಿ ನಿರ್ಮಿಸಬಹುದಾಗಿದೆ ಹಾಗೂ ಡೆವಲಪರ್ಸ್‌ಗಳಿಗೆ ಜಾಹೀರಾತು ಫಲಕಗಳನ್ನು ಅಳವಡಿಸಿಕೊಳ್ಳಲು ಅನುಮತಿ ನೀಡಬೇಕಾಗಿರುವ ಬಗ್ಗೆ ಅನುಮೋದನೆ ಕೋರಿ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:25-10-2013ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:25-10-2013ರ ನಿರ್ಣಯ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:25-10-2013ರ ನಿರ್ಣಯವನ್ನು ಒಪ್ಪುವುದು".

ಶ್ರೀ. ಬಿ.ಆರ್.ನಂಜುಂಡಪ್ಪ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ: 25-10-2013ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

(ಬಿ.ಎಸ್.ಸತ್ಯನಾರಾಯಣ)
ಮಹಾಪೌರರು

# ದಿನಾಂಕ:28-10-2013 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯಲ್ಲಿ ತೀರ್ಮಾನವಾದ ಅಧಿಕ ವಿಷಯ

## ವಿಷಯದ ಸಂಖ್ಯೆ : 06 (92)/2013-14

ಟಿಪ್ಪಣಿಯಲ್ಲಿ ವಿವರಿಸಿರುವಂತೆ, Remodelling of drain MD-261A from RR Layout to I.T.I. compound (RCC U shape drain from Ch:425 M-920M) ಕಾಮಗಾರಿಯು ಬಿ.ಬಿ.ಎಂ.ಪಿ ವ್ಯಾಪ್ತಿಯ ಮಹದೇವಪುರ ವಲಯದ ವಿಜನಾಪುರ ವಾರ್ಡ್ ಸಂಖ್ಯೆ:51ರ ಆರ್.ಆರ್.ಬಡಾವಣೆಯ ಕಾಲುವೆಗೆ ಸಂಬಂಧಿಸಿದ್ದು, ಈ ಬಡಾವಣೆಯ ತಗ್ಗು ಪ್ರದೇಶದಲ್ಲಿ ಮಳೆಗಾಲದಲ್ಲಿ ಪ್ರವಾಹ ಉಂಟಾಗುವುದನ್ನು ತಡೆಗಟ್ಟುವ ನಿಟ್ಟಿನಲ್ಲಿ ಸದರಿ ಕಾಮಗಾರಿಯನ್ನು Flood prone ಯೋಜನೆಯಡಿ ಕೈಗೆತ್ತಿಕೊಳ್ಳಲಾಗಿದೆ. ಮೇಲ್ಕಂಡ ಕಾಮಗಾರಿಯ ಅಂದಾಜು ಪಟ್ಟಿಯನ್ನು 2011-12ನೇ ಸಾಲಿನ ಲೋಕೋಪಯೋಗಿ ಇಲಾಖೆಯ ದರಪಟ್ಟಿಯಂತೆ ರೂ.400.00 ಲಕ್ಷಗಳಿಗೆ ತಯಾರಿಸಿ ಸಕ್ಷಮ ಪ್ರಾಧಿಕಾರದಿಂದ ಆಡಳಿತಾತ್ಮಕ ಹಾಗೂ ತಾಂತ್ರಿಕ ಅನುಮೋದನೆ ಪಡೆಯಲಾಗಿದೆ.

ಈ ಕಾಮಗಾರಿಗೆ 3ನೇ ಕರೆಯಾಗಿ ದಿನಾಂಕ:03-08-2012ರಂದು E-procurement portal ನಲ್ಲಿ ದ್ವಿ-ಲಕೋಟೆ ಪದ್ಧತಿಯಲ್ಲಿ ಟೆಂಡರ್ ಅಧಿಸೂಚನೆಯನ್ನು ಹೊರಡಿಸಲಾಯಿತು. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ:06-09-2012ರಂದು ಆಗಿದ್ದು, ಟೆಂಡರ್‌ನಲ್ಲಿ ಒಬ್ಬರೇ ಗುತ್ತಿಗೆದಾರ ಶ್ರೀ.ಐ.ಚನ್ನಕೃಷ್ಣ ರೆಡ್ಡಿರವರು ಭಾಗವಹಿಸಿರುತ್ತಾರೆ. ಸದರಿ ಗುತ್ತಿಗೆದಾರರು ಸಲ್ಲಿಸಿದ್ದ ತಾಂತ್ರಿಕ ಬಿಡ್‌ಗಳನ್ನು ದಿನಾಂಕ:18-09-2012ರಂದು ತೆರೆಯಲಾಗಿದೆ. ತಾಂತ್ರಿಕವಾಗಿ ಗುತ್ತಿಗೆದಾರರು ಅರ್ಹತೆಯನ್ನು ಹೊಂದಿದ್ದು, ಇದಕ್ಕೆ ಮುಖ್ಯ ಅಭಿಯಂತರರು ದಿನಾಂಕ:11-10-2012ರಂದು ಅನುಮೋದನೆ ನೀಡಿದ ನಂತರ ಸದರಿ ಗುತ್ತಿಗೆದಾರರು ಸಲ್ಲಿಸಿದ್ದ ಆರ್ಥಿಕ ಬಿಡ್‌ಗಳನ್ನು ತೆರೆಯಲಾಗಿದ್ದು, ಗುತ್ತಿಗೆದಾರರು ನಮೂದಿಸಿರುವ ದರಗಳ ವಿವರಗಳು ಈ ಕೆಳಕಂಡಂತಿರುತ್ತವೆ.

| | | |
|---|---|---|
| 1. | ಮಂಜೂರಾದ ಅಂದಾಜಿನ ದರಗಳಂತೆ ಟೆಂಡರಿಗೆ ಇಡಲಾದ ಮೊತ್ತ (2011-12ನೇ ಸಾಲಿನ ದರಪಟ್ಟಿಯಂತೆ) | ರೂ. 3,86,60,736.52 |
| 2. | ಬಿಡ್ಡುದಾರರಾದ ಶ್ರೀ. ಐ.ಚನ್ನಕೃಷ್ಣ ರೆಡ್ಡಿರವರು ನಮೂದಿಸಿರುವ ಟೆಂಡರ್ ಮೊತ್ತ | ರೂ. 4,31,02,256.74 |
| 3. | 2011-12ನೇ ಸಾಲಿನ ದರಪಟ್ಟಿಯ ದರಗಳನ್ನು ಪರಿಗಣಿಸಿ ಪರಿಷ್ಕರಿಸಿದಾಗ ಟೆಂಡರಿಗೆ ಇಟ್ಟ ಮೊತ್ತದ ಮೇಲಿನ ಶೇಕಡವಾರು ಹೆಚ್ಚಳ / ಕಡಿಮೆ | ಶೇಕಡ 11.49% ಹೆಚ್ಚುವರಿ |
| 4. | 2012-13ನೇ ಸಾಲಿನ ದರಪಟ್ಟಿಯ ದರಗಳಿಗೆ ಹೋಲಿಸಿದಾಗ ಶೇಕಡವಾರು ಹೆಚ್ಚಳ / ಕಡಿಮೆ | ಶೇಕಡ 2.89% ಹೆಚ್ಚುವರಿ |

ಶ್ರೀ. ಐ.ಚನ್ನಕೃಷ್ಣ ರೆಡ್ಡಿರವರು ನಮೂದಿಸಿರುವ ಮೊತ್ತವು ಮಂಜೂರಾದ ಅಂದಾಜಿನಂತೆ ಟೆಂಡರಿಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇಕಡ 11.49 ರಷ್ಟು ಹೆಚ್ಚುವರಿ ಇದ್ದು, ಈ ವರ್ಷದ ಅಂದರೆ 2012-13ನೇ ಸಾಲಿನ ಎಸ್.ಆರ್.ದರಗಳಿಗೆ ಹೋಲಿಸಿದಾಗ ಶೇಕಡ 2.89ರಷ್ಟು ಹೆಚ್ಚುವರಿಯಾಗಿರುತ್ತದೆ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಶ್ರೀ.ಐ.ಚನ್ನಕೃಷ್ಣ ರೆಡ್ಡಿರವರು ನಮೂದಿಸಿರುವ ಟೆಂಡರ್ ಮೊತ್ತ ರೂ. 4,31,02,256.74 ಗಳಿಗೆ (ಮಂಜೂರಾದ ಅಂದಾಜು ಪಟ್ಟಿಯಂತೆ ಟೆಂಡರಿಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇಕಡ 11.49ರಷ್ಟು ಹೆಚ್ಚುವರಿ ಹಾಗೂ 2012-13ನೇ ಸಾಲಿನ ಎಸ್.ಆರ್.ದರಗಳಿಗೆ ಹೋಲಿಸಿದಾಗ ಶೇಕಡ 2.89ರಷ್ಟು ಹೆಚ್ಚುವರಿ) ಅನುಮೋದನೆ ಕೋರಿ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ

.....................2

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ: 12-03-2013ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ:24-10-2013ರ ನಿರ್ಣಯ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ:24-10-2013ರ ನಿರ್ಣಯವನ್ನು ಒಪ್ಪುವುದು".

ಶ್ರೀ. ಬಿ.ಆರ್.ನಂಜುಂಡಪ್ಪ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ:
24-10-2013ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

(ಬಿ.ಎಸ್.ಸತ್ಯನಾರಾಯಣ)
ಮಹಾಪೌರರು

# ದಿನಾಂಕ:28–10–2013 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯಲ್ಲಿ ತೀರ್ಮಾನವಾದ ಅಧಿಕ ವಿಷಯ

## ವಿಷಯದ ಸಂಖ್ಯೆ : 07 (93)/2013–14

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಾರ್ಡ್ ಸಂಖ್ಯೆ:198, ಹೆಮ್ಮಿಗೇಪುರ ವಿಭಾಗದ ವ್ಯಾಪ್ತಿಯಲ್ಲಿ ಬರುವ ಕನಕಪುರ ಮುಖ್ಯ ರಸ್ತೆಯಿಂದ ಕೆಂಗೇರಿ ಮೈಸೂರು ರಸ್ತೆಗೆ ಸೇರುವ 100 ಅಡಿ ರಸ್ತೆಯ ಚಿಕ್ಕೇಗೌಡನಪಾಳ್ಯದ ನಾಲ್ಕು ರಸ್ತೆ ಸೇರುವ ವೃತ್ತಕ್ಕೆ "ಶ್ರೀ ಕನಕದಾಸ ವೃತ್ತ" ಎಂದು ನಾಮಕರಣ ಮಾಡುವಲ್ಲಿ ದಿನಾಂಕ:29–12–2012 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ವಿಷಯದ ಸಂಖ್ಯೆ:334/2012–13 ರಲ್ಲಿ "ಶ್ರೀ ಕನಕದಾಸ ವೃತ್ತ" ಎಂದು ನಾಮಕರಣ ಮಾಡುವುದೆಂದು ತೀರ್ಮಾನಿಸಲಾಗಿದೆ.

ಸದರಿ ವಿಷಯದ ಸಂಬಂಧವಾಗಿ ಸಾರ್ವಜನಿಕರು ಆಕ್ಷೇಪಣೆಗಳು / ಸಲಹೆಗಳು ಇದ್ದಲ್ಲಿ ಸಲ್ಲಿಸಲು ತಿಳಿಸಿ, ಪತ್ರಿಕಾ ಪ್ರಕಟಣೆಯನ್ನು ದಿನಾಂಕ:04–02–2013 ರಲ್ಲಿ ಹೊರಡಿಸಲಾಗಿರುತ್ತದೆ. ಸದರಿ ಪತ್ರಿಕಾ ಪ್ರಕಟಣೆಯನ್ನು ಹೊರಡಿಸಲಾದ 30 ದಿನಗಳ ಕಾಲಾವಕಾಶದಲ್ಲಿ, ಆಕ್ಷೇಪಣೆ ಸಲ್ಲಿಸಲು ಅವಕಾಶಗಳು ಇದ್ದು, ಈ ಅವಧಿಯಲ್ಲಿ ಯಾವುದೇ ಆಕ್ಷೇಪಣೆಗಳನ್ನು ಸ್ವೀಕರಿಸಲಾಗಿರುವುದಿಲ್ಲ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಾರ್ಡ್ ಸಂಖ್ಯೆ:198, ಹೆಮ್ಮಿಗೇಪುರ ವಿಭಾಗದ ವ್ಯಾಪ್ತಿಯಲ್ಲಿ ಬರುವ ಕನಕಪುರ ಮುಖ್ಯ ರಸ್ತೆಯಿಂದ ಕೆಂಗೇರಿ ಮೈಸೂರು ರಸ್ತೆಗೆ ಸೇರುವ 100 ಅಡಿ ರಸ್ತೆಯ ಚಿಕ್ಕೇಗೌಡನಪಾಳ್ಯದ ನಾಲ್ಕು ರಸ್ತೆ ಸೇರುವ ವೃತ್ತಕ್ಕೆ "ಶ್ರೀ ಕನಕದಾಸ ವೃತ್ತ" ಎಂದು ನಾಮಕರಣ ಮಾಡುವ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ: 16–10–2013ರ ಟಿಪ್ಪಣಿ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ವಾರ್ಡ್ ಸಂಖ್ಯೆ:198, ಹೆಮ್ಮಿಗೇಪುರ ವಿಭಾಗದ ವ್ಯಾಪ್ತಿಯಲ್ಲಿ ಬರುವ ಕನಕಪುರ ಮುಖ್ಯ ರಸ್ತೆಯಿಂದ ಕೆಂಗೇರಿ ಮೈಸೂರು ರಸ್ತೆಗೆ ಸೇರುವ 100 ಅಡಿ ರಸ್ತೆಯ ಚಿಕ್ಕೇಗೌಡನಪಾಳ್ಯದ ನಾಲ್ಕು ರಸ್ತೆ ಸೇರುವ ವೃತ್ತಕ್ಕೆ "ಶ್ರೀ ಕನಕದಾಸ ವೃತ್ತ" ಎಂದು ನಾಮಕರಣ ಮಾಡುವುದು".

ಶ್ರೀ. ಬಿ.ಆರ್.ನಂಜುಂಡಪ್ಪ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ</u>: ವಾರ್ಡ್ ಸಂಖ್ಯೆ:198, ಹೆಮ್ಮಿಗೇಪುರ ವಿಭಾಗದ ವ್ಯಾಪ್ತಿಯಲ್ಲಿ ಬರುವ ಕನಕಪುರ ಮುಖ್ಯ ರಸ್ತೆಯಿಂದ ಕೆಂಗೇರಿ ಮೈಸೂರು ರಸ್ತೆಗೆ ಸೇರುವ 100 ಅಡಿ ರಸ್ತೆಯ ಚಿಕ್ಕೇಗೌಡನಪಾಳ್ಯದ ನಾಲ್ಕು ರಸ್ತೆ ಸೇರುವ ವೃತ್ತಕ್ಕೆ "ಶ್ರೀ ಕನಕದಾಸ ವೃತ್ತ" ಎಂದು ನಾಮಕರಣ ಮಾಡುವುದೆಂದು ಸಭೆಯು ತೀರ್ಮಾನಿಸಲಾಯಿತು".

(ಬಿ.ಎಸ್.ಸತ್ಯನಾರಾಯಣ)
ಮಹಾಪೌರರು

# ದಿನಾಂಕ:28-10-2013 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯ

## ವಿಷಯದ ಸಂಖ್ಯೆ : 100 / 2013-14

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

ಕೆಂಪಾಪುರ ಅಗ್ರಹಾರ ಗ್ರಾಮ ಸರ್ವೆ ನಂ.228, 229, ಎಲ್.ಸಿ.-5ಎ ನಲ್ಲಿ ನಿರ್ಮಾಣ ಹಂತದಲ್ಲಿರುವ ರೈಲ್ವೆ ಕೆಳಸೇತುವೆಯನ್ನು ಪರಿವೀಕ್ಷಿಸಲಾಯಿತು. ಸದರಿ ನಿರ್ಮಾಣವಾಗುತ್ತಿರುವ ರೈಲ್ವೆ ಕೆಳಸೇತುವೆಯು ಬಾಪೂಜಿನಗರ, ಮೈಸೂರು ರಸ್ತೆ, ಆರ್.ಪಿ.ಸಿ. ಲೇಔಟ್ / ವಿಜಯನಗರವನ್ನು ಸಂಪರ್ಕಿಸುವ ಪ್ರಮುಖ ರೈಲ್ವೆ ಕೆಳಸೇತುವೆಯಾಗಿರುತ್ತದೆ. ಈ ಕೆಳಸೇತುವೆಯ ಎರಡು ಭಾಗದ ರ್‍ಯಾಂಪ್ ನಿರ್ಮಾಣವು ಭೂಸ್ವಾಧೀನ ಪ್ರಕ್ರಿಯೆ ವಿಳಂಬದಿಂದ ಕಾಮಗಾರಿಯು ಸಂಪೂರ್ಣ ನಿಂತು ಹೋಗಿದ್ದು, ಸಾರ್ವಜನಿಕರಿಗೆ ತೀವ್ರ ತೊಂದರೆ ಉಂಟಾಗಿರುವುದು ಕಂಡುಬಂದಿರುತ್ತದೆ. ಕಾಮಗಾರಿ ವಿಳಂಬದಿಂದ ಸಾರ್ವಜನಿಕರು ತೀವ್ರ ತೊಂದರೆ ಅನುಭವಿಸುವಂತಾಗಿದೆ. ಈ ಕೆಳಸೇತುವೆಯ ರ್‍ಯಾಂಪ್ ಭಾಗದಲ್ಲಿ ಬರುವ ಸ್ವತ್ತಿನಲ್ಲಿ ಸುಮಾರು 20 ವರ್ಷಗಳಿಂದ ಅನಧಿಕೃತವಾಗಿ ಶೆಡ್‌ಗಳನ್ನು ಹಾಕಿಕೊಂಡು ವಾಸಿಸುತ್ತಿದ್ದು, ಪಾಲಿಕೆ ವತಿಯಿಂದ ಈ ನಿವಾಸಿಗಳಿಗೆ ಗುರುತಿನ ಚೀಟಿ ನೀಡಲಾಗಿರುತ್ತದೆ. ಈ ಶೆಡ್ಡುಗಳು ಅನಧಿಕೃತವಾಗಿ ರಸ್ತೆ ಬದಿ ಇರುವ ಖಾಲಿ ಜಾಗದಲ್ಲಿ ಹಾಕಿಕೊಂಡಿದ್ದು, ರ್‍ಯಾಂಪ್ ಭಾಗದಲ್ಲಿ ಬರುವ ಅನಧಿಕೃತ ಶೆಡ್ಡುಗಳ ನಿವಾಸಿಗಳು (ರ್‍ಯಾಂಪ್ ನಿರ್ಮಾಣಕ್ಕೆ ಬೇಕಾಗಿರುವ ಅಗತ್ಯ ಜಾಗದಲ್ಲಿ ಬರುವ) ಯಾವುದೇ ನಿವೇಶನ ಮಾಲೀಕತ್ವದ ದಾಖಲಾತಿಗಳನ್ನು ಹೊಂದಿರುವುದಿಲ್ಲ. ಈ ರೀತಿ ಯಾವುದೇ ದಾಖಲಾತಿಗಳನ್ನು ಹೊಂದಿರದೇ ಇರುವ ಹಿನ್ನಲೆಯಲ್ಲಿ, ಸದರಿ ನಿವಾಸಿಗಳಿಗೆ ಪಾಲಿಕೆ ವತಿಯಿಂದ ಯಾವುದೇ ರೀತಿಯ ಟಿ.ಡಿ.ಆರ್. ಆಗಲೀ ಭೂ ಪರಿಹಾರ ನೀಡಲು ಕಾನೂನಿನಲ್ಲಿ ಅವಕಾಶವಿರುವುದಿಲ್ಲ.

ಈ ಹಿನ್ನಲೆಯಲ್ಲಿ, ರೈಲ್ವೆ ಕೆಳಸೇತುವೆಯ ಕಾಮಗಾರಿಯು ಪೂರ್ಣವಾಗಿ ಸ್ಥಗಿತಗೊಂಡಿದ್ದು, ರ್‍ಯಾಂಪ್ ಭಾಗದಲ್ಲಿ ಬರುವ 13 ಅನಧೀಕೃತ ಶೆಡ್ಡುಗಳನ್ನು ತೆರವುಗೊಳಿಸಬೇಕಾಗಿದೆ. ಅನಧೀಕೃತವಾಗಿ ವಾಸಿಸುತ್ತಿರುವ ಸದರಿ ನಿವಾಸಿಗಳು ಆರ್ಥಿಕವಾಗಿ ಹಿಂದುಳಿದವಾಗಿರುವುದರಿಂದ, ಅನಧೀಕೃತ ಶೆಡ್ಡುಗಳನ್ನು ತೆರವುಗೊಳಿಸುವ ಸಂದರ್ಭದಲ್ಲಿ ಪರ್ಯಾಯ ವ್ಯವಸ್ಥೆಯನ್ನು ಮಾಡಿಕೊಳ್ಳಲು, ಮಾನವೀಯತೆಯ ದೃಷ್ಟಿಯಿಂದ ಪ್ರತಿ ಶೆಡ್ಡಿನ ವಾಸಿಗಳಿಗೆ ತಗಲುವ ನೈಜ್ಯ ಮೊತ್ತ ಅಥವಾ ಗರಿಷ್ಠ ರೂ.2.75 ಲಕ್ಷಗಳನ್ನು (ರೂ. ಎರಡು ಲಕ್ಷದ ಎಪ್ಪತ್ತೈದು ಸಾವಿರ ಮಾತ್ರ) ಪರಿಹಾರವಾಗಿ ನೀಡಿ ತಕ್ಷಣವೇ ಅನಧೀಕೃತ ಶೆಡ್ಡುಗಳನ್ನು ಪಾಲಿಕೆ ವತಿಯಿಂದ ತೆರವುಗೊಳಿಸಿ ಬಾಕಿ ಇರುವ ರ್‍ಯಾಂಪ್ ಕಾಮಗಾರಿಯನ್ನು ಪೂರ್ಣಗೊಳಿಸಲು ಆಯುಕ್ತರು ಕ್ರಮವಹಿಸುವುದು.

ಶ್ರೀ. ಬಿ.ಆರ್.ನಂಜುಂಡಪ್ಪ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

..........................................2

**ನಿರ್ಣಯ:** "ಕೆಂಪಾಪುರ ಅಗ್ರಹಾರ ಗ್ರಾಮ ಸರ್ವೆ ನಂ.228, 229, ಎಲ್.ಸಿ.-5ಎ ನಲ್ಲಿ ನಿರ್ಮಾಣ ಹಂತದಲ್ಲಿರುವ ರೈಲ್ವೆ ಕೆಳಸೇತುವೆಯನ್ನು ಪರಿವೀಕ್ಷಿಸಲಾಯಿತು. ಸದರಿ ನಿರ್ಮಾಣವಾಗುತ್ತಿರುವ ರೈಲ್ವೆ ಕೆಳಸೇತುವೆಯು ಬಾಪೂಜಿನಗರ, ಮೈಸೂರು ರಸ್ತೆ, ಆರ್.ಪಿ.ಸಿ. ಲೇಔಟ್ / ವಿಜಯನಗರವನ್ನು ಸಂಪರ್ಕಿಸುವ ಪ್ರಮುಖ ರೈಲ್ವೆ ಕೆಳಸೇತುವೆಯಾಗಿರುತ್ತದೆ. ಈ ಕೆಳಸೇತುವೆಯ ಎರಡು ಭಾಗದ ರ್‍ಯಾಂಪ್ ನಿರ್ಮಾಣವು ಭೂಸ್ವಾಧೀನ ಪ್ರಕ್ರಿಯೆ ವಿಳಂಬದಿಂದ ಕಾಮಗಾರಿಯು ಸಂಪೂರ್ಣ ನಿಂತು ಹೋಗಿದ್ದು, ಸಾರ್ವಜನಿಕರಿಗೆ ತೀವ್ರ ತೊಂದರೆ ಉಂಟಾಗಿರುವುದು ಕಂಡುಬಂದಿರುತ್ತದೆ. ಕಾಮಗಾರಿ ವಿಳಂಬದಿಂದ ಸಾರ್ವಜನಿಕರು ತೀವ್ರ ತೊಂದರೆ ಅನುಭವಿಸುವಂತಾಗಿದೆ. ಈ ಕೆಳಸೇತುವೆಯ ರ್‍ಯಾಂಪ್ ಭಾಗದಲ್ಲಿ ಬರುವ ಸ್ವತ್ತಿನಲ್ಲಿ ಸುಮಾರು 20 ವರ್ಷಗಳಿಂದ ಅನಧಿಕೃತವಾಗಿ ಶೆಡ್‌ಗಳನ್ನು ಹಾಕಿಕೊಂಡು ವಾಸಿಸುತ್ತಿದ್ದು, ಪಾಲಿಕೆ ವತಿಯಿಂದ ಈ ನಿವಾಸಿಗಳಿಗೆ ಗುರುತಿನ ಚೀಟಿ ನೀಡಲಾಗಿರುತ್ತದೆ. ಈ ಶೆಡ್ಡುಗಳು ಅನಧಿಕೃತವಾಗಿ ರಸ್ತೆ ಬದಿ ಇರುವ ಖಾಲಿ ಜಾಗದಲ್ಲಿ ಹಾಕಿಕೊಂಡಿದ್ದು, ರ್‍ಯಾಂಪ್ ಭಾಗದಲ್ಲಿ ಬರುವ ಅನಧಿಕೃತ ಶೆಡ್ಡುಗಳ ನಿವಾಸಿಗಳು (ರ್‍ಯಾಂಪ್ ನಿರ್ಮಾಣಕ್ಕೆ ಬೇಕಾಗಿರುವ ಅಗತ್ಯ ಜಾಗದಲ್ಲಿ ಬರುವ) ಯಾವುದೇ ನಿವೇಶನ ಮಾಲೀಕತ್ವದ ದಾಖಲಾತಿಗಳನ್ನು ಹೊಂದಿರುವುದಿಲ್ಲ. ಈ ರೀತಿ ಯಾವುದೇ ದಾಖಲಾತಿಗಳನ್ನು ಹೊಂದಿರದೇ ಇರುವ ಹಿನ್ನಲೆಯಲ್ಲಿ, ಸದರಿ ನಿವಾಸಿಗಳಿಗೆ ಪಾಲಿಕೆ ವತಿಯಿಂದ ಯಾವುದೇ ರೀತಿಯ ಟಿ.ಡಿ.ಆರ್. ಆಗಲೀ ಭೂ ಪರಿಹಾರ ನೀಡಲು ಕಾನೂನಿನಲ್ಲಿ ಅವಕಾಶವಿರುವುದಿಲ್ಲ.

ಈ ಹಿನ್ನಲೆಯಲ್ಲಿ, ರೈಲ್ವೆ ಕೆಳಸೇತುವೆಯ ಕಾಮಗಾರಿಯು ಪೂರ್ಣವಾಗಿ ಸ್ಥಗಿತಗೊಂಡಿದ್ದು, ರ್‍ಯಾಂಪ್ ಭಾಗದಲ್ಲಿ ಬರುವ 13 ಅನಧೀಕೃತ ಶೆಡ್ಡುಗಳನ್ನು ತೆರವುಗೊಳಿಸಬೇಕಾಗಿದೆ. ಅನಧೀಕೃತವಾಗಿ ವಾಸಿಸುತ್ತಿರುವ ಸದರಿ ನಿವಾಸಿಗಳು ಆರ್ಥಿಕವಾಗಿ ಹಿಂದುಳಿದವಾಗಿರುವುದರಿಂದ, ಅನಧೀಕೃತ ಶೆಡ್ಡುಗಳನ್ನು ತೆರವುಗೊಳಿಸುವ ಸಂದರ್ಭದಲ್ಲಿ ಪರ್ಯಾಯ ವ್ಯವಸ್ಥೆಯನ್ನು ಮಾಡಿಕೊಳ್ಳಲು, ಮಾನವೀಯತೆಯ ದೃಷ್ಟಿಯಿಂದ ಪ್ರತಿ ಶೆಡ್ಡಿನ ವಾಸಿಗಳಿಗೆ ತಗಲುವ ನೈಜ್ಯ ಮೊತ್ತ ಅಥವಾ ಗರಿಷ್ಠ ರೂ.2.75 ಲಕ್ಷಗಳನ್ನು (ರೂ. ಎರಡು ಲಕ್ಷದ ಎಪ್ಪತ್ತೈದು ಸಾವಿರ ಮಾತ್ರ) ಪರಿಹಾರವಾಗಿ ನೀಡಿ ತಕ್ಷಣವೇ ಅನಧೀಕೃತ ಶೆಡ್ಡುಗಳನ್ನು ಪಾಲಿಕೆ ವತಿಯಿಂದ ತೆರವುಗೊಳಿಸಿ ಬಾಕಿ ಇರುವ ರ್‍ಯಾಂಪ್ ಕಾಮಗಾರಿಯನ್ನು ಪೂರ್ಣಗೊಳಿಸಲು ಆಯುಕ್ತರು ಕ್ರಮವಹಿಸುವುದೆಂದು ಸಭೆಯು ತೀರ್ಮಾನಿಸಲಾಯಿತು".

(ಬಿ..ಎಸ್. ಸತ್ಯನಾರಾಯಣ)
ಮಹಾಪೌರರು

## ದಿನಾಂಕ:28-10-2013 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯ

## ವಿಷಯದ ಸಂಖ್ಯೆ : 101 / 2013-14

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

ತುಮಕೂರು ರಸ್ತೆ, 8ನೇ ಮೈಲಿ ವೃತ್ತದಲ್ಲಿ ಡಾ॥ ಶ್ರೀ. ಶ್ರೀ. ಶ್ರೀ. ಬಾಲಗಂಗಾಧರನಾಥ ಸ್ವಾಮೀಜಿರ ಪುತ್ಥಳಿಯನ್ನು ಸ್ಥಾಪಿಸಲು ಮತ್ತು ಸದರಿ ವೃತ್ತಕ್ಕೆ ಡಾ॥ ಶ್ರೀ. ಶ್ರೀ. ಶ್ರೀ. ಬಾಲಗಂಗಾಧರನಾಥ ಸ್ವಾಮೀಜಿ ವೃತ್ತ ಎಂದು ನಾಮಕರಣ ಮಾಡಲು ಆಯುಕ್ತರವರು ಕ್ರಮಕೈಗೊಳ್ಳುವುದು.

ಶ್ರೀ. ಬಿ.ಆರ್.ನಂಜುಂಡಪ್ಪ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ತುಮಕೂರು ರಸ್ತೆ, 8ನೇ ಮೈಲಿ ವೃತ್ತದಲ್ಲಿ ಡಾ॥ ಶ್ರೀ. ಶ್ರೀ. ಶ್ರೀ. ಬಾಲಗಂಗಾಧರನಾಥ ಸ್ವಾಮೀಜಿರ ಪುತ್ಥಳಿಯನ್ನು ಸ್ಥಾಪಿಸಲು ಮತ್ತು ಸದರಿ ವೃತ್ತಕ್ಕೆ ಡಾ॥ ಶ್ರೀ. ಶ್ರೀ. ಶ್ರೀ. ಬಾಲಗಂಗಾಧರನಾಥ ಸ್ವಾಮೀಜಿ ವೃತ್ತ ಎಂದು ನಾಮಕರಣ ಮಾಡಲು ಆಯುಕ್ತರವರು ಕ್ರಮಕೈಗೊಳ್ಳುವುದೆಂದು ಸಭೆಯು ತೀರ್ಮಾನಿಸಲಾಯಿತು".

(ಬಿ..ಎಸ್.ಸತ್ಯನಾರಾಯಣ)
ಮಹಾಪೌರರು

# ದಿನಾಂಕ:28-10-2013 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯ

## ವಿಷಯದ ಸಂಖ್ಯೆ : 102 / 2013-14

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

ವಾರ್ಡ್-105ರ ವ್ಯಾಪ್ತಿಯ 5ನೇ ಕ್ರಾಸ್, 4ನೇ ಮೈನ್, 'ಎ' ಬ್ಲಾಕ್, ಅಗ್ರಹಾರ ದಾಸರಹಳ್ಳಿ, ಬೆಂಗಳೂರು ಈ ಸ್ವತ್ತಿನಲ್ಲಿ ನಗರ ಪಾಲಿಕೆಯ ಟೈಲರಿಂಗ್ ಸೆಂಟರ್, ಅಂಗನವಾಡಿ ಕೇಂದ್ರ ಮತ್ತು ಈ ಜಾಗಕ್ಕೆ ಹೊಂದಿಕೊಂಡಂತೆ ಇರುವ ಪಾಲಿಕೆ ಜಾಗದಲ್ಲಿ ಸುಮಾರು 50x28 ಅಡಿಗಳ ಜಾಗದಲ್ಲಿ ಶ್ರೀ. ಶನೇಶ್ವರ ಹಾಗೂ ಶ್ರೀ. ಮುನೇಶ್ವರ ದೇವಸ್ಥಾನಗಳಿದ್ದು, ಸದರಿ ಜಾಗವನ್ನು ದೇವಸ್ಥಾನದ ಉಸ್ತುವಾರಿ ನಡೆಸುತ್ತಿರುವ ಶ್ರೀ. ಮುನೇಶ್ವರ ದೇವಾಲಯ ಟ್ರಸ್ಟ್ (ರಿ) ರವರಿಗೆ ಗುತ್ತಿಗೆ ಆಧಾರದ ಮೇಲೆ ನೀಡಲು ಸೂಕ್ತ ಪ್ರಸ್ತಾವನೆಯನ್ನು ಸಭೆಗೆ ಮಂಡಿಸಲು ಆಯುಕ್ತರವರು ಕ್ರಮ ಕೈಗೊಳ್ಳವುದು.

ಶ್ರೀ. ಬಿ.ಆರ್.ನಂಜುಂಡಪ್ಪ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ವಾರ್ಡ್-105ರ ವ್ಯಾಪ್ತಿಯ 5ನೇ ಕ್ರಾಸ್, 4ನೇ ಮೈನ್, 'ಎ' ಬ್ಲಾಕ್, ಅಗ್ರಹಾರ ದಾಸರಹಳ್ಳಿ, ಬೆಂಗಳೂರು ಈ ಸ್ವತ್ತಿನಲ್ಲಿ ನಗರ ಪಾಲಿಕೆಯ ಟೈಲರಿಂಗ್ ಸೆಂಟರ್, ಅಂಗನವಾಡಿ ಕೇಂದ್ರ ಮತ್ತು ಈ ಜಾಗಕ್ಕೆ ಹೊಂದಿಕೊಂಡಂತೆ ಇರುವ ಪಾಲಿಕೆ ಜಾಗದಲ್ಲಿ ಸುಮಾರು 50x28 ಅಡಿಗಳ ಜಾಗದಲ್ಲಿ ಶ್ರೀ. ಶನೇಶ್ವರ ಹಾಗೂ ಶ್ರೀ. ಮುನೇಶ್ವರ ದೇವಸ್ಥಾನಗಳಿದ್ದು, ಸದರಿ ಜಾಗವನ್ನು ದೇವಸ್ಥಾನದ ಉಸ್ತುವಾರಿ ನಡೆಸುತ್ತಿರುವ ಶ್ರೀ. ಮುನೇಶ್ವರ ದೇವಾಲಯ ಟ್ರಸ್ಟ್ (ರಿ) ರವರಿಗೆ ಗುತ್ತಿಗೆ ಆಧಾರದ ಮೇಲೆ ನೀಡಲು ಸೂಕ್ತ ಪ್ರಸ್ತಾವನೆಯನ್ನು ಸಭೆಗೆ ಮಂಡಿಸಲು ಆಯುಕ್ತರವರು ಕ್ರಮ ಕೈಗೊಳ್ಳವುದೆಂದು ಸಭೆಯು ತೀರ್ಮಾನಿಸಲಾಯಿತು".

(ಬಿ..ಎಸ್.ಸತ್ಯನಾರಾಯಣ)
ಮಹಾಪೌರರು

# ದಿನಾಂಕ:28-10-2013 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯ

## ವಿಷಯದ ಸಂಖ್ಯೆ : 103 / 2013-14

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

ದಿನಾಂಕ:28-09-2013 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ವಿಷಯದ ಸಂಖ್ಯೆ:14(51)/2013-14ರಲ್ಲಿ ದಿನಾಂಕ:26-09-2013ರ ಆಯುಕ್ತರ ಟಿಪ್ಪಣಿಯನ್ನು ಒಪ್ಪುತ್ತಾ ಪ್ರಸ್ತಾಪಿತ ಕಾಮಗಾರಿಗಳನ್ನು ಟಂಡರ್ ಮುಖಾಮತರ ಹಾಗೂ ಅಗತ್ಯತೆಗೆ ತಕ್ಕಂತೆ ಕೆ.ಆರ್.ಐ.ಡಿ.ಎಲ್. ಸಂಸ್ಥೆಯ ಮುಖಾಂತರ ನಿರ್ವಹಿಸಲು ಅಗತ್ಯ ಕ್ರಮವಹಿಸುವುದೆಂದು ಈ ಹಿಂದೆ ಪಾಲಿಕೆ ಸಭೆಯು ನಿರ್ಣಯಿಸಿರುತ್ತದೆ.

ಆದರೆ, ದಿನಾಂಕ:12-10-2013 ರಂದು ಪಾಲಿಕೆ ವ್ಯಾಪ್ತಿಯ ವಿವಿಧ ಯೋಜನೆಗಳ ಶಂಕುಸ್ಥಾಪನೆ ನೆರವೇರಿಸುವ ಸಂದರ್ಭದಲ್ಲಿ ಸನ್ಮಾನ್ಯ ಮುಖ್ಯ ಮಂತ್ರಿಗಳು ಪಾಲಿಕೆ ಸಭೆಯಲ್ಲಿ ತೀರ್ಮಾನವಾದ ಆರ್ಟೀರಿಯಲ್/ಸಬ್-ಆರ್ಟೀರಿಯಲ್ ರಸ್ತೆಗಳ ಡಾಂಬರೀಕರಣ/ದುರಸ್ತಿಗಾಗಿ ಅನುಮೋದನೆ ನೀಡಿರುವ ಎಲ್ಲಾ ಕಾಮಗಾರಿಗಳ ಒಟ್ಟು ಮೊತ್ತ ರೂ.560.00 ಕೋಟಿಗಳ ಕಾಮಗಾರಿಗಳನ್ನು ಟೆಂಡರ್ ಕರೆದು ನಿರ್ವಹಿಸುವುದು ವಿಳಂಬವಾಗುವ ಪ್ರಯುಕ್ತ ಬೆಂಗಳೂರು ನಗರದ ರಸ್ತೆಗಳನ್ನು ಮುಂದಿನ ಮಳೆಗಾಲ ಪ್ರಾರಂಭವಾಗುವುದರೊಳಗೆ ದುರಸ್ಥಿಗೊಳಿಸಲು ಕೆ.ಆರ್.ಐ.ಡಿ.ಎಲ್ ಸಂಸ್ಥೆ ಮುಖಾಂತರ ಕೈಗೆತ್ತಿಕೊಳ್ಳುವಂತೆ ಸೂಚಿಸಿರುತ್ತಾರೆ. ಈ ಮೇರೆಗೆ ಪಾಲಿಕೆ ಸಭೆಯು ಕೆಳಕಂಡಂತೆ ನಿರ್ಣಯಿಸಿರುತ್ತದೆ.

ದಿನಾಂಕ:28-09-2013 ರಂದು ವಿಷಯದ ಸಂಖ್ಯೆ:14(51)/2013-14 ರಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯವನ್ನು ಮಾರ್ಪಡಿಸಿ, ಕಾಮಗಾರಿಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡುತ್ತಾ, ಎಲ್ಲಾ ಕಾಮಗಾರಿಗಳನ್ನು ಕೆ.ಆರ್.ಐ.ಡಿ.ಎಲ್ ಸಂಸ್ಥೆ ಮೂಲಕ ನಿರ್ವಹಿಸಲು ಆಯುಕ್ತರವರು ಕ್ರಮವಹಿಸುವುದು.

ಶ್ರೀ. ಬಿ.ಆರ್.ನಂಜುಂಡಪ್ಪ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

**ನಿರ್ಣಯ:** "ದಿನಾಂಕ:28-09-2013 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ವಿಷಯದ ಸಂಖ್ಯೆ:14(51)/2013-14ರಲ್ಲಿ ದಿನಾಂಕ:26-09-2013ರ ಆಯುಕ್ತರ ಟಿಪ್ಪಣಿಯನ್ನು ಒಪ್ಪುತ್ತಾ ಪ್ರಸ್ತಾಪಿತ ಕಾಮಗಾರಿಗಳನ್ನು ಟಂಡರ್ ಮುಖಾಮತರ ಹಾಗೂ ಅಗತ್ಯತೆಗೆ ತಕ್ಕಂತೆ ಕೆ.ಆರ್.ಐ.ಡಿ.ಎಲ್. ಸಂಸ್ಥೆಯ ಮುಖಾಂತರ ನಿರ್ವಹಿಸಲು ಅಗತ್ಯ ಕ್ರಮವಹಿಸುವುದೆಂದು ಈ ಹಿಂದೆ ಪಾಲಿಕೆ ಸಭೆಯು ನಿರ್ಣಯಿಸಿರುತ್ತದೆ.

ಆದರೆ, ದಿನಾಂಕ:12-10-2013 ರಂದು ಪಾಲಿಕೆ ವ್ಯಾಪ್ತಿಯ ವಿವಿಧ ಯೋಜನೆಗಳ ಶಂಕುಸ್ಥಾಪನೆ ನೆರವೇರಿಸುವ ಸಂದರ್ಭದಲ್ಲಿ ಸನ್ಮಾನ್ಯ ಮುಖ್ಯ ಮಂತ್ರಿಗಳು ಪಾಲಿಕೆ ಸಭೆಯಲ್ಲಿ ತೀರ್ಮಾನವಾದ ಆರ್ಟೀರಿಯಲ್/ಸಬ್-ಆರ್ಟೀರಿಯಲ್ ರಸ್ತೆಗಳ ಡಾಂಬರೀಕರಣ/ದುರಸ್ತಿಗಾಗಿ ಅನುಮೋದನೆ

ನೀಡಿರುವ ಎಲ್ಲಾ ಕಾಮಗಾರಿಗಳ ಒಟ್ಟು ಮೊತ್ತ ರೂ.560.00 ಕೋಟಿಗಳ ಕಾಮಗಾರಿಗಳನ್ನು ಟೆಂಡರ್ ಕರೆದು ನಿರ್ವಹಿಸುವುದು ವಿಳಂಬವಾಗುವ ಪ್ರಯುಕ್ತ ಬೆಂಗಳೂರು ನಗರದ ರಸ್ತೆಗಳನ್ನು ಮುಂದಿನ ಮಳೆಗಾಲ ಪ್ರಾರಂಭವಾಗುವುದರೊಳಗೆ ದುರಸ್ಥಿಗೊಳಿಸಲು ಕೆ.ಆರ್.ಐ.ಡಿ.ಎಲ್ ಸಂಸ್ಥೆ ಮುಖಾಂತರ ಕೈಗೆತ್ತಿಕೊಳ್ಳುವಂತೆ ಸೂಚಿಸಿರುತ್ತಾರೆ. ಈ ಮೇರೆಗೆ ಪಾಲಿಕೆ ಸಭೆಯು ಕೆಳಕಂಡಂತೆ ನಿರ್ಣಯಿಸಿರುತ್ತದೆ.

ದಿನಾಂಕ:28-09-2013 ರಂದು ವಿಷಯದ ಸಂಖ್ಯೆ:14(51)/2013-14 ರಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯವನ್ನು ಮಾರ್ಪಡಿಸಿ, ಕಾಮಗಾರಿಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡುತ್ತಾ, ಎಲ್ಲಾ ಕಾಮಗಾರಿಗಳನ್ನು ಕೆ.ಆರ್.ಐ.ಡಿ.ಎಲ್ ಸಂಸ್ಥೆ ಮೂಲಕ ನಿರ್ವಹಿಸಲು ಆಯುಕ್ತರವರು ಕ್ರಮವಹಿಸುವುದೆಂದು ಸಭೆಯು ತೀರ್ಮಾನಿಸಲಾಯಿತು".

(ಬಿ..ಎಸ್.ಸತ್ಯನಾರಾಯಣ)
ಮಹಾಪೌರರು

## ದಿನಾಂಕ:28-10-2013 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

**ವಿಷಯದ ಸಂಖ್ಯೆ : 104 / 2013-14**

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಮಹಾತ್ಮಗಾಂಧಿ ರಸ್ತೆಯಲ್ಲಿರುವ ನೇತಾಜಿ ಸುಭಾಷ್ ಚಂದ್ರ ಬೋಸ್ (ಪಿ.ಯು.ಬಿ) ನಲ್ಲಿ ಒಟ್ಟು 112 ಮಳಿಗೆಗಳು ಇದ್ದು, ಇದರಲ್ಲಿ ನೆಲ ಅಂತಸ್ತು ಮತ್ತು 1ನೇ ಅಂತಸ್ತಿನ ಮಳಿಗೆಗಳಲ್ಲಿ ಬ್ಯಾಂಕುಗಳು, ರೆಸ್ಟೋರೆಂಟ್‌ಗಳು, ಚಿತ್ರಮಂದಿರ, ಜವಳಿ, ಕರಕುಶಲ ವಸ್ತುಗಳು ಹಾಗೂ ಇತರೆ ವಹಿವಾಟು ಹೊಂದಿರುತ್ತದೆ. 2ನೇ ಮಹಡಿಯಿಂದ ಪರವಾನಗಿ ನೀಡಲಾಗಿರುತ್ತದೆ. ಈ ಬಹು ಅಂತಸ್ತಿನ ವಾಣಿಜ್ಯ ಅಂತಸ್ತಿನ ವಾಣಿಜ್ಯ ಸಂಕೀರ್ಣದ ನಿರ್ವಹಣೆಗಾಗಿ, ನೀರು, ವಿದ್ಯುತ್, ಸಿಬ್ಬಂದಿ ಹಾಗೂ ಇತರೆ ಕಟ್ಟಡ ದುರಸ್ಥಿಗಳಿಗೆ ಬಹಳಷ್ಟು ಹಣ ಖರ್ಚು ಮಾಡಲಾಗುತ್ತಿದೆ. ಕಟ್ಟಡದ ನೀರು ಮತ್ತು ಒಳಚರಂಡಿ ಪೈಪುಗಳು ಬಹಳ ಹಳೆಯದಾಗಿದ್ದು, ಇಲ್ಲಿನ ಪರವಾನಗಿದಾರರಿಗೆ ಹಾಗೂ ಸಾರ್ವಜನಿಕರಿಗೆ ಬಹಳಷ್ಟು ತೊಂದರೆಯಾಗುತ್ತಿದ್ದು, ಇದನ್ನು ಸರಿಪಡಿಸಲು ಕ್ರಮಕೈಗೊಳ್ಳಲಾಗುತ್ತಿದೆ. ಈ ಕಟ್ಟಡದಲ್ಲಿ ವಾಹನ ನಿಲುಗಡೆಗೆ ಅವಕಾಶ ಕಲ್ಪಿಸಲಾಗಿದ್ದು, ತಳ ಅಂತಸ್ತಿನ ಒಳಚರಂಡಿ ವ್ಯವಸ್ಥೆ ಸರಿಯಾಗಿಲ್ಲದ ಪ್ರಯುಕ್ತ, ದುರಸ್ಥಿ ಕಾರ್ಯಕೈಗೊಳ್ಳಬೇಕಾಗಿರುತ್ತದೆ. ಈ ಎಲ್ಲಾ ಕಾಮಗಾರಿಗಳ ದುರಸ್ಥಿಗೆ ಸುಮಾರು ರೂ.200ಲಕ್ಷ ವೆಚ್ಚವಾಗುವ ನಿರೀಕ್ಷೆ ಇದ್ದು, 5 ವರ್ಷಗಳ ಹಿಂದೆ ಅಗ್ನಿಶಾಮಕ ಸಾಮಗ್ರಿ ಅಳವಡಿಸಲು ಸುಮಾರು ರೂ.190 ಲಕ್ಷ ವೆಚ್ಚವಾಗಿರುತ್ತದೆ. ಇದರ ಜೊತೆಗೆ, ಕಟ್ಟಡದ ಭದ್ರತಾ ವ್ಯವಸ್ಥೆಯನ್ನು ಕಲ್ಪಿಸಿ ವಾರ್ಷಿಕ ಪರವಾನಗಿ ಶುಲ್ಕ (ಬಾಡಿಗೆ) ರೂ.140.16 ಲಕ್ಷವಾಗಿರುತ್ತದೆ. ಈ ಕಟ್ಟಡವನ್ನು ಪ್ರಾರಂಭಿಸಿದಾಗ ಹೆಚ್ಚಿನ ವ್ಯಾಪಾರ ವಹಿವಾಟು ಇರುವುದಿಲ್ಲವೆಂಬ ಅಂಶವನ್ನು ಗಮನದಲ್ಲಿ ಇಟ್ಟುಕೊಂಡು ಬಹಳ ಕಡಿಮೆ ಪರವಾನಗಿ ಶುಲ್ಕವನ್ನು ನಿಗಧಿಪಡಿಸಲಾಗಿದ್ದು, ನಗರದಲ್ಲಿ ಇತ್ತೀಚಿನ ವರ್ಷಗಳಲ್ಲಿ ವ್ಯಾಪಾರ ವಹಿವಾಟುಗಳು ಗಣನೀಯವಾಗಿ ಹೆಚ್ಚಿದ್ದು, ಈ ವಾಣಿಜ್ಯ ಸಂಕೀರ್ಣದಲ್ಲಿಯೂ ಸಹ ವ್ಯಾಪಾರ ವಹಿವಾಟು ಹೆಚ್ಚಾಗಿರುತ್ತದೆ. ಮಹಾತ್ಮಗಾಂಧಿ ರಸ್ತೆಯ, ಇತರೆ ಖಾಸಗಿ ವಾಣಿಜ್ಯ ಸಂಕೀರ್ಣಗಳಲ್ಲಿ ಬಾಡಿಗೆಯು, ನೆಲ ಅಂತಸ್ತು ಮತ್ತು 1ನೇ ಅಂತಸ್ತಿನಲ್ಲಿ ಚದರ ಅಡಿಗೆ ರೂ.40.00 ರಿಂದ 60.00 ಕ್ಕೂ ಹೆಚ್ಚು ಇರುತ್ತದೆ. ಈ ಮೇಲ್ಕಂಡ ಎಲ್ಲಾ ಅಂಶಗಳನ್ನು ಗಣನೆಗೆ ತೆಗೆದುಕೊಂಡು ತುಲನೆ ಮಾಡಿ ಬೇಸಮೆಂಟ್‌ಗೆ ರೂ.20.00 ನೆಲ ಮಹಡಿಯಲ್ಲಿ ಚದರ ಅಡಿಗೆ ರೂ.30.00 ರಂತೆ ನಿಗಧಿಪಡಿಸಿ ಪ್ರತಿ ವರ್ಷ ಶೇಕಡ 15ರಷ್ಟನ್ನು ಹೆಚ್ಚಿಸುವಂತೆ ಷರತ್ತನ್ನು ವಿಧಿಸಿ ಪಾಲಿಕೆಯ ಆಡಳಿತಗಾರರು ದಿನಾಂಕ:11-04-2007 ರಿಂದ ಜಾರಿಗೆ ಬರುವಂತೆ ನಿರ್ಣಯದ ಸಂಖ್ಯೆ:23/2007-08, ದಿನಾಂಕ:02-07-2007ರಲ್ಲಿ ನಿರ್ಣಯಿಸಿರುತ್ತಾರೆ.

ಈ ಮೇಲ್ಕಂಡ ನಿರ್ಣಯದ ರೀತ್ಯಾ ಪಾಲಿಕೆಯ ಸದರಿ ಮಳಿಗೆದಾರರಿಗೆ ನೋಟೀಸ್ ಜಾರಿ ಮಾಡಿದ್ದು, ಈ ಪೈಕಿ 76 ಪರವಾನಗಿದಾರರು ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ:651/2008ರಲ್ಲಿ ದಾವೆ ಹೂಡಿದ್ದರು. ನಂತರ ಅರ್ಜಿದಾರರು ರಿಟ್ ಅರ್ಜಿಯನ್ನು ಹಿಂದಕ್ಕೆ ಪಡೆದಿದ್ದರಿಂದ ನ್ಯಾಯಾಲಯವು ದಿನಾಂಕ:31-05-2008ರಲ್ಲಿ ಸದರಿ 8 ಅರ್ಜಿಯನ್ನು ವಜಾ ಮಾಡಿರುತ್ತದೆ.

ತದನಂತರ, ಮಳಿಗೆದಾರರು ಘನ ಸಿಟಿ ಸಿವಿಲ್ ನ್ಯಾಯಾಲಯದಲ್ಲಿ Misc petition No.318/2008 ರಲ್ಲಿ ವಿವಿಧ ಸಂಖ್ಯೆಗಳಲ್ಲಿ ದಾವೆಗಳನ್ನು ಹೂಡಿರುತ್ತಾರೆ. ಸದರಿ ದಾವೆಗಳು ದಿನಾಂಕ:23-06-2010 ರಂದು ಇತ್ಯರ್ಥಗೊಂಡಿದ್ದು, ಈ ಕೆಳಕಂಡಂತೆ ತೀರ್ಮಾನವಾಗಿರುತ್ತದೆ.

Such as the resolution dated: 02-07-2007 it shall be treated as notice to the Petitioner and the Petitioners to file therir objections before the Corporation within the month from the date of this order.

Thereafter, the Respondents have to pass considered order on Hearing the Petitioner ಎಂದು ಆದೇಶಿಸಲಾಗಿದೆ.

ಪಾಲಿಕೆಯ ಆಡಳಿತಗಾರರ ನಿರ್ಣಯದಂತೆ, ಸದರಿ ಕಟ್ಟಡದ ಮಳಿಗೆಗಳಿಗೆ ಚದರ ಅಡಿ ಆಧಾರದಲ್ಲಿ ಬೇಸ್‌ಮೆಂಟ್‌ಗೆ ರೂ.20-00 ನೆಲಮಹಡಿಯಲ್ಲಿ ಚದರ ಅಡಿಗೆ ರೂ.30.00 ರಂತೆ ನಿಗಧಿಪಡಿಸಿ ಪ್ರತಿ ವರ್ಷ ಶೇಕಡ 15 ರಷ್ಟನ್ನು ಹೆಚ್ಚಿಸುವಂತೆ ತೀರ್ಮಾನಿಸಿದ್ದು, ಈ ದರದ ಕುರಿತು ಮಹಾತ್ಮ ಗಾಂಧಿ ರಸ್ತೆಯಲ್ಲಿ ಖಾಸಗಿ ಸ್ವತ್ತಿನ ಸಂಖ್ಯೆ: 25/2ರ ಕಟ್ಟಡದಲ್ಲಿರುವ ಬಾಡಿಗೆ ದರವನ್ನು ಪರಿಶೀಲಿಸಿದಾಗ 2001 ರಲ್ಲಿಯೇ ಚದರ ಅಡಿಗೆ ಸುಮಾರು 57.70 ಬಾಡಿಗೆ ದರ ನಿಗಧಿಯಾಗಿರುತ್ತದೆ. ಈ ದರವನ್ನು ಪಾಲಿಕೆಯ ಕಟ್ಟಡದ ಬಾಡಿಗೆಗೆ ಹೋಲಿಕೆ ಮಾಡಿದಾಗ ಸಾಕಷ್ಟು ಕಡಿಮೆ ಇರುತ್ತದೆ. ಹೀಗಿದ್ದರೂ ಸಹ ಪಬ್ಲಿಕ್ ಯುಟಿಲಿಟಿ ಶಾಪಿಂಗ್ ಕಾಂಪ್ಲೆಕ್ಸ್ ಟ್ರೇಡರ್ಸ್ ಅಸೋಸಿಯೇಷನ್‌ರವರು ಮನವಿ ಸಲ್ಲಿಸಿ ಹಲವು ಬೇಡಿಕೆಯನ್ನು ಇಟ್ಟಿದ್ದು ಅದರಲ್ಲಿ ಮುಖ್ಯವಾಗಿ ಪರವಾನಗಿ ಶುಲ್ಕವನ್ನು ಒಂದು ಬಾರಿ ಶೇಕಡ 40ರಷ್ಟನ್ನು ಹೆಚ್ಚಿಸಿ ತದನಂತರ ಪ್ರತಿ 5 ವರ್ಷಗಳಿಗೆ ಶೇಕಡ 25 ರಷ್ಟನ್ನು ಹೆಚ್ಚಿಸಬೇಕೆಂದು ಕೋರಿ ಮನವಿ ಸಲ್ಲಿಸಿರುವುದರಿಂದ ಆಯುಕ್ತರವರ ದಿನಾಂಕ:07-10-2011ರ ಟಿಪ್ಪಣಿಯನ್ನು ಪಾಲಿಕೆ ಅಪೀಲು ಸ್ಥಾಯಿ ಸಮಿತಿಗೆ ಮಂಡಿಸಿರುತ್ತಾರೆ. ದಿನಾಂಕ:28-10-2011 ರಂದು ನಡೆದ ಸಭೆಯಲ್ಲಿ ವಿಷಯದ ಸಂಖ್ಯೆ: ಅಸ್ಥಾಸ/ತೆ/32/2011-12 ರಲ್ಲಿ ಅಪೀಲು ಸ್ಥಾಯಿ ಸಮಿತಿಯು ಆಯುಕ್ತರವರ ಟಿಪ್ಪಣಿಯನ್ನು ಮಾರ್ಪಾಡು ಮಾಡಿ ಅನುಮೋದಿಸಿರುವುದಿರಂದ ಪಾಲಿಕೆಯ ಖಜಾನೆಗೆ ಸುಮಾರು ರೂ.9.00 ಕೋಟಿಗಳಷ್ಟು ಆರ್ಥಿಕ ನಷ್ಟ ಉಂಟಾಗಿರುತ್ತದೆ. ಆದ್ದರಿಂದ ಅಪೀಲುಗಳ ಸ್ಥಾಯಿ ಸಮಿತಿಯು ದಿನಾಂಕ:28-10-2011 ರಂದು ತೆಗೆದುಕೊಂಡಿರುವ ನಿರ್ಣಯವು ನಿಯಮಬಾಹಿರವಾಗಿರುವುದಲ್ಲದೇ ಪಾಲಿಕೆಯ ಆರ್ಥಿಕ ಹಿತಾಸಕ್ತಿಗೆ ಧಕ್ಕೆಯುಂಟಾಗಿರುತ್ತದೆ. ಆದ್ದರಿಂದ, ಅಪೀಲು ಸ್ಥಾಯಿ ಸಮಿತಿಯು ದಿನಾಂಕ:28-10-2011 ರಂದು ತೆಗೆದುಕೊಂಡಿರುವ ನಿರ್ಣಯವು ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ ಕಾಯ್ದೆ 1976 ರ ಕಲಂ 98 ರಂತೆ ರದ್ದುಪಡಿಸುವಂತೆ ಪಾಲಿಕೆಯ ಆಯುಕ್ತರು ಮೇಲೆ (2)ರಲ್ಲಿ ಓದಲಾದ ಪತ್ರದಲ್ಲಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಈ ಹಿನ್ನೆಲೆಯಲ್ಲಿ, ಅಪೀಲು ಸ್ಥಾಯಿ ಸಮಿತಿಯು ದಿನಾಂಕ:28-10-2011 ರಂದು ತೆಗೆದುಕೊಂಡಿರುವ ನಿರ್ಣಯವು ನಿಯಮಬಾಹಿರವಾಗಿರುವುದಲ್ಲದೇ ಪಾಲಿಕೆಯ ಆರ್ಥಿಕ ಹಿತಾಸಕ್ತಿಗೆ ಧಕ್ಕೆಯುಂಟಾಗಿರುವುದರಿಂದ ಈ ನಿರ್ಣಯವನ್ನು ಏಕೆ ರದ್ದುಗೊಳಿಸಬಾರದು? ಎಂಬುದಕ್ಕೆ ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ ಕಾಯ್ದೆ 1976ರ ಕಲಂ 98(2) ರನ್ವಯ ಮೇಲೆ (3)ರಲ್ಲಿ ಓದಲಾದ ದಿನಾಂಕ:03-12-2012ರ ಕಾರಣ ಕೇಳುವ ನೋಟೀಸನ್ನು ಅಧ್ಯಕ್ಷರು/ಕಾರ್ಯದರ್ಶಿ, ಪಬ್ಲಿಕ್ ಯುಟಿಲಿಟಿ ಬಿಲ್ಡಿಂಗ್, ಶಾಪಿಂಗ್ ಕಾಂಪ್ಲೆಕ್ಸ್ ಟ್ರೇಡರ್ಸ್ ಅಸೋಸಿಯೇಷನ್ (ರಿ) ನಂ.3. 1ನೇ ಮಹಡಿ, ಪಬ್ಲಿಕ್ ಯುಟಿಲಿಟಿ ಬಿಲ್ಡಿಂಗ್, ಎಂ.ಜಿ.ರಸ್ತೆ, ಬೆಂಗಳೂರು ಇವರಿಗೆ ಹಾಗೂ ಪಾಲಿಕೆಯ ಅಪೀಲು ಸ್ಥಾಯಿ ಸಮಿತಿಗೆ ಜಾರಿ ಮಾಡಿ, ಈ ನಿರ್ಣಯವನ್ನು ರದ್ದುಪಡಿಸುವ ಬಗ್ಗೆ ಹೇಳಿಕೆ/ಸಮಜಾಯಿಷಿಗಳೇನಾದರೂ ಇದ್ದಲ್ಲಿ ನೋಟೀಸ್ ತಲುಪಿದ 15 (ಹದಿನೈದು) ದಿನಗಳೊಳಗಾಗಿ ಸರ್ಕಾರಕ್ಕೆ ಲಿಖಿತವಾಗಿ ಕಳುಹಿಸಿ ಕೊಡುವಂತೆ ಸೂಚಿಸಲಾಗಿತ್ತು.

ಆದರೆ, ಸದರಿ ಕಾರಣ ಕೇಳುವ ನೋಟೀಸಿಗೆ ಪಾಲಿಕೆಯ ಅಪೀಲು ಸ್ಥಾಯಿ ಸಮಿತಿಯಿಂದಾಗಲೀ ಹಾಗೂ ಅಧ್ಯಕ್ಷರು/ಕಾರ್ಯದರ್ಶಿ, ಪಬ್ಲಿಕ್ ಯುಟಿಲಿಟಿ ಬಿಲ್ಡಿಂಗ್, ಶಾಪಿಂಗ್ ಕಾಂಪ್ಲೆಕ್ಸ್ ಟ್ರೇಡರ್ಸ್ ಅಸೋಸಿಯೇಷನ್ (ರಿ) ನಂ.3, 1ನೇ ಮಹಡಿ, ಪಬ್ಲಿಕ್ ಯುಟಿಲಿಟಿ ಬಿಲ್ಡಿಂಗ್, ಎಂ.ಜಿ.ರಸ್ತೆ, ಬೆಂಗಳೂರು ಇವರಿಂದಾಗಲೀ ಇದುವರೆವಿಗೂ ಹೇಳಿಕೆ/ಸಮಜಾಯಿಷಿ ಸ್ವೀಕೃತವಾಗಿರುವುದಿಲ್ಲ. ಆದ್ದರಿಂದ ಅವರುಗಳು ಯಾವುದೇ ಹೇಳಿಕೆ/ಸಮಜಾಯಿಷಿ ಸಲ್ಲಿಸದೇ ಇರುವುದರಿಂದ ಅವರುಗಳ ಹೇಳಿಕೆ/ಸಮಜಾಯಿಷಿ ಏನು ಇಲ್ಲವೆಂದು ಭಾವಿಸಲಾಗಿದೆ.

ಆದ್ದರಿಂದ, ಅಪೀಲು ಸ್ಥಾಯಿ ಸಮಿತಿಯ ದಿನಾಂಕ:28-10-2011ರಂದು ತೆಗೆದುಕೊಂಡಿರುವ ನಿರ್ಣಯವು ನಿಯಮಬಾಹಿರವಾಗಿರುವುದಲ್ಲದೇ ಪಾಲಿಕೆಯ ಆರ್ಥಿಕ ಹಿತಾಸಕ್ತಿಗೆ ಧಕ್ಕೆಯುಂಟಾಗಿರುತ್ತದೆ. ಆದ್ದರಿಂದ, ಸದರಿ ನಿರ್ಣಯವನ್ನು ರದ್ದುಗೊಳಿಸಲು ಸರ್ಕಾರವು ತೀರ್ಮಾನಿಸಿ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ನಅಇ 486 ಎಂಎನ್‌ಯು 2012**
**ಬೆಂಗಳೂರು, ದಿನಾಂಕ:17-09-2013**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನಲೆಯಲ್ಲಿ, ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ಸ್ ಕಾಯ್ದೆ 1976ರ ಕಲಂ 98(3) ರಲ್ಲಿ ಸರ್ಕಾರಕ್ಕೆ ಪ್ರದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ ಪಬ್ಲಿಕ್ ಯುಟಿಲಿಟಿ ಬಿಲ್ಡಿಂಗ್ ಶಾಪಿಂಗ್ ಕಾಂಪ್ಲೆಕ್ಸ್‌ನಲ್ಲಿರುವ ಮಳಿಗೆಗಳ ಬಾಡಿಗೆ ನಿಗಧಿಪಡಿಸುವುದಕ್ಕೆ ಸಂಬಂಧಿಸಿದಂತೆ ಅಪೀಲು ಸ್ಥಾಯಿ ಸಮಿತಿಯು ದಿನಾಂಕ:28-10-2011 ರಂದು ವಿಷಯದ ಸಂಖ್ಯೆ: ಅಸ್ಥಾಸ/ತೆ/32/2011-12 ರಂದು ತೆಗೆದುಕೊಂಡಿರುವ ನಿರ್ಣಯವನ್ನು ತಕ್ಷಣದಿಂದ ಜಾರಿಗೆ ಬರುವಂತೆ ರದ್ದುಪಡಿಸಿದೆ.

ಮೇಲ್ಕಂಡ ಸರ್ಕಾರದ ಆದೇಶ ಸಂಖ್ಯೆ:ನಅಇ 486 ಎಂಎನ್‌ಯು 2012 ದಿನಾಂಕ:17-09-2013ರ ನಡವಳಿಯನ್ನು ದಾಖಲಿಸಿಕೊಳ್ಳಲು ಹಾಗೂ ಮಾನ್ಯ ಆಡಳಿತಗಾರರ ವಿಷಯದ ಸಂಖ್ಯೆ:23/07-08 ದಿನಾಂಕ:02-07-2007 ರಲ್ಲಿ ನಿರ್ಣಯಿಸಿರುವಂತೆ ಪಿ.ಯು.ಬಿ ಕಟ್ಟಡದ ಮಳಿಗೆಗಳೀಗ ದಿನಾಂಕ:01-04-2006 ರಿಂದ ಅನ್ವಯವಾಗುವಂತೆ ಪರವಾನಗಿ ಶುಲ್ಕ ನಿಗಧಿಪಡಿಸಿ ವಸೂಲಾತಿ ಮಾಡಲು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿದರುವ ಆಯುಕ್ತರವರ ದಿನಾಂಕ:28-10-2013 ರ ಟಿಪ್ಪಣಿ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

ಪಬ್ಲಿಕ್ ಯುಟಿಲಿಟಿ ಬಿಲ್ಡಿಂಗ್ ಶಾಪಿಂಗ್ ಕಾಂಪ್ಲೆಕ್ಸ್‌ನಲ್ಲಿರುವ ಮಳಿಗೆಗಳಿಗೆ ಬಾಡಿಗೆ ನಿಗಧಿಪಡಿಸುವುದಕ್ಕೆ ಸಂಬಂಧಿಸಿದಂತೆ ಅಪೀಲು ಸ್ಥಾಯಿ ಸಮಿತಿಯ ದಿನಾಂಕ:28-10-2011 ರಂದು ವಿಷಯದ ಸಂಖ್ಯೆ:ಅಸ್ಥಾಸ/ತೆ/32/2011-12 ರಂದು ತೆಗೆದುಕೊಂಡಿರುವ ನಿರ್ಣಯವನ್ನು ತಕ್ಷಣದಿಂದ ಜಾರಿಗೆ ಬರುವಂತೆ ರದ್ದುಪಡಿಸಿ ಸರ್ಕಾರದ ಆದೇಶ ಸಂಖ್ಯೆ:ನಅಇ 486 ಎಂಎನ್‌ಯು 2012ರ ದಿನಾಂಕ:17-09-2013ರ ನಡವಳಿಯನ್ನು ದಾಖಲಿಸಿಕೊಳ್ಳಲು ಹಾಗೂ ಮಾನ್ಯ ಆಡಳಿತಗಾರರು ವಿಷಯದ ಸಂಖ್ಯೆ:23/07-08 ದಿನಾಂಕ:02-07-2007ರಲ್ಲಿ ನಿರ್ಣಯಿಸಿರುವಂತೆ ಪಬ್ಲಿಕ್ ಯುಟಿಲಿಟಿ ಬಿಲ್ಡಿಂಗ್ ಕಟ್ಟಡದ ಮಳಿಗೆಗಳಿಗೆ ದಿನಾಂಕ:01-04-2006 ರಿಂದ ಜಾರಿಗೆ ಬರುವಂತೆ ಮಳಿಗೆದಾರರಿಂದ ವಸೂಲಾತಿ ಮಾಡಲು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಟಿಪ್ಪಣಿಯನ್ನು ಒಪ್ಪುವುದು.

ಶ್ರೀ. ಬಿ.ಆರ್.ನಂಜುಂಡಪ್ಪ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ಪಬ್ಲಿಕ್ ಯುಟಿಲಿಟಿ ಬಿಲ್ಡಿಂಗ್ ಶಾಪಿಂಗ್ ಕಾಂಪ್ಲೆಕ್ಸ್‌ನಲ್ಲಿರುವ ಮಳಿಗೆಗಳಿಗೆ ಬಾಡಿಗೆ ನಿಗಧಿಪಡಿಸುವುದಕ್ಕೆ ಸಂಬಂಧಿಸಿದಂತೆ ಅಪೀಲು ಸ್ಥಾಯಿ ಸಮಿತಿಯ ದಿನಾಂಕ:28-10-2011 ರಂದು ವಿಷಯದ ಸಂಖ್ಯೆ:ಅಸ್ಥಾಸ/ತೆ/32/2011-12 ರಂದು ತೆಗೆದುಕೊಂಡಿರುವ ನಿರ್ಣಯವನ್ನು ತಕ್ಷಣದಿಂದ ಜಾರಿಗೆ ಬರುವಂತೆ ರದ್ದುಪಡಿಸಿ ಸರ್ಕಾರದ ಆದೇಶ ಸಂಖ್ಯೆ:ನಅಇ486ಎಂಎನ್‌ಯು2012ರ ದಿನಾಂಕ: 17-09-2013ರ ನಡವಳಿಯನ್ನು ದಾಖಲಿಸಿಕೊಳ್ಳಲು ಹಾಗೂ ಮಾನ್ಯ ಆಡಳಿತಗಾರರು ವಿಷಯದ ಸಂಖ್ಯೆ:23/07-08 ದಿನಾಂಕ: 02-07-2007ರಲ್ಲಿ ನಿರ್ಣಯಿಸಿರುವಂತೆ ಪಬ್ಲಿಕ್ ಯುಟಿಲಿಟಿ ಬಿಲ್ಡಿಂಗ್ ಕಟ್ಟಡದ ಮಳಿಗೆಗಳಿಗೆ ದಿನಾಂಕ:01-04-2006 ರಿಂದ ಜಾರಿಗೆ ಬರುವಂತೆ ಮಳಿಗೆದಾರರಿಂದ ವಸೂಲಾತಿ ಮಾಡಲು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಟಿಪ್ಪಣಿಯನ್ನು ಒಪ್ಪುವುದೆಂದು ಸಭೆಯು ತೀರ್ಮಾನಿಸಲಾಯಿತು".

(ಬಿ..ಎಸ್.ಸತ್ಯನಾರಾಯಣ)
ಮಹಾಪೌರರು

## ದಿನಾಂಕ:28-10-2013 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ಮಂಡಿಸಲಾದ ಸಂತಾಪ ಸೂಚಕ ನಿರ್ಣಯ

## ವಿಷಯದ ಸಂಖ್ಯೆ : 105 / 2013-14

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

ಚಿತ್ರರಂಗದ ಹಿರಿಯ ಗಾಯಕರಾದ ಸ್ವರ ಸಾಮ್ರಾಟ್ ಪ್ರಬೋದ್ ಚಂದ್ರ ಡೇ (ಮನ್ನಾಡೆ) ರವರು ದಿನಾಂಕ:24-10-2013 ರಂದು ಬೆಂಗಳೂರಿನಲ್ಲಿ ದೈವಾಧೀನರಾದೆಂದು ಸಭೆಗೆ ತಿಳಿಸಲು ದು:ಖವಾಗುತ್ತದೆ. ದಿವಂಗತರು 1919 ರಲ್ಲಿ ಕೋಲ್ಕತ್ತಾದಲ್ಲಿ ಜನಿಸಿ, ಭಾರತೀಯ ಚಲನ ಚಿತ್ರರಂಗದಲ್ಲಿ ಅಪಾರ ಯಶಸ್ಸುಗಳಿಸಿ, ಕನ್ನಡವೂ ಸೇರಿದಂತೆ ಹಿಂದಿ, ಮರಾಠಿ, ಬೆಂಗಾಲಿ, ಗುಜರಾತಿ, ಮಲಯಾಳಂ, ಅಸ್ಸಾಮಿ ಭಾಷೆಯ ಚಲನಚಿತ್ರಗಳಲ್ಲಿ ಗೀತೆಗಳನ್ನು ಹಾಡಿದ್ದ ಮನ್ನಾಡೆರವರ ಕಲಾ ಸೇವೆಯನ್ನು ನಾವು ಇಂದು ಸ್ಮರಿಸಬೇಕಾಗಿದ್ದು, ದಿವಂಗತರ ಆತ್ಮಕ್ಕೆ ಚಿರಶಾಂತಿ ಲಭಿಸಲೆಂದು ಹಾಗೂ ದಿವಂಗತರ ಅಗಲಿಕೆಯಿಂದಾಗಿಅವರ ಕುಟುಂಬ ವರ್ಗದವರಿಗೆ ಉಂಟಾಗಿರುವ ದು:ಖವನ್ನು ಭರಿಸುವ ಶಕ್ತಿಯನ್ನು ಭಗವಂತನು ಕರುಣಿಸಲೆಂದು ಪ್ರಾರ್ಥಿಸುತ್ತೇನೆ.

ಶ್ರೀ. ಬಿ.ಆರ್.ನಂಜುಂಡಪ್ಪ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

ನಿರ್ಣಯ: "ಚಿತ್ರರಂಗದ ಹಿರಿಯ ಗಾಯಕರಾದ ಸ್ವರ ಸಾಮ್ರಾಟ್ ಪ್ರಬೋದ್ ಚಂದ್ರ ಡೇ (ಮನ್ನಾಡೆ) ರವರು ದಿನಾಂಕ:24-10-2013 ರಂದು ಬೆಂಗಳೂರಿನಲ್ಲಿ ದೈವಾಧೀನರಾದೆಂದು ಸಭೆಗೆ ತಿಳಿಸಲು ದು:ಖವಾಗುತ್ತದೆ. ದಿವಂಗತರು 1919 ರಲ್ಲಿ ಕೋಲ್ಕತ್ತಾದಲ್ಲಿ ಜನಿಸಿ, ಭಾರತೀಯ ಚಲನ ಚಿತ್ರರಂಗದಲ್ಲಿ ಅಪಾರ ಯಶಸ್ಸುಗಳಿಸಿ, ಕನ್ನಡವೂ ಸೇರಿದಂತೆ ಹಿಂದಿ, ಮರಾಠಿ, ಬೆಂಗಾಲಿ, ಗುಜರಾತಿ, ಮಲಯಾಳಂ, ಅಸ್ಸಾಮಿ ಭಾಷೆಯ ಚಲನಚಿತ್ರಗಳಲ್ಲಿ ಗೀತೆಗಳನ್ನು ಹಾಡಿದ್ದ ಮನ್ನಾಡೆರವರ ಕಲಾ ಸೇವೆಯನ್ನು ನಾವು ಇಂದು ಸ್ಮರಿಸಬೇಕಾಗಿದ್ದು, ದಿವಂಗತರ ಆತ್ಮಕ್ಕೆ ಚಿರಶಾಂತಿ ಲಭಿಸಲೆಂದು ಹಾಗೂ ದಿವಂಗತರ ಅಗಲಿಕೆಯಿಂದಾಗಿಅವರ ಕುಟುಂಬ ವರ್ಗದವರಿಗೆ ಉಂಟಾಗಿರುವ ದು:ಖವನ್ನು ಭರಿಸುವ ಶಕ್ತಿಯನ್ನು ಭಗವಂತನು ಕರುಣಿಸಲೆಂದು ಪ್ರಾರ್ಥಿಸುವುದೆಂದು ಸಭೆಯು ತೀರ್ಮಾನಿಸಲಾಯಿತು".

(ಬಿ..ಎಸ್.ಸತ್ಯನಾರಾಯಣ)
ಮಹಾಪೌರರು

## ದಿನಾಂಕ:29-10-2013 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯ

## ವಿಷಯದ ಸಂಖ್ಯೆ : 106 / 2013-14

ಶ್ರೀ. ಅಶ್ವಥ್ ನಾರಾಯಣ ಗೌಡ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಿಂದ ಕಾಮಗಾರಿಗಳಿಗೆ, ಇತರೆ ಕಾರ್ಯಕ್ರಮಗಳಿಗೆ ಕರೆಯಲಾಗುವ ಟೆಂಡರ್‌ಗಳಿಗೆ ಗುತ್ತಿಗೆದಾರರಿಂದ ಪ್ರತಿಕ್ರಿಯೆ ಬಾರದಿದ್ದ ಪಕ್ಷದಲ್ಲಿ ಗರಿಷ್ಠ ಮೂರು ಬಾರಿ ಟೆಂಡರ್ ಕರೆಯುವುದು. ಸದರಿ ಟೆಂಡರ್ ಕರೆಗಳಿಗೂ ಪ್ರತಿಕ್ರಿಯೆ ಬಾರದಿದ್ದಲ್ಲಿ ಸದರಿ ಕಾಮಗಾರಿಗಳನ್ನು ಕೆ.ಆರ್.ಐ.ಡಿ.ಎಲ್. ಸಂಸ್ಥೆಯ ಮುಖಾಂತರ ನಿರ್ವಹಿಸಲು ಆಯುಕ್ತರವರು ಕ್ರಮಜರುಗಿಸುವುದು.

ಶ್ರೀ. ಬಿ.ಆರ್.ನಂಜುಂಡಪ್ಪ ರವರು ಶ್ರೀ. ಅಶ್ವಥ್ ನಾರಾಯಣ ಗೌಡ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

ನಿರ್ಣಯ: "ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಿಂದ ಕಾಮಗಾರಿಗಳಿಗೆ, ಇತರೆ ಕಾರ್ಯಕ್ರಮಗಳಿಗೆ ಕರೆಯಲಾಗುವ ಟೆಂಡರ್‌ಗಳಿಗೆ ಗುತ್ತಿಗೆದಾರರಿಂದ ಪ್ರತಿಕ್ರಿಯೆ ಬಾರದಿದ್ದ ಪಕ್ಷದಲ್ಲಿ ಗರಿಷ್ಠ ಮೂರು ಬಾರಿ ಟೆಂಡರ್ ಕರೆಯುವುದು. ಸದರಿ ಟೆಂಡರ್ ಕರೆಗಳಿಗೂ ಪ್ರತಿಕ್ರಿಯೆ ಬಾರದಿದ್ದಲ್ಲಿ ಸದರಿ ಕಾಮಗಾರಿಗಳನ್ನು ಕೆ.ಆರ್.ಐ.ಡಿ.ಎಲ್. ಸಂಸ್ಥೆಯ ಮುಖಾಂತರ ನಿರ್ವಹಿಸಲು ಆಯುಕ್ತರವರು ಕ್ರಮಜರುಗಿಸುವುದೆಂದು ಸಭೆಯು ತೀರ್ಮಾನಿಸಲಾಯಿತು".

(ಬಿ.ಎಸ್.ಸತ್ಯನಾರಾಯಣ)
ಮಹಾಪೌರರು

# ದಿನಾಂಕ:29-10-2013 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯಲ್ಲಿ ತೀರ್ಮಾನವಾದ ಅಧಿಕ ವಿಷಯ

## ವಿಷಯದ ಸಂಖ್ಯೆ : 01 (94)/2013-14

ಟಿಪ್ಪಣಿಯಲ್ಲಿ ವಿವರಿಸಿರುವಂತೆ, **Estimate for RCC Retaining wall in Primary storm water drain K-100 Ch: 5034 to 5345 near L.R.Slum** ಕಾಮಗಾರಿಗೆ ರೂ.485.00 ಲಕ್ಷಗಳಿಗೆ ಅಂದಾಜನ್ನು ತಯಾರಿಸಿ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆದು ಕಾಮಗಾರಿ ಸಂಕೇತವನ್ನು (307-13-000002) ಪಡೆಯಲಾಗಿರುತ್ತದೆ. ಅದರಂತೆ, ಮುಖ್ಯ ಅಭಿಯಂತರರು (ಬೃ.ಮ.ನೀ.ಗಾ) ರವರು ಆಡಳಿತಾತ್ಮಕ ಮತ್ತು ತಾಂತ್ರಿಕ ಮಂಜೂರಾತಿಯನ್ನು ದಿನಾಂಕ:09-07-2012 ರಂದು ನೀಡಿರುತ್ತಾರೆ.

ಈ ಕಾಮಗಾರಿಗೆ ಟೆಂಡರ್ ನೋಟಿಫಿಕೇಶನ್ ನಂ.EE/SWD(KVP)/TEND/07/12-13 ದಿನಾಂಕ: 01-10-2012 ರಂದು ತಾಂತ್ರಿಕ ಮತ್ತು ಆರ್ಥಿಕ ಬಿಡ್ (Double Cover) ಟೆಂಡರ್ ಆಹ್ವಾನಿಸಲಾಗಿತ್ತು.

ಸದರಿ ಟೆಂಡರ್‌ನ ತಾಂತ್ರಿಕ ಬಿಡ್‌ನ್ನು ದಿನಾಂಕ:16.11.2012 ರಂದು ತೆರೆಯಲಾಗಿ 1.ಶ್ರೀ.ಮುನಿವೆಂಕಟಪ್ಪ ರಾಜೇಂದ್ರ (ಎಂ.ಆರ್.ಕನ್ಸ್ಟ್ರಕ್ಷನ್ಸ್) ಮತ್ತು 2. ಶ್ರೀ.ವಿ.ವಿಶ್ವನಾಥ್ ಇಬ್ಬರು ಗುತ್ತಿಗೆದಾರರು ಭಾಗವಹಿಸಿರುತ್ತಾರೆ. ಈ ಗುತ್ತಿಗೆದಾರರ ತಾಂತ್ರಿಕ ಬಿಡ್‌ಗೆ ದಿನಾಂಕ:07.02.2013 ರಂದು ಮುಖ್ಯ ಅಭಿಯಂತರರು (ಬೃ.ನೀ.ಗಾ) ರವರು ಅನುಮೋದನೆ ನೀಡಿರುತ್ತಾರೆ. ಗುತ್ತಿಗೆದಾರರ ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ ದಿನಾಂಕ:12.02.2013 ರಂದು ಆರ್ಥಿಕ ಬಿಡ್‌ನ್ನು ತೆರೆಯಲಾಗಿದೆ.

**ಆರ್ಥಿಕ ಬಿಡ್‌ನ ವಿವರಗಳು ಈ ಕೆಳಕಂಡಂತಿವೆ:**

| ಕ್ರ ಸಂ. | ಗುತ್ತಿಗೆದಾರರ ಹೆಸರು | ಕಾಮಗಾರಿಯ ಅಂದಾಜು ಮೊತ್ತ ರೂ. ಲಕ್ಷಗಳಲ್ಲಿ | ಟೆಂಡರ್‌ಗಿಟ್ಟ ಮೊತ್ತ (ಮಂಜೂರಾದ ಅಂದಾಜು ಪಟ್ಟಿಯ ದರದಂತೆ 2011-12ನೇ ಸಾಲಿನ ದರಪಟ್ಟಿಗೆ) ರೂ. | ಗುತ್ತಿಗೆದಾರರು ನಮೂದಿಸಿರುವ ಮೊತ್ತರೂ. | ಅಂದಾಜು ಪಟ್ಟಿಯ (2011-12ನೇ ಸಾಲಿನ ದರಪಟ್ಟಿಯ ದರಗಳಂತೆ) | 2012-13ನೇ ಸಾಲಿನ ದರಪಟ್ಟಿಯ ದರಗಳಂತೆ) |
|---|---|---|---|---|---|---|
| 1 | ಶ್ರೀ. ಮುನಿವೆಂಕಟಪ್ಪ ರಾಜೇಂದ್ರ | 485.00 | 46645649.88 | 57256114.50 | 22.75% ರಷ್ಟು ಹೆಚ್ಚು | 13.72% ರಷ್ಟು ಹೆಚ್ಚು |
| 2 | ಶ್ರೀ.ವಿ.ವಿಶ್ವನಾಥ್ | | | 60111585.50 | 28.87% ರಷ್ಟು ಹೆಚ್ಚು | 19.39% ರಷ್ಟು ಹೆಚ್ಚು |

ಮೇಲ್ಕಂಡ ವಿವರಗಳನ್ನು ಪರಿಶೀಲಿಸಲಾಗಿ ಈ ಕಾಮಗಾರಿಗೆ ಅತಿ ಕನಿಷ್ಠ ದರ ನಮೂದಿಸಿರುವ ಎಲ್-1 ಗುತ್ತಿಗೆದಾರರಾದ ಶ್ರೀ.ಮುನಿವೆಂಕಟಪ್ಪ ರಾಜೇಂದ್ರ, ರವರು ರೂ.57256114.50 ಗಳನ್ನು ನಮೂದಿಸಿದ್ದು, ಈ ಮೊತ್ತವು ಅಂದಾಜು ಪಟ್ಟಿಯ 2011-12ನೇ ಸಾಲಿನ ದರಪಟ್ಟಿಗೆ ಶೇ.22.75 ರಷ್ಟು ಹೆಚ್ಚಿಗೆ ಮತ್ತು ಎಸ್.ಆರ್.ದರ 2012-13 ರೊಂದಿಗೆ ಹೋಲಿಸಿದಾಗ ಶೇ.13.72 ರಷ್ಟು ಹೆಚ್ಚು ಇರುತ್ತದೆ. ಈ ದರವು ಹೆಚ್ಚೆಂದು ಭಾವಿಸಿ, ಮುಖ್ಯ ಅಭಿಯಂತರರು, ಬೃಹತ್ ನೀರುಗಾಲುವೆರವರು ಗುತ್ತಿಗೆದಾರರೊಂದಿಗೆ ದರ ಸಂಧಾನ ನಡೆಸುವಂತೆ ಸೂಚಿಸಿದ್ದರ ಮೇರೆಗೆ ಗುತ್ತಿಗೆದಾರರಿಗೆ ದಿನಾಂಕ:23.02.2013 ರಂದು ಪತ್ರ ಬರೆದು ಗುತ್ತಿಗೆದಾರರು ನಮೂದಿಸಿರುವ ದರಗಳು ಹೆಚ್ಚಾಗಿರುವುದರಿಂದ ದರಗಳನ್ನು ಕಡಿಮೆ ಮಾಡಲು ಕೋರಲಾಗಿತ್ತು. ಆದ್ದರಿಂದ, ಸದರಿ ಗುತ್ತಿಗೆದಾರರು ಕಾಮಗಾರಿಯ ಸ್ಥಳದಲ್ಲಿ ವಾಹನಗಳ ಸಂಚಾರ ಸಮಸ್ಯೆ ಇದ್ದು ಸುಮಾರು 300 ಮೀ ದೂರದಿಂದ ಸಾಮಗ್ರಿಗಳನ್ನು ತಲೆ ಹೊರೆಯ ಮೇಲೆ ಕಾರ್ಮಿಕರ ಮುಖಾಂತರ ಸಾಗಿಸಬೇಕಾಗುತ್ತದೆ, ಕಾರ್ಮಿಕರ ಕೂಲಿ ದರ,

.........................2

ಸಿಮೆಂಟ್ ಹಾಗೂ ಸ್ಟೀಲ್ ದರಗಳು ಹೆಚ್ಚಾಗಿರುತ್ತದೆ. ಈ ನಾಲೆಯಲ್ಲಿ 24 ಗಂಟೆಗಳು ಸಹ ನೀರು ಹರಿಯುತ್ತಿರುವುದರಿಂದ ಕೆಲಸ ಬೇಗ ನಡೆಯುವುದಿಲ್ಲ ಹಾಗೂ ಒಂದು ಭಾರಿ ಮಳೆ ಬಂದರೆ ಕಾಮಗಾರಿಯ ಸ್ಥಳದಲ್ಲಿ ಸುಮಾರು 8 ಅಡಿ ಎತ್ತರ ನೀರು ಹರಿಯುತ್ತದೆ. ಆದ್ದರಿಂದ, ಗುತ್ತಿಗೆದಾರರು ತಾವು ನಮೂದಿಸಿರುವ ದರಗಳು ಸಮಂಜಸವಾಗಿರುತ್ತದೆಂದು ತಿಳಿಸಿ, ಆದಾಗ್ಯೂ ಕಾರ್ಯಪಾಲಕ ಅಭಿಯಂತರರವರ ಮನವಿಯ ಮೇರೆಗೆ ರೂ.57256114.50 ಗಳ ಮೊತ್ತದಿಂದ ರೂ.5684334.50 ಗಳ ಮೊತ್ತಕ್ಕೆ ಕಡಿಮೆಗೊಳಿಸಿ ಕಾಮಗಾರಿ ನಿರ್ವಹಿಸಲು ಒಪ್ಪಿರುತ್ತೇನೆಂದು ಪತ್ರ ಬರೆದಿರುತ್ತಾರೆ. ಈ ದರ ಸಂಧಾನದ ಮೊತ್ತವು 2011-12 ನೇ ಸಾಲಿನ ದರಪಟ್ಟಿಗೆ ಹೋಲಿಸಿದಾಗ ಶೇ.21.86 ರಷ್ಟು ಹೆಚ್ಚಾಗಿದ್ದು, ಇದೇ ಮೊತ್ತವನ್ನು 2012-13ರ ಎಸ್.ಆರ್. ದರದೊಂದಿಗೆ ಹೋಲಿಸಿದಾಗ ಶೇ.12.89 ರಷ್ಟು ಹೆಚ್ಚಾಗುತ್ತಿದ್ದು ಪರಿಗಣಿಸಬಹುದಾದ ದರಗಳಾಗಿರುತ್ತವೆ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಪ್ರಸ್ತಾಪಿಸಿರುವ ಕಾಮಗಾರಿಗೆ ಗುತ್ತಿಗೆದಾರರ ದರ ಸಂಧಾನದ ನಂತರ ನಮೂದಿಸಿರುವ ಮೊತ್ತ ರೂ.56841334.50 ಗಳಾಗಿದ್ದು 2011-12ನೇ ಸಾಲಿನ ದರಪಟ್ಟಿಗೆ ಶೇ.21.86 ರಷ್ಟು ಹೆಚ್ಚಿಗೆ ಮತ್ತು ಎಸ್.ಆರ್.ದರ 2012-13 ರೊಂದಿಗೆ ಹೋಲಿಸಿದಾಗ ಶೇ.12.89 ರಷ್ಟು ಹೆಚ್ಚಿಗೆ ಇರುವುದರಿಂದ, ಗುತ್ತಿಗೆದಾರರಾದ ಶ್ರೀ. ಮುನಿವೆಂಕಟಪ್ಪ ರಾಜೇಂದ್ರರವರು ನಮೂದಿಸಿರುವ ಟೆಂಡರ್ ಮೊತ್ತ ರೂ. 56841334.50 ಗಳು ಎಸ್.ಆರ್.ದರ 2012-13 ಸಾಲಿಗೆ ಶೇ.12.89ರಷ್ಟು ಹೆಚ್ಚಿನ ದರಗಳಿಗೆ ಟೆಂಡರ್ ಬಗ್ಗೆ ಅನುಮೋದನೆ ಕೋರಿ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 21-06-2013ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ:24-10-2013ರ ನಿರ್ಣಯ.

ಶ್ರೀ. ಅಶ್ವಥನಾರಾಯಣ ಗೌಡ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ:24-10-2013ರ ನಿರ್ಣಯವನ್ನು ಒಪ್ಪುವುದು".

ಶ್ರೀ. ಬಿ.ಆರ್.ನಂಜುಂಡಪ್ಪ ರವರು ಶ್ರೀ. ಅಶ್ವಥನಾರಾಯಣ ಗೌಡ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ: 24-10-2013ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

(ಬಿ.ಎಸ್.ಸತ್ಯನಾರಾಯಣ)
ಮಹಾಪೌರರು

C

# ದಿನಾಂಕ:29-10-2013 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯಲ್ಲಿ ತೀರ್ಮಾನವಾದ ಅಧಿಕ ವಿಷಯ

## ವಿಷಯದ ಸಂಖ್ಯೆ : 02 (95)/2013-14

ಟಿಪ್ಪಣಿಯಲ್ಲಿ ವಿವರಿಸಿರುವಂತೆ, **Estimate for RCC Retaining wall in Primary storm water drain K-100 Ch: 5345 to 5650 near L.R.Slum** ಕಾಮಗಾರಿಗೆ ರೂ.480.00 ಲಕ್ಷಗಳಿಗೆ ಅಂದಾಜನ್ನು ತಯಾರಿಸಿ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆದು ಕಾಮಗಾರಿ ಸಂಕೇತವನ್ನು (307-13-000003) ಪಡೆಯಲಾಗಿರುತ್ತದೆ. ಅದರಂತೆ, ಮುಖ್ಯಅಭಿಯಂತರರು (ಬೃ.ಮ.ನೀ.ಗಾ) ರವರು ಆಡಳಿತಾತ್ಮಕ ಮತ್ತು ತಾಂತ್ರಿಕ ಮಂಜೂರಾತಿಯನ್ನು ದಿನಾಂಕ: 09-07-2012 ರಂದು ನೀಡಿರುತ್ತಾರೆ.

ಈ ಕಾಮಗಾರಿಗೆ ಟೆಂಡರ್ ನೋಟಿಫಿಕೇಶನ್ ನಂ.ಇಇ/SWD(KVP)/TEND/06/12-13 ದಿನಾಂಕ: 01-08-2012 ರಂದು ತಾಂತ್ರಿಕ ಮತ್ತು ಆರ್ಥಿಕ ಬಿಡ್ (Double Cover) ಟೆಂಡರ್ ಆಹ್ವಾನಿಸಲಾಗಿತ್ತು.

ಸದರಿ ಟೆಂಡರ್‌ನ ತಾಂತ್ರಿಕ ಬಿಡ್‌ಅನ್ನು ದಿನಾಂಕ:11.09.2012 ರಂದು ತೆರೆಯಲಾಗಿ 1.ಶ್ರೀ.ಮುನಿವೆಂಕಟಪ್ಪ ರಾಜೇಂದ್ರ, 2.ಶ್ರೀ.ವಿ.ವಿಶ್ವನಾಥ್ ಮತ್ತು 3.ಶ್ರೀ.ಟಿ.ಎಲ್.ವೆಂಕಟೇಶ್ 3 ಜನ ಗುತ್ತಿಗೆದಾರರು ಭಾಗವಹಿಸಿರುತ್ತಾರೆ. ಈ ಗುತ್ತಿಗೆದಾರರ ತಾಂತ್ರಿಕ ಬಿಡ್‌ಗೆ ದಿನಾಂಕ: 11.10.2012 ರಂದು ಮುಖ್ಯ ಅಭಿಯಂತರರು (ಬೃ.ನೀ.ಗಾ) ರವರು ಅನುಮೋದನೆ ನೀಡಿರುತ್ತಾರೆ. ಗುತ್ತಿಗೆದಾರರ ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ ದಿನಾಂಕ: 11.10.2012 ರಂದು ಆರ್ಥಿಕ ಬಿಡ್‌ಅನ್ನು ತೆರೆಯಲಾಗಿದೆ.

**ಆರ್ಥಿಕ ಬಿಡ್‌ನ ವಿವರಗಳು ಈ ಕೆಳಕಂಡಂತಿವೆ:**

| ಕ್ರ ಸಂ. | ಗುತ್ತಿಗೆದಾರರ ಹೆಸರು | ಕಾಮಗಾರಿಯ ಅಂದಾಜು ಮೊತ್ತ ರೂ. ಲಕ್ಷಗಳಲ್ಲಿ | ಟೆಂಡರ್‌ಗಿಟ್ಟ ಮೊತ್ತ (ಮಂಜೂರಾದ ಅಂದಾಜು ಪಟ್ಟಿಯ ದರದಂತೆ 2011-12ನೇ ಸಾಲಿನ ದರಪಟ್ಟಿಗೆ) ರೂ. | ಗುತ್ತಿಗೆದಾರರು ನಮೂದಿಸಿರುವ ಮೊತ್ತ ರೂ. | ಅಂದಾಜು ಪಟ್ಟಿಯ (2011-12ನೇ ಸಾಲಿನ ದರಪಟ್ಟಿಯ ದರಗಳಂತೆ) | 2012-13ನೇ ಸಾಲಿನ ದರಪಟ್ಟಿಯ ದರಗಳಂತೆ) |
|---|---|---|---|---|---|---|
| 1 | ಶ್ರೀ. ಮುನಿವೆಂಕಟಪ್ಪ ರಾಜೇಂದ್ರ, | 480.00 | 46147695.89 | 58328798.85 | 26.40% ರಷ್ಟು ಹೆಚ್ಚು | 15.5% ರಷ್ಟು ಹೆಚ್ಚು |
| 2 | ಶ್ರೀ.ವಿ.ವಿಶ್ವನಾಥ್ | | | 58497263.36 | 26.76% ರಷ್ಟು ಹೆಚ್ಚು | 15.84% ರಷ್ಟು ಹೆಚ್ಚು |
| 3 | ಶ್ರೀ. ಟಿ.ಎಲ್.ವೆಂಕಟೇಶ್ | | | 59161499.15 | 28.2% ರಷ್ಟು ಹೆಚ್ಚು | 17.15% ರಷ್ಟು ಹೆಚ್ಚು |

ಮೇಲ್ಕಂಡ ವಿವರಗಳನ್ನು ಪರಿಶೀಲಿಸಲಾಗಿ, ಈ ಕಾಮಗಾರಿಗೆ ಅತಿ ಕನಿಷ್ಠ ದರ ನಮೂದಿಸಿರುವ ಎಲ್-1 ಗುತ್ತಿಗೆದಾರರಾದ ಶ್ರೀ.ಮುನಿವೆಂಕಟಪ್ಪ ರಾಜೇಂದ್ರ, ರವರು ರೂ.58328798.85 ಗಳನ್ನು ನಮೂದಿಸಿದ್ದು, ಈ ಮೊತ್ತವು ಅಂದಾಜು ಪಟ್ಟಿಯ 2011-12ನೇ ಸಾಲಿನ ದರಪಟ್ಟಿಗೆ ಶೇ.26.40 ರಷ್ಟು ಹೆಚ್ಚಿಗೆ ಮತ್ತು ಎಸ್.ಆರ್.ದರ 2012-13 ರೊಂದಿಗೆ ಹೋಲಿಸಿದಾಗ ಶೇ.15.5 ರಷ್ಟು ಹೆಚ್ಚು ಇರುತ್ತದೆ. ಈ ದರವು ಹೆಚ್ಚೆಂದು ಭಾವಿಸಿ, ಮುಖ

.........2

ಅಭಿಯಂತರರು, ಬೃಹತ್ ನೀರುಗಾಲುವೆರವರು ಗುತ್ತಿಗೆದಾರರೊಂದಿಗೆ ದರ ಸಂಧಾನ ನಡೆಸುವಂತೆ ಸೂಚಿಸಿದ್ದರ ಮೇರೆಗೆ ಗುತ್ತಿಗೆದಾರರಿಗೆ ದಿನಾಂಕ:01-03-2013 ರಂದು ಪತ್ರ ಬರೆದು ಗುತ್ತಿಗೆದಾರರು ನಮೂದಿಸಿರುವ ದರಗಳು ಹೆಚ್ಚಾಗಿರುವುದರಿಂದ ದರಗಳನ್ನು ಕಡಿಮೆ ಮಾಡಲು ಕೋರಲಾಗಿತ್ತು. ಆದ್ದರಿಂದ, ಸದರಿ ಗುತ್ತಿಗೆದಾರರು ಕಾಮಗಾರಿಯ ಸ್ಥಳದಲ್ಲಿ ವಾಹನಗಳ ಸಂಚಾರ ಸಮಸ್ಯೆ ಇದ್ದು ಸುಮಾರು 300 ಮೀ ದೂರದಿಂದ ಸಾಮಗ್ರಿಗಳನ್ನು ತಲೆ ಹೊರೆಯ ಮೇಲೆ ಕಾರ್ಮಿಕರ ಮುಖಾಂತರ ಸಾಗಿಸಬೇಕಾಗುತ್ತದೆ, ಕಾರ್ಮಿಕರ ಕೂಲಿ ದರ, ಸಿಮೆಂಟ್ ಹಾಗೂ ಸ್ಟೀಲ್ ದರಗಳು ಹೆಚ್ಚಾಗಿರುತ್ತದೆ. ಈ ನಾಲೆಯಲ್ಲಿ 24 ಗಂಟೆಗಳು ಸಹ ನೀರು ಹರಿಯುತ್ತಿರುವುದರಿಂದ ಕೆಲಸ ಬೇಗ ನಡೆಯುವುದಿಲ್ಲ ಹಾಗೂ ಒಂದು ಭಾರಿ ಮಳೆ ಬಂದರೆ ಕಾಮಗಾರಿಯ ಸ್ಥಳದಲ್ಲಿ ಸುಮಾರು 8 ಅಡಿ ಎತ್ತರ ನೀರು ಹರಿಯುತ್ತದೆ. ಆದ್ದರಿಂದ, ನಾನು ನಮೂದಿಸಿರುವ ದರಗಳು ಸಮಂಜಸವಾಗಿರುತ್ತದೆಂದು ತಿಳಿಸಿ, ಆದಾಗ್ಯೂ ಕಾರ್ಯಪಾಲಕ ಅಭಿಯಂತರವರ ಮನವಿಯ ಮೇರೆಗೆ ರೂ.58328798.85 ಗಳ ಮೊತ್ತದಿಂದ ರೂ. 58033733.35 ಗಳ ಮೊತ್ತಕ್ಕೆ ಕಡಿಮೆಗೊಳಿಸಿ ಕಾಮಗಾರಿ ನಿರ್ವಹಿಸಲು ಒಪ್ಪಿರುತ್ತೇನೆಂದು ಪತ್ರ ಬರೆದಿರುತ್ತೀರಿ. ಈ ದರ ಸಂಧಾನದ ಮೊತ್ತವು 2011-12 ನೇ ಸಾಲಿನ ದರಪಟ್ಟಿಗೆ ಹೋಲಿಸಿದಾಗ ಶೇ.25.76ರಷ್ಟು ಹೆಚ್ಚಾಗಿದ್ದು, ಇದೇ ಮೊತ್ತವನ್ನು 2012-13ರ ಎಸ್.ಆರ್. ದರದೊಂದಿಗೆ ಹೋಲಿಸಿದಾಗ ಶೇ.14.92 ರಷ್ಟು ಹೆಚ್ಚಾಗುತ್ತಿದ್ದು ಪರಿಗಣಿಸಬಹುದಾದ ದರಗಳಾಗಿರುತ್ತವೆ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಪ್ರಸ್ತಾಪಿಸಿರುವ ಕಾಮಗಾರಿಯ ಟೆಂಡರ್ ಮೊತ್ತ ರೂ.58033733.35 ಗಳಾಗಿದ್ದು 2011-12ನೇ ಸಾಲಿನ ದರಪಟ್ಟಿಗೆ ಶೇ.25.76 ರಷ್ಟು ಹೆಚ್ಚಿಗೆ ಮತ್ತು ಎಸ್.ಆರ್.ದರ 2012-13 ರೊಂದಿಗೆ ಹೋಲಿಸಿದಾಗ ಶೇ.14.92 ರಷ್ಟು ಹೆಚ್ಚಿಗೆ ಇರುವುದರಿಂದ, ಗುತ್ತಿಗೆದಾರರಾದ ಶ್ರೀ. ಮುನಿವೆಂಕಟಪ್ಪ ರಾಜೇಂದ್ರರವರು ನಮೂದಿಸಿರುವ ಟೆಂಡರ್ ಮೊತ್ತ ರೂ. 58033733.35 ಗಳು ಎಸ್.ಆರ್.ದರ 2012-13 ಸಾಲಿಗೆ ಶೇ.14.92 ರಷ್ಟು ಹೆಚ್ಚಿನ ದರಗಳಿಗೆ ಟೆಂಡರ್‌ನ ಅನುಮೋದನೆ ಕೋರಿ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ:25-05-2013ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ: 24-10-2013ರ ನಿರ್ಣಯ.

ಶ್ರೀ. ಅಶ್ವಥನಾರಾಯಣ ಗೌಡ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ:24-10-2013ರ ನಿರ್ಣಯವನ್ನು ಒಪ್ಪುವುದು".

ಶ್ರೀ. ಬಿ.ಆರ್.ನಂಜುಂಡಪ್ಪ ರವರು ಶ್ರೀ. ಅಶ್ವಥನಾರಾಯಣ ಗೌಡ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ: 24-10-2013ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

(ಬಿ.ಎಸ್.ಸತ್ಯನಾರಾಯಣ)
ಮಹಾಪೌರರು

# ದಿನಾಂಕ:29-10-2013 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯಲ್ಲಿ ತೀರ್ಮಾನವಾದ ಅಧಿಕ ವಿಷಯ

## ವಿಷಯದ ಸಂಖ್ಯೆ : 03 (96)/2013-14

ಟಿಪ್ಪಣಿಯಲ್ಲಿ ವಿವರಿಸಿರುವಂತೆ, **Estimate for RCC Retaining wall in Primary storm water drain K-100 Ch: 5650 to 5885 near L.R.Slum** ಕಾಮಗಾರಿಗೆ ರೂ.330.00 ಲಕ್ಷಗಳಿಗೆ ಅಂದಾಜನ್ನು ತಯಾರಿಸಿ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆದು ಕಾಮಗಾರಿ ಸಂಕೇತವನ್ನು (307-13-000006) ಪಡೆಯಲಾಗಿರುತ್ತದೆ. ಅದರಂತೆ, ಮುಖ್ಯ ಅಭಿಯಂತರರು (ಬೃ.ಮ.ನೀ.ಗಾ) ರವರು ಆಡಳಿತಾತ್ಮಕ ಮತ್ತು ತಾಂತ್ರಿಕ ಮಂಜೂರಾತಿಯನ್ನು ದಿ: 09-07-2012 ರಂದು ನೀಡಿರುತ್ತಾರೆ.

ಈ ಕಾಮಗಾರಿಗೆ ಟೆಂಡರ್ ನೋಟಿಫಿಕೇಶನ್ ನಂ.EE/SWD(KVP)/TEND/06/12-13 ದಿನಾಂಕ: 01-08-2012 ರಂದು ತಾಂತ್ರಿಕ ಮತ್ತು ಆರ್ಥಿಕ ಬಿಡ್ (Double Cover) ಟೆಂಡರ್ ಆಹ್ವಾನಿಸಲಾಗಿತ್ತು.

ಸದರಿ ಟೆಂಡರ್ ತಾಂತ್ರಿಕ ಬಿಡ್‌ನ್ನು ದಿನಾಂಕ: 11.09.2012 ರಂದು ತೆರೆಯಲಾಗಿ (1)ಶ್ರೀ.ಅಭಿಲಾಶ್ ರಾಮಚಂದ್ರಪ್ಪ (2)ಶ್ರೀ.ಮುನಿವೆಂಕಟಪ್ಪ ರಾಜೇಂದ್ರ, (ಎಂ.ಆರ್.ಕನ್ಸ್‌ಟ್ರಕ್ಷನ್ಸ್) (3) ಶ್ರೀ.ಟಿ.ಎಲ್.ವೆಂಕಟೇಶ್ (4) ಶ್ರೀ. ವಿ. ವಿಶ್ವನಾಥ್ ನಾಲ್ಕು ಜನರು ಗುತ್ತಿಗೆದಾರರು ಭಾಗವಹಿಸಿರುತ್ತಾರೆ. ಇವರಲ್ಲಿ ಶ್ರೀ.ಅಭಿಲಾಶ್ ರಾಮಚಂದ್ರಪ್ಪ ರವರ ತಾಂತ್ರಿಕ ಬಿಡ್ ಅನರ್ಹಗೊಂಡಿದ್ದು, ಉಳಿದ 3 ಗುತ್ತಿಗೆದಾರರ ತಾಂತ್ರಿಕ ಬಿಡ್‌ಗೆ ದಿನಾಂಕ:11.10.2012 ರಂದು ಮುಖ್ಯ ಅಭಿಯಂತರರು (ಬೃನೀ.ಗಾ) ರವರು ಅನುಮೋದನೆ ನೀಡಿರುತ್ತಾರೆ. ಗುತ್ತಿಗೆದಾರರ ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ ದಿನಾಂಕ:11.10.2012 ರಂದು ಆರ್ಥಿಕ ಬಿಡ್‌ನ್ನು ತೆರೆಯಲಾಗಿದೆ.

**ಆರ್ಥಿಕ ಬಿಡ್‌ನ ವಿವರಗಳು ಈ ಕೆಳಕಂಡಂತಿವೆ:**

| ಕ್ರ ಸಂ. | ಗುತ್ತಿಗೆದಾರರ ಹೆಸರು | ಕಾಮಗಾರಿಯ ಅಂದಾಜು ಮೊತ್ತ ರೂ. ಲಕ್ಷಗಳಲ್ಲಿ | ಟೆಂಡರ್‌ಗಿಟ್ಟ ಮೊತ್ತ (ಮಂಜೂರಾದ ಅಂದಾಜು ಪಟ್ಟಿಯ ದರದಂತೆ 2011-12ನೇ ಸಾಲಿನ ದರಪಟ್ಟಿಗೆ) ರೂ. | ಗುತ್ತಿಗೆದಾರರು ನಮೂದಿಸಿರುವ ಮೊತ್ತ ರೂ. | ಅಂದಾಜು ಪಟ್ಟಿಯ (2011-12ನೇ ಸಾಲಿನ ದರಪಟ್ಟಿಯ ದರಗಳಂತೆ) | 2012-13ನೇ ಸಾಲಿನ ದರಪಟ್ಟಿಯ ದರಗಳಂತೆ) |
|---|---|---|---|---|---|---|
| 1 | ಶ್ರೀ. ಮುನಿವೆಂಕಟಪ್ಪ ರಾಜೇಂದ್ರ, | 330.00 | 31159193.20 | 39338367.88 | 26.25% ರಷ್ಟು ಹೆಚ್ಚು | 19.93% ರಷ್ಟು ಹೆಚ್ಚು |
| 2 | ಶ್ರೀ.ವಿ.ವಿಶ್ವನಾಥ್ | | | 39409245.53 | 26.48% ರಷ್ಟು ಹೆಚ್ಚು | 20.15% ರಷ್ಟು ಹೆಚ್ಚು |
| 3 | ಶ್ರೀ. ಟಿ.ಎಲ್.ವೆಂಕಟೇಶ್ | | | 39829750.01 | 27.83% ರಷ್ಟು ಹೆಚು | 21.43% ರಷ್ಟು ಹೆಚ್ಚು |

............................2

ಮೇಲ್ಕಂಡ ವಿವರಗಳನ್ನು ಪರಿಶೀಲಿಸಲಾಗಿ ಈ ಕಾಮಗಾರಿಗೆ ಅತಿ ಕನಿಷ್ಠ ದರ ನಮೂದಿಸಿರುವ ಎಲ್-1 ಗುತ್ತಿಗೆದಾರರಾದ ಶ್ರೀ.ಮುನಿವೆಂಕಟಪ್ಪ ರಾಜೇಂದ್ರ, ರವರು ರೂ.39338367.88 ಗಳನ್ನು ನಮೂದಿಸಿದ್ದು, ಈ ಮೊತ್ತವು ಅಂದಾಜು ಪಟ್ಟಿಯ 2011-12ನೇ ಸಾಲಿನ ದರಪಟ್ಟಿಗೆ ಶೇ.26.25ರಷ್ಟು ಹೆಚ್ಚಿಗೆ ಮತ್ತು ಎಸ್.ಆರ್.ದರ 2012-13ರನೊಂದಿಗೆ ಹೋಲಿಸಿದಾಗ ಶೇ.19.93 ರಷ್ಟು ಹೆಚ್ಚು ಇರುತ್ತದೆ. ಈ ದರವು ಹೆಚ್ಚೆಂದು ಭಾವಿಸಿ, ಮುಖ್ಯ ಅಭಿಯಂತರರು, ಬೃಹತ್ ನೀರು ಗಾಲುವೆರವರು ಗುತ್ತಿಗೆದಾರರೊಂದಿಗೆ ದರ ಸಂಧಾನ ನಡೆಸುವಂತೆ ಸೂಚಿಸಿದ್ದರ ಮೇರೆಗೆ ಗುತ್ತಿಗೆದಾರರಿಗೆ ದಿ: 01.03.2013 ರಂದು ಪತ್ರ ಬರೆದು ಗುತ್ತಿಗೆದಾರರು ನಮೂದಿಸಿರುವ ದರಗಳು ಹೆಚ್ಚಾಗಿರುವುದರಿಂದ ದರಗಳನ್ನು ಕಡಿಮೆ ಮಾಡಲು ಕೋರಲಾಗಿತ್ತು. ಆದ್ದರಿಂದ, ಸದರಿ ಗುತ್ತಿಗೆದಾರರು ಕಾಮಗಾರಿಯ ಸ್ಥಳದಲ್ಲಿ ವಾಹನಗಳ ಸಂಚಾರ ಸಮಸ್ಯೆ ಇದ್ದು ಸುಮಾರು 300 ಮೀ ದೂರದಿಂದ ಸಾಮಗ್ರಿಗಳನ್ನು ತಲೆ ಹೊರೆಯ ಮೇಲೆ ಕಾರ್ಮಿಕರ ಮುಖಾಂತರ ಸಾಗಿಸಬೇಕಾಗುತ್ತದೆ, ಕಾರ್ಮಿಕರ ಕೂಲಿ ದರ, ಸಿಮೆಂಟ್ ಹಾಗೂ ಸ್ಟೀಲ್ ದರಗಳು ಹೆಚ್ಚಾಗಿರುತ್ತದೆ. ಈ ನಾಲೆಯಲ್ಲಿ 24 ಗಂಟೆಗಳು ಸಹ ನೀರು ಹರಿಯುತ್ತಿರುವುದರಿಂದ ಕೆಲಸ ಬೇಗ ನಡೆಯುವುದಿಲ್ಲ ಹಾಗೂ ಒಂದು ಭಾರಿ ಮಳೆ ಬಂದರೆ ಕಾಮಗಾರಿಯ ಸ್ಥಳದಲ್ಲಿ ಸುಮಾರು 8 ಅಡಿ ಎತ್ತರ ನೀರು ಹರಿಯುತ್ತದೆ. ಆದ್ದರಿಂದ ಗುತ್ತಿಗೆದಾರರು ತಾವು ನಮೂದಿಸಿರುವ ದರಗಳು ಸಮಂಜಸವಾಗಿರುತ್ತದೆಂದು ತಿಳಿಸಿ, ಆದಾಗ್ಯೂ ಕಾರ್ಯಪಾಲಕ ಅಭಿಯಂತರರವರ ಮನವಿಯ ಮೇರೆಗೆ ರೂ.39338367.88 ಗಳ ಮೊತ್ತದಿಂದ ರೂ. 39078174.88 ಗಳ ಮೊತ್ತಕ್ಕೆ ಕಡಿಮೆಗೊಳಿಸಿ ಕಾಮಗಾರಿ ನಿರ್ವಹಿಸಲು ಒಪ್ಪಿರುತ್ತೇನೆಂದು ಪತ್ರ ಬರೆದಿರುತ್ತಾರೆ. ಈ ದರ ಸಂಧಾನದ ಮೊತ್ತವು 2011-12 ನೇ ಸಾಲಿನ ದರಪಟ್ಟಿಗೆ ಹೋಲಿಸಿದಾಗ ಶೇ.25.41ರಷ್ಟು ಹೆಚ್ಚಾಗಿದ್ದು, ಇದೇ ಮೊತ್ತವನ್ನು 2012-13ರ ಎಸ್.ಆರ್.ದರದೊಂದಿಗೆ ಹೋಲಿಸಿದಾಗ ಶೇ.14.91ರಷ್ಟು ಹೆಚ್ಚಾಗುತ್ತಿದ್ದು, ಪರಿಗಣಿಸಬಹುದಾದ ದರಗಳಾಗಿರುತ್ತವೆ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಪ್ರಸ್ತಾಪಿಸಿರುವ ಕಾಮಗಾರಿಗೆ ಗುತ್ತಿಗೆದಾರರ ದರ ಸಂಧಾನದ ನಂತರ ನಮೂದಿಸಿರುವ ಮೊತ್ತ ರೂ.39078174.88 ಗಳಾಗಿದ್ದು 2011-12ನೇ ಸಾಲಿನ ದರಪಟ್ಟಿಗೆ ಶೇ.25.41 ರಷ್ಟು ಹೆಚ್ಚಿಗೆ ಮತ್ತು ಎಸ್.ಆರ್.ದರ 2012-13 ರೊಂದಿಗೆ ಹೋಲಿಸಿದಾಗ ಶೇ.14.91 ರಷ್ಟು ಹೆಚ್ಚಿಗೆ ಇರುವುದರಿಂದ, ಗುತ್ತಿಗೆದಾರರಾದ ಶ್ರೀ. ಮುನಿವೆಂಕಟಪ್ಪ ರಾಜೇಂದ್ರರವರು ನಮೂದಿಸಿರುವ ಟೆಂಡರ್ ಮೊತ್ತ ರೂ. 39078174.88 ಗಳು ಎಸ್.ಆರ್.ದರ 2012-13ನೇ ಸಾಲಿಗೆ ಶೇ.14.91ರಷ್ಟು ಹೆಚ್ಚಿನ ದರಗಳಿಗೆ ಟೆಂಡರ್ ಬಗ್ಗೆ ಅನುಮೋದನೆ ಕೋರಿ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 21-06-2013ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ:24-10-2013ರ ನಿರ್ಣಯ.

ಶ್ರೀ. ಅಶ್ವಥನಾರಾಯಣ ಗೌಡ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ:24-10-2013ರ ನಿರ್ಣಯವನ್ನು ಒಪ್ಪುವುದು".

ಶ್ರೀ. ಬಿ.ಆರ್.ನಂಜುಂಡಪ್ಪ ರವರು ಶ್ರೀ. ಅಶ್ವಥನಾರಾಯಣ ಗೌಡ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ: 24-10-2013ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

(ಬಿ.ಎಸ್.ಸತ್ಯನಾರಾಯಣ)
ಮಹಾಪೌರರು

## ದಿನಾಂಕ:29-10-2013 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯಲ್ಲಿ ತೀರ್ಮಾನವಾದ ಅಧಿಕ ವಿಷಯ

## ವಿಷಯದ ಸಂಖ್ಯೆ : 04 (97)/2013-14

ಟಿಪ್ಪಣಿಯಲ್ಲಿ ವಿವರಿಸಿರುವಂತೆ, **Widening** of bridge on Luskar Hosur road at Crossing SWD K-100 chainage 5170 mtr near National dairy compound ಕಾಮಗಾರಿಗೆ ರೂ.400.00 ಲಕ್ಷಗಳಿಗೆ ಅಂದಾಜನ್ನು ತಯಾರಿಸಿ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆದು ಕಾಮಗಾರಿ ಸಂಕೇತವನ್ನು (307-13-000005) ಪಡೆಯಲಾಗಿರುತ್ತದೆ. ಅದರಂತೆ, ಮುಖ್ಯ ಅಭಿಯಂತರರು (ಬೃ.ಮ.ನೀ.ಗಾ) ರವರು ಆಡಳಿತಾತ್ಮಕ ಮತ್ತು ತಾಂತ್ರಿಕ ಮಂಜೂರಾತಿಯನ್ನು ದಿನಾಂಕ: 13-09-2012 ರಂದು ನೀಡಿರುತ್ತಾರೆ.

ಈ ಕಾಮಗಾರಿಗೆ ಟೆಂಡರ್ ನೋಟಿಫಿಕೇಶನ್ ನಂ.EE/SWD(KVP)/TEND/07/12-13 ದಿನಾಂಕ: 01-10-2012 ರಂದು ತಾಂತ್ರಿಕ ಮತ್ತು ಆರ್ಥಿಕ ಬಿಡ್(Double Cover) ಟೆಂಡರ್ ಆಹ್ವಾನಿಸಲಾಗಿತ್ತು.

ಸದರಿ ಟೆಂಡರ್‌ನ ತಾಂತ್ರಿಕ ಬಿಡ್‌ಅನ್ನು ದಿನಾಂಕ: 16.11.2012 ರಂದು ತೆರೆಯಲಾಗಿ 1. ಶ್ರೀ. ಮುನಿವೆಂಕಟಪ್ಪ ರಾಜೇಂದ್ರ, (ಎಂ.ಆರ್.ಕನ್ಸ್‌ಟ್ರಕ್ಷನ್ಸ್) ಮತ್ತು 2. ಶ್ರೀ.ಟಿ.ಎಲ್.ವೆಂಕಟೇಶ್ ಇಬ್ಬರು ಗುತ್ತಿಗೆದಾರರು ಭಾಗವಹಿಸಿರುತ್ತಾರೆ. ಈ ಗುತ್ತಿಗೆದಾರರ ತಾಂತ್ರಿಕ ಬಿಡ್‌ಗೆ ದಿನಾಂಕ:07.02.2013 ರಂದು ಮುಖ್ಯ ಅಭಿಯಂತರರು (ಬೃ.ನೀ.ಗಾ) ರವರು ಅನುಮೋದನೆ ನೀಡಿರುತ್ತಾರೆ. ಗುತ್ತಿಗೆದಾರರ ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ ದಿನಾಂಕ: 12.02.2013 ರಂದು ಆರ್ಥಿಕ ಬಿಡ್‌ನ್ನು ತೆರೆಯಲಾಗಿದೆ.

**ಆರ್ಥಿಕ ಬಿಡ್‌ನ ವಿವರಗಳು ಈ ಕೆಳಕಂಡಂತಿವೆ:**

| ಕ್ರ ಸಂ. | ಗುತ್ತಿಗೆದಾರರ ಹೆಸರು | ಕಾಮಗಾರಿಯ ಅಂದಾಜು ಮೊತ್ತ ರೂ. ಲಕ್ಷಗಳಲ್ಲಿ | ಟೆಂಡರ್‌ಗಿಟ್ಟ ಮೊತ್ತ (ಮಂಜೂರಾದ ಅಂದಾಜು ಪಟ್ಟಿಯ ದರದಂತೆ 2011-12ನೇ ಸಾಲಿನ ದರಪಟ್ಟಿಗೆ) ರೂ. | ಗುತ್ತಿಗೆದಾರರು ನಮೂದಿಸಿರುವ ಮೊತ್ತ ರೂ. | ಅಂದಾಜು ಪಟ್ಟಿಯ (2011-12ನೇ ಸಾಲಿನ ದರಪಟ್ಟಿಯ ದರಗಳಂತೆ) | 2012-13ನೇ ಸಾಲಿನ ದರಪಟ್ಟಿಯ ದರಗಳಂತೆ) |
|---|---|---|---|---|---|---|
| 1 | ಶ್ರೀ. ಮುನಿವೆಂಕಟಪ್ಪರಾಜೇಂದ್ರ | 400.00 | 37977690.07 | 49299452.00 | 29.81% ರಷ್ಟು ಹೆಚ್ಚು | 26.41% ರಷ್ಟು ಹೆಚ್ಚು |
| 2 | ಶ್ರೀ.ಟಿ.ಎಲ್.ವೆಂಕಟೇಶ್ | | | 51763209.40 | 36.30% ರಷ್ಟು ಹೆಚ್ಚು | 32.73% ರಷ್ಟು ಹೆಚ್ಚು |

.............................2

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಈ ಕಾಮಗಾರಿಗೆ ಅತಿ ಕನಿಷ್ಠ ದರ ನಮೂದಿಸಿರುವ ಎಲ್-1 ಗುತ್ತಿಗೆದಾರರಾದ ಶ್ರೀ.ಮುನಿವೆಂಕಟಪ್ಪ ರಾಜೇಂದ್ರ, ರವರು ರೂ.49299452.00 ಗಳನ್ನು ನಮೂದಿಸಿದ್ದು, ಈ ಮೊತ್ತವು ಅಂದಾಜು ಪಟ್ಟಿಯ 2011-12ನೇ ಸಾಲಿನ ದರಪಟ್ಟಿಗೆ ಶೇ.29.81ರಷ್ಟು ಹೆಚ್ಚಿಗೆ ಮತ್ತು ಎಸ್.ಆರ್.ದರ 2012-13 ರೊಂದಿಗೆ ಹೋಲಿಸಿದಾಗ ಶೇ.26.41 ರಷ್ಟು ಹೆಚ್ಚು ಇರುತ್ತದೆ. ಈ ದರವು ಹೆಚ್ಚೆಂದು ಭಾವಿಸಿ, ಮುಖ್ಯ ಅಭಿಯಂತರರು (ಬೃಹತ್ ನೀರುಗಾಲುವೆ) ರವರು ಗುತ್ತಿಗೆದಾರರೊಂದಿಗೆ ದರ ಸಂಧಾನ ನಡೆಸುವಂತೆ ಸೂಚಿಸಿದ್ದರ ಮೇರೆಗೆ ಗುತ್ತಿಗೆದಾರರಿಗೆ ದಿನಾಂಕ:23.02.2013 ರಂದು ಪತ್ರ ಬರೆದು ಗುತ್ತಿಗೆದಾರರು ನಮೂದಿಸಿರುವ ದರಗಳು ಹೆಚ್ಚಾಗಿರುವುದರಿಂದ ದರಗಳನ್ನು ಕಡಿಮೆ ಮಾಡಲು ಕೋರಲಾಗಿತ್ತು. ಈ ಮೇರೆಗೆ, ಸದರಿ ಗುತ್ತಿಗೆದಾರರು ಕಾಮಗಾರಿಯ ಸ್ಥಳದಲ್ಲಿ ವಾಹನಗಳ ಸಂಚಾರ ಸಮಸ್ಯೆ ಇದ್ದು ಸುಮಾರು 300 ಮೀ ದೂರದಿಂದ ಸಾಮಗ್ರಿಗಳನ್ನು ತಲೆ ಹೊರೆಯ ಮೇಲೆ ಕಾರ್ಮಿಕರ ಮುಖಾಂತರ ಸಾಗಿಸಬೇಕಾಗುತ್ತದೆ. ಕಾರ್ಮಿಕರ ಕೂಲಿ ದರ, ಸಿಮೆಂಟ್ ಹಾಗೂ ಸ್ಟೀಲ್ ದರಗಳು ಹೆಚ್ಚಾಗಿರುತ್ತದೆ.ಈ ನಾಲೆಯಲ್ಲಿ 24 ಗಂಟೆಗಳು ಸಹ ನೀರು ಹರಿಯುತ್ತಿರುವುದರಿಂದ ಕೆಲಸ ಬೇಗ ನಡೆಯುವುದಿಲ್ಲ ಹಾಗೂ ಒಂದು ಭಾರಿ ಮಳೆ ಬಂದರೆ ಕಾಮಗಾರಿಯ ಸ್ಥಳದಲ್ಲಿ ಸುಮಾರು 8 ಅಡಿ ಎತ್ತರ ನೀರು ಹರಿಯುತ್ತದೆ. ಆದ್ದರಿಂದ, ಗುತ್ತಿಗೆದಾರರು ತಾವು ನಮೂದಿಸಿರುವ ದರಗಳು ಸಮಂಜಸವಾಗಿರುತ್ತದೆಂದು ತಿಳಿಸಿ, ಆದಾಗ್ಯೂ ಕಾರ್ಯಪಾಲಕ ಅಭಿಯಂತರವರ ಮನವಿಯ ಮೇರೆಗೆ ರೂ.49299452.00ಗಳ ಮೊತ್ತದಿಂದ ರೂ.44767606.00 ಗಳ ಮೊತ್ತಕ್ಕೆ ಕಡಿಮೆಗೊಳಿಸಿ ಕಾಮಗಾರಿ ನಿರ್ವಹಿಸಲು ಒಪ್ಪಿರುತ್ತೇವೆಂದು ಪತ್ರ ಬರೆದಿರುತ್ತಾರೆ. ಈ ದರ ಸಂಧಾನದ ಮೊತ್ತವು 2011-12 ನೇ ಸಾಲಿನ ದರಪಟ್ಟಿಗೆ ಹೋಲಿಸಿದಾಗ ಶೇ.17.88ರಷ್ಟು ಹೆಚ್ಚಾಗಿದ್ದು, ಇದೇ ಮೊತ್ತವನ್ನು 2012-13ರ ಎಸ್.ಆರ್.ದರದೊಂದಿಗೆ ಹೋಲಿಸಿದಾಗ ಶೇ.14.79 ರಷ್ಟು ಹೆಚ್ಚಾಗುತ್ತಿದ್ದು ಪರಿಗಣಿಸಬಹುದಾದ ದರಗಳಾಗಿರುತ್ತವೆ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಪ್ರಸ್ತಾಪಿಸಿರುವ ಕಾಮಗಾರಿಗೆ ಗುತ್ತಿಗೆದಾರರ ದರ ಸಂಧಾನದ ನಂತರ ನಮೂದಿಸಿರುವ ಮೊತ್ತ ರೂ.44767606.00 ಗಳಾಗಿದ್ದು 2011-12ನೇ ಸಾಲಿನ ದರಪಟ್ಟಿಗೆ ಶೇ.17.88 ರಷ್ಟು ಹೆಚ್ಚಿಗೆ ಮತ್ತು ಎಸ್.ಆರ್.ದರ 2012-13 ರೊಂದಿಗೆ ಹೋಲಿಸಿದಾಗ ಶೇ.14.79 ರಷ್ಟು ಹೆಚ್ಚಿಗೆ ಇರುವುದರಿಂದ, ಗುತ್ತಿಗೆದಾರರಾದ ಶ್ರೀ. ಮುನಿವೆಂಕಟಪ್ಪ ರಾಜೇಂದ್ರರವರು ನಮೂದಿಸಿರುವ ಟೆಂಡರ್ ಮೊತ್ತ ರೂ. 44767606.00 ಗಳು ಎಸ್.ಆರ್.ದರ 2012-13 ಸಾಲಿಗೆ ಶೇ.14.79 ರಷ್ಟು ಹೆಚ್ಚಿನ ದರಗಳಿಗೆ ಟೆಂಡರ್‌ನ ಅನುಮೋದನೆ ಕೋರಿ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 21-06-2013ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ:24-10-2013ರ ನಿರ್ಣಯ.

ಶ್ರೀ. ಅಶ್ವಥನಾರಾಯಣ ಗೌಡ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ:24-10-2013ರ ನಿರ್ಣಯವನ್ನು ಒಪ್ಪುವುದು".

ಶ್ರೀ. ಬಿ.ಆರ್.ನಂಜುಂಡಪ್ಪ ರವರು ಶ್ರೀ. ಅಶ್ವಥನಾರಾಯಣ ಗೌಡ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

**ನಿರ್ಣಯ:** "ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ: 24-10-2013ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

(ಬಿ.ಎಸ್.ಸತ್ಯನಾರಾಯಣ)
ಮಹಾಪೌರರು

C

# ದಿನಾಂಕ:29-10-2013 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯಲ್ಲಿ ತೀರ್ಮಾನವಾದ ಅಧಿಕ ವಿಷಯ

## ವಿಷಯದ ಸಂಖ್ಯೆ : 05 (98)/2013-14

ಟಿಪ್ಪಣಿಯಲ್ಲಿ ವಿವರಿಸಿರುವಂತೆ, Remodelling of storm water drain-Construction of retaining wall improvements to bed and chain link Fencing from chainage 3000m to 4900m providing jacketing from ch:3000m to 3500m of V300 (drain starting form Srinivasanagara to Rajarajeshwari Nagar i.e., ch 0m to 5050m) in Vrusabhavathi valley, package-V ಕಾಮಗಾರಿ ಕುರಿತು ದಕ್ಷಿಣ ವಲಯದ ವ್ಯಾಪ್ತಿಯಲ್ಲಿ Revised Detailed project Report (RDPR) ಅಡಿಯಲ್ಲಿ ಕೈಗೊಂಡಿರುವ ಬೃಹತ್ ನೀರುಗಾಲುವೆಯ ಕಾಮಗಾರಿಗಳ ಅಂದಾಜನ್ನು CSMC ಯು ದಿನಾಂಕ:15-03-2011ರಂದು ನಡೆದ 95ನೇ ಸಭೆಯಲ್ಲಿ ಬೃಹತ್ ನೀರುಗಾಲುವೆಯ ಆರ್‌ಡಿಪಿಆರ್ ಗಾಗಿ ರೂ.925.38 ಕೋಟಿಗಳ ಮೊತ್ತಕ್ಕೆ ಅನುಮೋದನೆ ನೀಡಿದ್ದ ಮೇರೆಗೆ, ಪ್ರಸ್ತುತ ರೂ. 347.38 ಕೋಟಿಗಳ ಗಾತ್ರದ ಕಾಮಗಾರಿಯಲ್ಲಿ ಸದರಿ ಕಾಮಗಾರಿಯ ಅಂದಾಜು ಮೊತ್ತ ರೂ. 861.00 ಲಕ್ಷಗಳ ಅಂದಾಜಿಗೆ ನಿಯಮಾನುಸಾರ ಟೆಂಡರ್ ಪ್ರಕ್ರಿಯೆ ನಡೆಸಿ ಪ್ರಸ್ತಾವನೆಗಳನ್ನು ಸಿದ್ಧಪಡಿಸಿಕೊಳ್ಳಲು ಮಾನ್ಯ ಆಯುಕ್ತರು ಅನುಮೋದನೆ ನೀಡಿರುತ್ತಾರೆ. ಅದರಂತೆ, ಸದರಿ ಕಾಮಗಾರಿಗಳಿಗೆ ಇ-ಪ್ರೊಕ್ಯೂರ್‌ಮೆಂಟ್ ಅಡಿಯಲ್ಲಿ ಕಾರ್ಯಪಾಲಕ ಅಭಿಯಂತರರು, ದಕ್ಷಿಣ ವಲಯ, ಬೃ.ನೀ.ಗಾ. ರವರು Tender Notification No: EE/SWD/south/Tend/13/12-13 ದಿನಾಂಕ:07-03-2013 ರಂದು ಟೆಂಡರ್‌ಅನ್ನು ಕರೆದಿರುತ್ತಾರೆ.

ಅದರಂತೆ, ಸದರಿ ಕಾಮಗಾರಿಯನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ, Two Cover System ನಲ್ಲಿ ಅಧಿಸೂಚನೆಯನ್ನು ಹೊರಡಿಸಲಾಗಿತ್ತು. ಸದರಿ ಟೆಂಡರ್‌ಗೆ ಇಬ್ಬರು ಗುತ್ತಿಗೆದಾರರು ಭಾಗವಹಿಸಿ ಸಿಂಧುತ್ವ ಹೊಂದಿರುತ್ತಾರೆ. ಗುತ್ತಿಗೆದಾರರು ಸಲ್ಲಿಸಿದ್ದ ತಾಂತ್ರಿಕ ಬಿಡ್‌ಅನ್ನು ದಿನಾಂಕಃ 13-05-2013ರಂದು ತೆರೆಯಲಾಗಿದೆ. ತಾಂತ್ರಿಕವಾಗಿ ಇಬ್ಬರೂ ಗುತ್ತಿಗೆದಾರರು ಅರ್ಹತೆಯನ್ನು ಹೊಂದಿದ್ದು, ಇದಕ್ಕೆ ಮುಖ್ಯ ಅಭಿಯಂತರರು ಅನುಮೋದನೆ ನೀಡಿದ ನಂತರ ಸದರಿ ಗುತ್ತಿಗೆದಾರರು ಸಲ್ಲಿಸಿದ್ದ ಆರ್ಥಿಕ ಬಿಡ್ಡನ್ನು ದಿನಾಂಕಃ 25-05-2013 ರಂದು ತೆರೆಯಲಾಗಿದ್ದು, ಗುತ್ತಿಗೆದಾರರಾದ ಶ್ರೀ.ಕೃಷ್ಣರೆಡ್ಡಿ (M/s. Ramkrishy Infrastructure Pvt. Ltd.,) ರವರು ಕಡಿಮೆ ದರಗಳನ್ನು ನಮೂದಿಸಿ L1 ಆಗಿರುತ್ತಾರೆ.

### ಆರ್ಥಿಕ ಬಿಡ್ಡಿನ ವಿವರಗಳು ಈ ಕೆಳಕಂಡಂತಿವೆ.

| | | |
|---|---|---|
| 1 | ಮಂಜೂರಾದ ಅಂದಾಜಿನ ದರಗಳಂತೆ ಟೆಂಡರಿಗೆ ಇಡಲಾದ ಮೊತ್ತ (2010-11ನೇ ಸಾಲಿನ ದರಪಟ್ಟಿಯಂತೆ) | ರೂ. 8,44,51,108.60 |
| 2 | ಬಿಡ್ಡುದಾರರಾದ ಶ್ರೀ. ಕೃಷ್ಣರೆಡ್ಡಿ (M/s. Ramkrishy Infrastructure Pvt. Ltd.,) ರವರು ನಮೂದಿಸಿರುವ ಟೆಂಡರ್ ಮೊತ್ತ | ರೂ. 11,37,22,114.69 |
| 3 | ಅಂದಾಜು ಪಟ್ಟಿಯ ದರಗಳನ್ನು ಪರಿಗಣಿಸಿ ಪರಿಷ್ಕರಿಸಿದಾಗ ಟೆಂಡರಿಗೆ ಇಟ್ಟ ಮೊತ್ತದ ಮೇಲಿನ ಶೇಕಡವಾರು ಹೆಚ್ಚಳ | ಶೇ. 34.66% ಹೆಚ್ಚುವರಿ |
| 4 | 2012-13ನೇ ಸಾಲಿನ ದರಪಟ್ಟಿಯ ದರಗಳನ್ನು ಪರಿಗಣಿಸಿ ಪರಿಷ್ಕಸಿದಾಗ ಟೆಂಡರಿಗೆ ಇಟ್ಟ ಮೊತ್ತದ ಮೇಲಿನ ಶೇಕಡಾವಾರು ಹೆಚ್ಚಳ | ಶೇಕಡ.10.18% ಹೆಚ್ಚುವರಿ |

ಶ್ರೀ. ಕೃಷ್ಣರೆಡ್ಡಿ (M/s. Ramkrishy Infrastructure Pvt. Ltd.,) ಗುತ್ತಿಗೆದಾರರು ನಮೂದಿಸಿರುವ ಮೊತ್ತವು ಮಂಜೂರಾದ ಅಂದಾಜಿನಂತೆ ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇಕಡ.34.66% ರಷ್ಟು ಹೆಚ್ಚುವರಿ ಇದ್ದು, 2012-13ನೇ ಸಾಲಿನ ದರಪಟ್ಟಿಯ ದರಗಳಿಗೆ ಹೋಲಿಸಿದಾಗ ಶೇಕಡ 10.18%ರಷ್ಟು ಹೆಚ್ಚುವರಿಯಾಗಿದ್ದು, ಸ್ಪರ್ಧಾತ್ಮಕವಾಗಿರುವುದು ಕಂಡುಬರುತ್ತದೆ. ಮೇಲಿನ ವಿಷಯದ ಹಿನ್ನಲೆಯಲ್ಲಿ, ಶ್ರೀ.ಕೃಷ್ಣರೆಡ್ಡಿ (M/s. Ramkrishy Infrastructure Pvt. Ltd.,) ಗುತ್ತಿಗೆದಾರರು ನಮೂದಿಸಿರುವ ಟೆಂಡರ್ ಮೊತ್ತ ರೂ. 11,37,22,114.69 ಗಳಿಗೆ ಅನುಮೋದನೆ ಕೋರಿ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 02-08-2013ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ:24-10-2013ರ ನಿರ್ಣಯ.

ಶ್ರೀ. ಅಶ್ವಥನಾರಾಯಣ ಗೌಡ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ:24-10-2013ರ ನಿರ್ಣಯವನ್ನು ಒಪ್ಪುವುದು".

ಶ್ರೀ. ಬಿ.ಆರ್.ನಂಜುಂಡಪ್ಪ ರವರು ಶ್ರೀ. ಅಶ್ವಥನಾರಾಯಣ ಗೌಡ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ: 24-10-2013ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

(ಬಿ.ಎಸ್.ಸತ್ಯನಾರಾಯಣ)
ಮಹಾಪೌರರು

C

# ದಿನಾಂಕ:29-10-2013 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯಲ್ಲಿ ತೀರ್ಮಾನವಾದ ಅಧಿಕ ವಿಷಯ

## ವಿಷಯದ ಸಂಖ್ಯೆ : 06 (99)/2013-14

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ದಿನಾಂಕ:31-10-2012 ರಂದು ಪಾಲಿಕೆಯ ಕೇಂದ್ರ ಕಛೇರಿಯ ಸಭಾಂಗಣ-1 ರಲ್ಲಿ ಮೆ॥ ಟೆರ್ರಫರ್ಮ ತ್ಯಾಜ್ಯ ಸಂಸ್ಕರಣಾ ಘಟಕದ ಸುತ್ತಮುತ್ತಲಿನ ಹಳ್ಳಿಗಳ ಗ್ರಾಮಸ್ಥರ ಸಮಸ್ಯೆಗಳ ಬಗ್ಗೆ ರೈತ ಮುಖಂಡರೊಂದಿಗೆ ನಡೆದ ಸಭೆಯಲ್ಲಿ ಚರ್ಚಿಸಿದಂತೆ, ಮೆ॥ ಟೆರ್ರಫರ್ಮ ತ್ಯಾಜ್ಯ ಸಂಸ್ಕರಣಾ ಘಟಕದ ಸುತ್ತಮುತ್ತಲಿನ ಹಳ್ಳಿಗಳಲ್ಲಿ ತೊಂದರೆಗೊಳಗಾದ ಗ್ರಾಮಗಳಲ್ಲಿ ರಸ್ತೆಗಳ ಅಭಿವೃದ್ಧಿ ಕೈಗೊಳ್ಳಲು ತೀರ್ಮಾನಿಸಲಾಗಿರುತ್ತದೆ.

13ನೇ ಹಣಕಾಸು ಆಯೋಗದ ಅಡಿಯಲ್ಲಿ ಘನತ್ಯಾಜ್ಯ ನಿರ್ವಹಣಾ ಮೂಲಭೂತ ಸೌಲಭ್ಯ ಯೋಜನೆಗಳಿಗಾಗಿ ಒಟ್ಟು ರೂ.200.00 ಲಕ್ಷಗಳ ಅನುದಾನ ದೊರಕಿರುತ್ತದೆ. ಸದರಿ ಅನುದಾನದಲ್ಲಿ ರೂ.19.00 ಕೋಟಿಗಳ ಅನುದಾನವನ್ನು ಪಾಲಿಕೆಯ ತ್ಯಾಜ್ಯ ವಿಲೇವಾರಿ ಘಟಕಗಳಾದ ಮಂಡೂರು, ಮಾವಳ್ಳಿಪುರ, ಸುಬ್ಬರಾಯನಪಾಳ್ಯ, ಗುಂಡ್ಲಹಳ್ಳಿಗಳಲ್ಲಿ ಮೂಲ ಸೌಕರ್ಯ ಅಭಿವೃದ್ಧಿ ಕಾಮಗಾರಿಗಳಿಗೆ ಮೀಸಲಿಡಲಾಗಿರುತ್ತದೆ.

ಮಂಜೂರಾದ ಅನುದಾನದ ಪೈಕಿ ಮೆ॥ ಟೆರ್ರಾಫರ್ಮ ಸಂಸ್ಥೆಯ ದೊಡ್ಡಬಳ್ಳಾಪುರ ತಾಲ್ಲೂಕು ಗುಂಡ್ಲಹಳ್ಳಿ ಬಳಿಯ ಘನತ್ಯಾಜ್ಯ ಸಂಸ್ಕರಣಾ ಘಟಕದ ಸುತ್ತಮುತ್ತಲ ಪ್ರದೇಶಗಳಲ್ಲಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು, ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿಯ ವಿಷಯದ ಸಂಖ್ಯೆ:ಸಾಆಸ್ಥಾಸ/75/2012-13 ದಿನಾಂಕ:11-01-2013 ಅನುಮೋದನೆ ಮೇರೆಗೆ, ಸದರಿ ಮೆ॥ ಟೆರ್ರಫರ್ಮ ತ್ಯಾಜ್ಯ ಸಂಸ್ಕರಣಾ ಘಟಕದ ಸಂಪರ್ಕ ರಸ್ತೆಯಾದ ಕೆ.ಎಸ್.ರಸ್ತೆಯಿಂದ ಹಾಲಪ್ಪನಹಳ್ಳಿ ಗ್ರಾಮದವರೆಗೆ ರಸ್ತೆ ಅಭಿವೃದ್ಧಿಪಡಿಸಲು ಅನುಮೋದಿತ ಅಂದಾಜು ಮೊತ್ತ ರೂ.287.00 ಲಕ್ಷಗಳ ಕಾಮಗಾರಿಯ ಟೆಂಡರ್‌ನ್ನು ಇ-ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಅಡಿಯಲ್ಲಿ ದ್ವಿ-ಲಕೋಟೆ ಪದ್ಧತಿಯಡಿಯಲ್ಲಿ ಅಲ್ಪಾವಧಿ ಟೆಂಡರ್ ಆಹ್ವಾನಿಸಿ ಪ್ರಕ್ರಿಯೆಯನ್ನು ಕೈಗೊಳ್ಳಲಾಗಿತ್ತು.

ಟೆಂಡರ್ ಪ್ರಕ್ರಿಯೆ ವಿವರಗಳು ಕೆಳಗಿನಂತಿರುತ್ತವೆ.

- ಟೆಂಡರ್ ಅಧಿಸೂಚನೆ ಸಂಖ್ಯೆ:EE-3/SWM/Tend/02/2012-13 dated:15-02-2013
- ಟೆಂಡರ್ ಸಲ್ಲಿಸಲು ನಿಗಧಿಪಡಿಸಿದ ಕೊನೆಯ ದಿನಾಂಕ:23-02-2013
- ತಾಂತ್ರಿಕ ಬಿಡ್‌ಅನ್ನು ತೆರೆಯಲು ನಿಗಧಿಪಡಿಸಿದ ದಿನಾಂಕ:27-02-2013

ಟೆಂಡರ್ ಪ್ರಕಟಣೆಯನ್ನು ಕನ್ನಡ ಪ್ರಭ ಹಾಗೂ ಟೈಮ್ಸ್ ಆಫ್ ಇಂಡಿಯಾ ಆಂಗ್ಲ ದಿನ ಪತ್ರಿಕೆಗಳಲ್ಲಿ ದಿನಾಂಕ:15-02-2013 ರಂದು ಪ್ರಕಟಿಸಲಾಗಿರುತ್ತದೆ.

ಸದರಿ ಟೆಂಡರ್‌ನಲ್ಲಿ ಬಿಡ್ಡುದಾರರಾದ (1) ಶ್ರೀ. ಕೆ.ಸೋಮಪ್ಪ, 1ನೇ ದರ್ಜೆ ಗುತ್ತಿಗೆದಾರರು, (2) ಶ್ರೀ. ಎಂ.ವೆಂಕಟಾಚಲಪತಿ, 1ನೇ ದರ್ಜೆ ಗುತ್ತಿಗೆದಾರರು ಮತ್ತು (3) ಶ್ರೀ. ರಾಮಯ್ಯ ಲೋಕೋಶ್, 1ನೇ ದರ್ಜೆ ಗುತ್ತಿಗೆದಾರರು ಭಾಗವಹಿಸಿರುತ್ತಾರೆ. ಸದರಿ ಕಾಮಗಾರಿಯ ಟೆಂಡರ್‌ನ ತಾಂತ್ರಿಕ ಬಿಡ್‌ಅನ್ನು ದಿನಾಂಕ: 01-03-2013 ರಂದು ಇ-ಪ್ರೋಕ್ಯೂರ್‌ಮೆಮಟ್ ಪೋರ್ಟಾಲ್ ವೆಬ್‌ಸೈಟ್‌ನಲ್ಲಿ ತೆರೆದು ಪರಿಶೀಲಿಸಲಾಗಿ, ಶ್ರೀ. ಕೆ.ಸೋಮಪ್ಪ, ಶ್ರೀ. ಎಂ.ವೆಂಕಟಾಚಲಪತಿ ಮತ್ತು ಶ್ರೀ. ರಾಮಯ್ಯ ಲೋಕೇಶ್ ರವರ ತಾಂತ್ರಿಕ ಷರತ್ತುಗಳನ್ನು ಪೂರೈಸಿದ್ದು, ಅರ್ಹರಾದ ಹಿನ್ನಲೆಯಲ್ಲಿ, ಸದರಿಯವರ ಆರ್ಥಿಕ ಬಿಡ್‌ಅನ್ನು ದಿನಾಂಕ: 13-03-2013 ರಂದು ತೆರೆಯಲಾಗಿರುತ್ತದೆ.

............................2

C



ಟೆಂಡರ್ ಪ್ರಕ್ರಿಯೆ ವಿವರಗಳು ಕೆಳಗಿನಂತಿರುತ್ತವೆ.

- ಅಂದಾಜು ಮೊತ್ತ - ರೂ.287.00 ಲಕ್ಷಗಳು
- ಆಡಳಿತಾತ್ಮಕ ಮಂಜೂರಾತಿ ಸಂಖ್ಯೆ - ಮು.ಅ/ಘ.ತ್ಯಾ.ನಿ-1/ಆ.ಮಂ/76/12-13 ದಿ: 14-02-2013
- ತಾಂತ್ರಿಕ ಮಂಜೂರಾತಿ ಸಂಖ್ಯೆ - ಮು.ಅ/ಘ.ತ್ಯಾ.ನಿ-1/ತಾ.ಮಂ/74/12-13 ದಿ: 14-02-2013
- ಭದ್ರತಾ ಠೇವಣಿ ಮೊತ್ತ - ರೂ.4,30,500/-
- ಟೆಂಡರ್‌ಗಿಟ್ಟ ಮೊತ್ತ - ರೂ.2,82,43,264/-

ಸದರಿ ಟೆಂಡರ್‌ನಲ್ಲಿ ಭಾಗವಹಿಸಿರುವ ಅರ್ಹ ಬಿಡ್ಡುದಾರರು ನಮೂದಿಸಿರುವ ದರಗಳು ಹಾಗೂ ಆರ್ಥಿಕ ವಿವರಗಳು ಕೆಳಗಿನಂತಿರುತ್ತವೆ.

| ಕ್ರ ಸಂ. | ಬಿಡ್ಡುದಾರರ ಹೆಸರು | ನಮೂದಿಸಿರುವ ಮೊತ್ತ ರೂ.ಗಳಲ್ಲಿ | ಅನುಮೋದಿತ ಟೆಂಡರ್‌ಗಿಟ್ಟ ಮೊತ್ತಕ್ಕೆ (2,82,43,264) ಹೋಲಿಸಿದಲ್ಲಿ ಶೇಕಡವಾರು | ಚಾಲ್ತಿಯಲ್ಲಿರುವ **Schedule rates** ಮೊತ್ತ ರೂ.2,90,57,896/- ಕ್ಕೆ **(As on date of tender submission)** ಹೋಲಿಸಿದಲ್ಲಿ ಶೇಕಡವಾರು ಹೆಚ್ಚು/ಕಡಿಮೆ |
|---|---|---|---|---|
| 1 | ಶ್ರೀ.ಕೆ.ಸೋಮಪ್ಪ, 1ನೇ ದರ್ಜೆ ಗುತ್ತಿಗೆದಾರರು | 2,65,50,940/- | -5.99% ಕಡಿಮೆ | -8.63% ಕಡಿಮೆ |
| 2 | ಶ್ರೀ.ಎಂ.ವೆಂಕಟಾಚಲಪತಿ, 1ನೇ ದರ್ಜೆ ಗುತ್ತಿಗೆದಾರರು | 2,73,96,295/- | -3.00% ಕಡಿಮೆ | -5.72% ಕಡಿಮೆ |
| 3 | ಶ್ರೀ.ರಾಮಯ್ಯ ಲೋಕೇಶ್, 1ನೇ ದರ್ಜೆ ಗುತ್ತಿಗೆದಾರರು | 2,97,00,500/- | 5.16 ಹೆಚ್ಚು | 2.21 ಹೆಚ್ಚು |

ಸದರಿ ಟೆಂಡರ್‌ನಲ್ಲಿ ಭಾಗವಹಿಸಿರುವ ಮೂವರು ಅರ್ಹ ಬಿಡ್ಡುದಾರರ ಪೈಕಿ ಶ್ರೀ. ಕೆ.ಸೋಮಪ್ಪ, 1ನೇ ದರ್ಜೆ ಗುತ್ತಿಗೆದಾರರು ರವರು ನಮೂದಿಸಿರುವ ದರಗಳು ಕಡಿಮೆ ಇದ್ದು, L1 ಗುತ್ತಿಗೆದಾರರಾಗಿರುತ್ತಾರೆ.

ಮೇಲೆ ವಿವರಿಸಿರುವ ಹಿನ್ನಲೆಯಲ್ಲಿ, ಸದರಿ ಇ-ಪ್ರೊಕ್ಯೂರ್‌ಮೆಂಟ್ ಅಡಿಯ ದ್ವಿ-ಲಕೋಟೆ ಪದ್ಧತಿಯ ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸಿರುವ ಅರ್ಹ ಗುತ್ತಿಗೆದಾರರಾದ ಶ್ರೀ. ಕೆ.ಸೋಮಪ್ಪ, 1ನೇ ದರ್ಜೆ ಗುತ್ತಿಗೆದಾರರು, ನಮೂದಿಸಿರುವ ಮೊತ್ತ ರೂ.2,65,50,940/- ಗಳನ್ನು 2012-13ನೇ ಸಾಲಿನ ಚಾಲ್ತಿಯಲ್ಲಿರುವ ಲೋಕೋಪಯೋಗಿ ದರಪಟ್ಟಿಗೆ ಹೋಲಿಸಿದಲ್ಲಿ ಶೇ.8.63 ರಷ್ಟು ಕಡಿಮೆ ದರಗಳ ಟೆಂಡರ್ ಬಗ್ಗೆ ಅನುಮೋದನೆ ಕೋರಿ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ:05-08-2013ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿಯ ದಿನಾಂಕ:27-09-2013ರ ನಿರ್ಣಯ.

ಶ್ರೀ. ಅಶ್ವಥನಾರಾಯಣ ಗೌಡ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿಯ ದಿನಾಂಕ:27-09-2013ರ ನಿರ್ಣಯವನ್ನು ಒಪ್ಪುವುದು".

ಶ್ರೀ. ಬಿ.ಆರ್.ನಂಜುಂಡಪ್ಪ ರವರು ಶ್ರೀ. ಅಶ್ವಥನಾರಾಯಣ ಗೌಡ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿಯ ದಿನಾಂಕ:27-09-2013ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

(ಬಿ.ಎಸ್.ಸತ್ಯನಾರಾಯಣ)
ಮಹಾಪೌರರು